ಜನಪದ ವಿಚಾರ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೦ ಏಪ್ರಿಲ್-೨೦೧೦ ಸಂಚಿಕೆ-೯



ಅಂದಾಜು ಪತ್ರ
ಆಕಾಶದಲ್ಲಿಯ ನಕ್ಷತ್ರ!

ಜನಪದ ವಿಚಾರದಲ್ಲಿ

ಏಪ್ರಿಲ್-೨೦೧೦

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಏಪ್ರಿಲ್- ೨೦೧೧
ಸಂಪುಟ - ೧೧
ಸಂಚಿಕೆ - ೯

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎08236 316344

e-mail : janapada@yahoo.com
web: janapada.net

ಸ್ವಾಗತ



ಬರುತಿದೆ ಹೊಸ ವರ್ಷ
ತರುತಿದೆ ನವ ಸಂದೇಶ
ವಿಕೃತಿಯೋ ಪ್ರಕೃತಿಯೋ
ಆ ಹೆಸರುಗಳಿಂದೇನು?
ಆ ಹೆಸರು ಇಟ್ಟವರು
ನಾವೇ ಅಲ್ಲವೇನು?
ಮನೋಬಲ ಇದ್ದವರಿಗೆ
ದೈವಬಲವೂ ಕೂಡೀತು;
ವಿಕೃತ್ಯವೇ ಸುಕೃತಿಯಾದೀತು
ಸಂದೇಶವನ್ನಾಲಿಸ ಬನ್ನಿ.
ಹೊಸ ವರ್ಷಕೆ ಸ್ವಾಗತ ಎನ್ನಿ.
ಲೋಕಕೆ ಶಾಂತಿಯ ತರುವೆಂದನ್ನಿ.
ಬನ್ನಿ, ಬನ್ನಿ.

– ಶಾರದಾ ಜಡೆ

ವಿಚಾರ ದೀಪ್ತಿ

ಭಾರತದ ಇಂದಿನ ಸ್ಥಿತಿಗೆ ಒಂದು ಚಿತ್ರಣ ಕೊಟ್ಟು ಮುಗಿಸುತ್ತೇನೆ. ತುಂಬಾ ಹಿಂದೆ ಹಳ್ಳಿಯೊಂದರಲ್ಲಿ ದಲಿತರಿಗೆ ಪ್ರವೇಶವಿಲ್ಲದ ಕಾರಣಕ್ಕೆ ಗಲಾಟೆಯಾಗಿ ಅಲ್ಲಿಗೆ ಹೋಗಿದ್ದೆವು. ಹೋಗಿ ನೋಡಿದರೆ ಆ ಹೋಟೆಲ್ ಜಗಲಿ ಮೇಲೆ ತೆಂಗಿನ ಗರಿ ಕಟ್ಟಿದ ಒಂದು ಕತ್ತಲು ತುಂಬಿದ ನೆರಕೆಯಾಗಿತ್ತು. ಅಲ್ಲಿ ನೊಣಗಳ ಸಾಮ್ರಾಜ್ಯವಿತ್ತು. ಬಚ್ಚಲು ಪಕ್ಕದಲ್ಲೇ ಹರಿಯುತ್ತ ಮೂಗು ಮುಚ್ಚಿಕೊಂಡು ತಿನ್ನಬೇಕಿತ್ತು. ಈ ಹೋಟೆಲ್ ಪ್ರವೇಶಕ್ಕೆ ದಲಿತರು ಹಾತೊರೆಯುತ್ತಿದ್ದರು. ಆ ದೃಶ್ಯ ನೋಡಿದ ನನ್ನ ಜೊತೆಗಿದ್ದ ಶ್ರೀ ಕೃಷ್ಣ ಆಲನಹಳ್ಳಿ "ಅಯ್ಯೋ ಮಾದೇವ ಇಲ್ಲಿ ದಲಿತರು ಏನನ್ನೂ ತಿನ್ನದಿದ್ದರೇನೇ ಆರೋಗ್ಯವಲ್ಲವೆ?" ಎಂದಿದ್ದರು. ಅದಕ್ಕೆ ನಾನು "ಪ್ರವೇಶ ಕೇಳುತ್ತಿರುವುದು ಮನಸ್ಸಿನ ಒಳಕ್ಕೆ" ಎಂದಿದ್ದೆ.

ಭಾರತದ ಸ್ಥಿತಿಯೂ ಹೆಚ್ಚು ಕಮ್ಮಿ ಆ ಹೋಟೆಲಿನ ಕಥೆಯಂತೆಯೇ ಇದೆ. ಇಲ್ಲಿ ಕೊಳಕುತನವಿದೆ. ಅನಾರೋಗ್ಯವಿದೆ. ಬಡತನವಿದೆ. ಅಜ್ಞಾನವು ತುಂಬಿದೆ. ಸಾಲದೆಂಬಂತೆ ಭಾರತದ ಮೇಲೆ ದಾಳಿ ಮಾಡಿ ಸಂಪತ್ತು ದೋಚಿಕೊಂಡು ಹೋಗುತ್ತಿದ್ದ ಆ ದಾಳಿಕೋರರು ಆ ಕಾಲಮಾನದಲ್ಲಿ ಏನಾದರೂ ಹೆಚ್ಚು ಕಮ್ಮಿ ಮಾಡಿ ಹುಟ್ಟಿದ ಸಂತಾನವೇನೋ ಎಂಬಂತೆ ಸೆಜ್ ರಿಯಲ್ ಎಸ್ಟೇಟ್ ಹೆಸರಲ್ಲಿ ಭೂಮಿಯ ಹೊರಮೈಯನ್ನೂ ಮತ್ತು ಗಣಿಗಾರಿಕೆಯ ಹೆಸರಲ್ಲಿ ಭೂಮಿಯ ಒಳಮೈಯನ್ನೂ ದೋಚುತ್ತಿದ್ದಾರೆ. ಈ ನವ ದಾಳಿಕೋರರು ಮತದಾರರನ್ನೂ, ಶಾಸಕರನ್ನೂ ಕೊಂಡುಕೊಳ್ಳಬಹುದಾದ ವಸ್ತುವಾಗಿಸಿಬಿಟ್ಟಿದ್ದಾರೆ.

ಈಗ ಗಣತಂತ್ರ ವ್ಯವಸ್ಥೆಗೇ ಗಂಡಾಂತರ ಎದುರಾಗಿದೆ. ಇಂತಹ ಭೀಕರ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಭಾರತವು ಸ್ವಾತಂತ್ರ್ಯ ಪಡೆದ ನಂತರ ರಾಜರ ಆಳ್ವಿಕೆ ಕೊನೆಗೊಳಿಸಿದ್ದು, ವಯಸ್ಕರ ಮತದಾನ ಪದ್ಧತಿ ತಂದದ್ದು, ಭೂ ಸುಧಾರಣೆ, ಮೀಸಲಾತಿ ಇತ್ಯಾದಿ ಈ ನೆಲದಲ್ಲಿ ಸಂಭವಿಸಿರುವುದು ಸಾಮಾನ್ಯ ಸಂಗತಿಗಳೇನಲ್ಲ. ಆದರೆ ಭಾರತದಲ್ಲಿ ಬುದ್ಧ, ವಚನಕಾರರ ಮಹೋನ್ನತ ಪರಂಪರೆಯ ಬೆಳಕೂ ಇದೆ. ಅವರು ಉಸಿರಾಡಿದ ಗಾಳಿ, ಅವರಿಟ್ಟ ಹೆಜ್ಜೆ ಗುರುತುಗಳೂ ಇಲ್ಲಿವೆ. ಆ ಹೆಜ್ಜೆಗಳನ್ನು ಗುರುತಿಸಿ ನಾವು ಹೆಜ್ಜೆ ಇಟ್ಟರೆ ಆ ಹವಾದಲ್ಲಿ ಸಂವಿಧಾನದ ಆಸೆಗಳು ಆಗ ಕೈಗೂಡಲೂ ಬಹುದು.

– *ದೇವನೂರು ಮಹಾದೇವ*

ಅಂದಾಜು ಪತ್ರ, ಆಕಾಶದಲ್ಲಿಯ ನಕ್ಷತ್ರ!

- *ಸುರೇಂದ್ರ ಕೌಲಗಿ*

ಅರ್ಥಶಾಸ್ತ್ರವೆಂದರೆ ಆರ್ಥಿಕ ಸಂಗತಿಗಳ ಬಗ್ಗೆ ಅನ್ಯರ ನಂಬಿಕೆಗಳ ಕುರಿತಾದ ಅಪನಂಬಿಕೆಗಳ ಒಂದು ಸಂಚಯ – ರೋಬಿ ರಾಜನ್

ಮಾರ್ಚ್ ಮಾಹೆ ಅಂದಾಜು ಪತ್ರಗಳ ಸುಗ್ಗಿಯ ಕಾಲ. ಕೇಂದ್ರ ಮತ್ತು ರಾಜ್ಯಗಳಲ್ಲಿ ಆಯಾ ಹಣಕಾಸಿನ ಮಂತ್ರಿಗಳು ರಾಜಕಾರಣಕ್ಕೆ ಅನುಕೂಲವಾಗುವಂತೆ ಶಾಸನ ಸಭೆಗಳಲ್ಲಿ ಆಯಾ ವರ್ಷದ ಅಂದಾಜು ಪತ್ರಗಳನ್ನು ಮಂಡಿಸುತ್ತಾರೆ. ತಮ್ಮ ಅಂದಾಜು ಪತ್ರ ಮಂಡನೆಯ ಭಾಷಣ ನೀರಸವಾಗದಿರಲೆಂದೋ ಅಥವಾ ತಮ್ಮಲ್ಲಿ ಅಳಿದುಳಿದಿರುವ ವಿದ್ವತ್ತನ್ನೋ, ಸಾಹಿತ್ಯಕ ಅಭಿರುಚಿಯನ್ನು ಪ್ರದರ್ಶಿಸುವುದಕ್ಕೋ ಏನೊ ಎಂಬಂತೆ ತಮ್ಮ ಭಾಷಣದ ಮಧ್ಯದಲ್ಲಿ ಕವಿಗಳ ಸಾಲನ್ನು ಹೇಳುತ್ತಾರೆ. ಶಾಸನ ಸಭೆಗಳ ಪ್ರೇಕ್ಷಕರ ಅಂಕಣ ಮಂತ್ರಿಗಳ ಅಭಿಮಾನಿ ಬಳಗದವರಿಂದ ತುಂಬಿರುತ್ತದೆ; ಮಾಧ್ಯಮದವರಂತೂ ತಪ್ಪದೇ ಬಂದಿರುತ್ತಾರೆ. ಸುಮಾರು ಎರಡು ಗಂಟೆಗಳ ಕಾಲ ಸದಸ್ಯರು ಲಘು ಶಿಕ್ಷೆಯನ್ನು ಅನುಭವಿಸುತ್ತಾರೆ. ಅಂದಾಜು ಪತ್ರ ಕೇವಲ ಅಂಕಿ ಸಂಖ್ಯೆಗಳಿಂದ ತುಂಬಿರುವುದರಿಂದ ಮತ್ತು ಅರ್ಥಶಾಸ್ತ್ರಕ್ಕೆ ಸೇರಿದ ಪಾರಿಭಾಷಿಕ ಶಬ್ದಗಳಿಂದ ತುಂಬಿರುವುದರಿಂದ ಅಂದಾಜು ಪತ್ರದ ಭಾಷಣ ಎಷ್ಟು ಸದಸ್ಯರಿಗೆ ನಿಜವಾಗಿಯೂ ಅರ್ಥವಾಗಿರುತ್ತದೆ ಎಂಬುದನ್ನು ಸರ್ವೇಕ್ಷಣ ಮಾಡಿ ತಿಳಿಯಬೇಕಾದ ಕುತೂಹಲಕಾರಿ ಅಂಶವಾಗಿರುತ್ತದೆ. ಆದರೆ ಇದು ವರೆಗೆ ಅಂತಹ ಸರ್ವೇಕ್ಷಣವನ್ನು ಯಾವುದೇ ಆರ್ಥಿಕ ಅಧ್ಯಯನ ಸಂಸ್ಥೆ ಮಾಡಿರುವ ಬಗ್ಗೆ ವರದಿಯಾಗಿಲ್ಲ. ಇಂಥ ಸರ್ವೇಕ್ಷಣ ನಡೆಯದಿದ್ದರೂ ಅಂದಾಜು ಪತ್ರ ಮಂಡನೆಯ ನಂತರ ನಡೆಯುವ ಚರ್ಚೆಯಿಂದ ಶಾಸಕರಿಗೆ ಅಂದಾಜು ಪತ್ರ ಅರ್ಥವಾಗಿಲ್ಲವೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಶಾಸಕರಿಗೆ ಅಂದಾಜು ಪತ್ರ ಅರ್ಥವಾಗದಿರುವುದಕ್ಕೆ ಕಾರಣ ಅಂದಾಜು ಪತ್ರ ಮಂಡಿಸುವ ಅರ್ಥಮಂತ್ರಿಗೇ ತಾನು ಯಾವ ಪ್ರಕಾರದ ಅಂದಾಜು ಪತ್ರ ಮಂಡಿಸುತ್ತಿದ್ದೇನೆ ಎಂಬುದೇ ಗೊತ್ತಿರುವುದಿಲ್ಲ! ಈ ಮೊದಲು ಮಂಡಿಸಿದ್ದ ಅಂದಾಜು ಪತ್ರಗಳ ಗತಿ ಏನಾಗಿತ್ತು, ಖಜಾನೆಯಲ್ಲಿ ಹಣ ಇದೆಯೋ ಇಲ್ಲವೋ, ಹಣ ಇಲ್ಲದಿದ್ದರೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಕ್ರಮ ಸಾಮಾಜಿಕ ನ್ಯಾಯವುಳ್ಳದ್ದಾಗಿದೆಯೇ, ಹಣದುಬ್ಬರ ಏರುತ್ತಿದೆಯೇ, ಇಳಿಯುತ್ತಿದೆಯೇ, ರಾಜ್ಯದ ಪ್ರಕೃತಿ ಸಂಪತ್ತಿನ ದೋಚುವಿಕೆಗೆ ಮಿತಿ ಇದೆಯೇ ಇಲ್ಲವೇ, ಸಮಾಜದಲ್ಲಿಯ ಯಾವ ವರ್ಗ ಶ್ರೀಮಂತವಾಗುತ್ತಿದೆ, ಯಾವ ವರ್ಗ ದರಿದ್ರವಾಗುತ್ತಿದೆ, ಗೋಚರ ನಿರುದ್ಯೋಗತನದ ಪ್ರಮಾಣವೆಷ್ಟು, ಅಗೋಚರ ನಿರುದ್ಯೋಗದ ಪ್ರಮಾಣವೆಷ್ಟು, ಕಳೆದಬಾರಿಯ ಅಂದಾಜು ಪತ್ರ ತನ್ನ ಗುರಿಯನ್ನು ಸಾಧಿಸಿದ್ದುದರ ಪ್ರಮಾಣವೆಷ್ಟು,

ಆ ಪ್ರಮಾಣ ನಿರೀಕ್ಷಿಸಿದಂತಿರದಿದ್ದರೆ ಅದಕ್ಕೆ ಕಾರಣಗಳೇನು, ಆ ಅಡ್ಡಿ ಆತಂಕದ ಕಾರಣಗಳನ್ನು ಸದ್ಯದ ಅಂದಾಜು ಪತ್ರವನ್ನು ಮಂಡಿಸುವ ಕಾಲಕ್ಕೆ ನಿವಾರಣೆ ಮಾಡಲಾಗಿದೆಯೇ, ಅಂದಾಜು ಪತ್ರ ಸುಖೀ ರಾಜ್ಯವನ್ನು ನಿರ್ಮಿಸಲಿದೆಯೇ, ಅಸುಖೀ ರಾಜ್ಯವನ್ನು ನಿರ್ಮಿಸಲಿದೆಯೇ, ಸಮಾಜವಾದಿ ಸಮಾಜವನ್ನು ನಿರ್ಮಿಸಲಿದೆಯೇ, ಬಂಡವಾಳಶಾಹಿ ಸಮಾಜವನ್ನು ನಿರ್ಮಿಸಲಿದೆಯೇ, ಧರ್ಮ ನಿರಪೇಕ್ಷ ಸಮಾಜವನ್ನು ನಿರ್ಮಿಸಲಿದೆಯೇ, ಧರ್ಮಾಂಧ ಸಮಾಜವನ್ನು ನಿರ್ಮಿಸಲಿದೆಯೇ, ಅಭಿವೃದ್ಧಿಯನ್ನೇ ಗುರಿಯಾಗಿಟ್ಟುಕೊಂಡಿರುವ ಅಂದಾಜು ಪತ್ರಕ್ಕೆ ಸ್ವದೇಶಿ ಭಾವನೆಯ ಲೇಪವಿದೆಯೇ, ವಿದೇಶಿ ಭಾವನೆಯ ಲೇಪವಿದೆಯೇ ಇತ್ಯಾದಿ ಮೂಲಭೂತ ಆರ್ಥಿಕ ತತ್ವಗಳಿಗೆ ಬದ್ಧವಾಗಿರದ ಅಂದಾಜು ಪತ್ರ ಶಾಸಕರಿಗಾಗಲೀ, ತಜ್ಞರಿಗಾಗಲೀ, ಸಾಮಾನ್ಯ ಜನರಿಗಾಗಲೀ, ಅಧಿಕಾರಶಾಹಿಗಾಗಲೀ ಅರ್ಥವಾಗದ ವಿಷಯವಾಗುತ್ತದೆ. ಯಾರು ಹೇಗೆ ಬೇಕಾದರೂ ಅರ್ಥೈಸಬಹುದು. ಅಂದಾಜು ಪತ್ರ ಮಂಡನೆಯಾದ ನಂತರ ಸರ್ಕಾರ ಆ ಪತ್ರವನ್ನು ಶೀತಾಗಾರಕ್ಕೆ ತಳ್ಳಿ ನಂತರ ತನಗೆ ಅನುಕೂಲವಾಗುವಂತೆ, ರಾಜಕಾರಣದ ಅಗತ್ಯಕ್ಕೆ ತಕ್ಕಂತೆ, ಮತದಾರರನ್ನು ಓಲೈಸಲು ಸಹಾಯಕವಾಗುವಂತೆ, ಶಾಸಕರನ್ನು ತನ್ನ ಬುಟ್ಟಿಯೊಳಗೆ ಇಟ್ಟುಕೊಳ್ಳಲು ಸಾಧ್ಯವಾಗುವಂತೆ ಹಣವನ್ನು ಖರ್ಚುಮಾಡುತ್ತಾ ಹೋಗಬಹುದು. ಅಂದಾಜು ಪತ್ರದಲ್ಲಿ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ವಿಧಿಸಲಾದ ವಿವಿಧ ಬಗೆಯ ತೆರಿಗೆಗಳು ಭ್ರಷ್ಟಾಚಾರದ ಕಾರಣದಿಂದ ಸೋರಿಹೋಗುತ್ತಿರುತ್ತದೆ. ಆದಾಗ್ಯೂ ಸರ್ಕಾರ ಅಂದಾಜು ಪತ್ರದ ಚೌಕಟ್ಟಿನ ಹೊರಗೆ ಹೊಸ ಹೊಸ ಯೋಜನೆಗಳನ್ನು, ಹೊಸ ಹೊಸ ಅನುದಾನಗಳನ್ನು ಮುಂದಿನ ವರ್ಷದ ಅಂದಾಜು ಪತ್ರ ಮಂಡನೆಯವರೆಗೂ ಮಾಡುತ್ತಾಹೋಗುತ್ತಿರುತ್ತದೆ. ಸರ್ಕಾರದ ಹಣಕಾಸಿನ ಈ ವಿಚಿತ್ರ ಆಟ ಯಾರಿಗೆ ತಾನೆ ಅರ್ಥವಾಗಲು ಸಾಧ್ಯ? ಭಗವಂತನಿಗೂ ಅರ್ಥವಾಗುತ್ತದೋ ಇಲ್ಲವೋ ಗೊತ್ತಿಲ್ಲ. ಗಾಂಧೀ ಅರ್ಥಶಾಸ್ತ್ರಜ್ಞ ಮತ್ತು ಶಾಶ್ವತ ಅರ್ಥಶಾಸ್ತ್ರದ ತಜ್ಞ ಜೆ.ಸಿ.ಕುಮಾರಪ್ಪನವರು ಅಂದಾಜು ಪತ್ರವನ್ನು ಅರ್ಥಮಾಡಿಕೊಂಡಿರುವ ಬಗ್ಗೆ ಶಾಸಕರ ಪರೀಕ್ಷೆ ಮಾಡಿದ್ದರೆ ಅವರೆಲ್ಲರೂ ನಿಶ್ಚಿತವಾಗಿ ಅನುತ್ತೀರ್ಣರಾಗಿರುತ್ತಿದ್ದರು.

ಪದಾರ್ಥಗಳ ಮೇಲಿನ ಬೆಲೆಯನ್ನೇ ನಿಯಂತ್ರಣಕ್ಕೆ ಇಟ್ಟುಕೊಳ್ಳಲಾರದ ಸರ್ಕಾರ ಯಾವ ಲೆಕ್ಕಾಚಾರದ ಮೇಲೆ ಅಂದಾಜು ಪತ್ರವನ್ನು ತಯಾರಿಸುತ್ತದೆ ಎಂಬುದು ನಿಗೂಢವಾದ ವಿಷಯವಾಗಿದೆ. ಈಗ ಉದಾಹರಣೆಗೆ ಬೃಹತ್ ಬೆಂಗಳೂರಿನ ಮೂಲಭೂತ ವ್ಯವಸ್ಥೆಗೆ ಸಂಬಂಧಿಸಿದಂತೆ ಅಂದಾಜು ಪತ್ರದಲ್ಲಿಯ ವಿಷಯವನ್ನು ಗಮನಿಸೋಣ. ೨೦೦೯-೧೦ನೇ ಸಾಲಿನ ಅಂದಾಜು ಪತ್ರದಲ್ಲಿ ಯಡಿಯೂರಪ್ಪನವರು ೫ಸಾವಿರ ಕೋಟಿ ರುಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆ. ಈ ಮೂಲಭೂತ ಸೌಕರ್ಯದಲ್ಲಿ ಸ್ಥಳೀಯ ರೈಲು ಮಾರ್ಗಗಳನ್ನು ನಿರ್ಮಿಸುವುದೂ ಒಂದು ಯೋಜನೆಯಾಗಿದೆ. ಈ ಸ್ಥಳೀಯ ರೈಲು ಮಾರ್ಗಗಳನ್ನು ನಿರ್ಮಿಸಲು ಆಗಬಹುದಾದ ಖರ್ಚಿನ ಶೇ.೫೦ ಭಾಗವನ್ನು ರಾಜ್ಯ ಸರ್ಕಾರ ಭರಿಸುವುದಾಗಿ ತಿಳಿಸಿದ್ದಾರೆ. ಈಗಿನ ಹಣದುಬ್ಬರ ಹಾಗೂ ಸಿಮೆಂಟ್, ಕಬ್ಬಿಣ, ಡೀಸಲ್, ಪೆಟ್ರೋಲ್ ಮತ್ತು ದಿನಗೂಲಿಯ ಬೆಲೆ ದಿನೇ ದಿನೇ ಏರುತ್ತಿರುವ ಸಂಗತಿಯನ್ನು ಗಮನಕ್ಕೆ

ತೆಗೆದುಕೊಂಡರೆ ಅಂದಾಜು ಪತ್ರದಲ್ಲಿ ತಿಳಿಸಲಾದ ರೈಲು ಮಾರ್ಗಗಳ ನಿರ್ಮಾಣ ನಿರ್ದಿಷ್ಟ ಹಣದ ಮೊತ್ತದಲ್ಲಿ ಸಾಧ್ಯವೇ? ಅದು ಸಾಧ್ಯವಾಗದಿದ್ದರೆ ಅಂದಾಜು ಪತ್ರದ ಮೂಲಕ ಘೋಷಿಸಲಾದ ಆ ರೈಲುಮಾರ್ಗ ಯೋಜನೆಯ ಗತಿಯೇನು? ಇದೇ ಸ್ಥಿತಿ ಘೋಷಿತ ಅನೇಕ ಯೋಜನೆಗಳದ್ದಾಗಿರುತ್ತದೆ.

ಈಗ ಅರ್ಥವ್ಯವಸ್ಥೆಯ ದೃಷ್ಟಿಯಿಂದ ಮೊಟ್ಟ ಮೊದಲು ಆಗಬೇಕಿರುವುದು ಹಣದುಬ್ಬರದ ನಿಯಂತ್ರಣ. ಹಣದುಬ್ಬರದ ನಿಯಂತ್ರಣ ಆಗುವವರೆಗೂ ಅಂದಾಜು ಪತ್ರದಲ್ಲಿಯ ಘೋಷಿತ ಯೋಜನೆಗಳು, ಅನುದಾನಗಳು, ಭರವಸೆ ಇತ್ಯಾದಿಗಳು ಕೈಗೂಡುವುದಿಲ್ಲ. ಆಗ ಜನರಲ್ಲಿ ಸರ್ಕಾರದ ಬಗ್ಗೆ ಇರಬೇಕಾದ ವಿಶ್ವಸನೀಯತೆ ಕಳೆದು ಹೋಗುತ್ತದೆ. ಆಗ ಸಮಾಜದಲ್ಲಿಯ ಎಲ್ಲ ಪ್ರಕಾರದ ಮೌಲ್ಯಗಳು ತಲೆಮರೆಸಿಕೊಳ್ಳುತ್ತವೆ. ಸ್ವಾತಂತ್ರ್ಯ ಬಂದಾಗಿನಿಂದಲೂ ಅಂದಾಜು ಪತ್ರಗಳ ತಯಾರಿಕೆ, ಅವುಗಳ ಮಂಡನೆ, ತದನಂತರ ಅವುಗಳ ಉಲ್ಲಂಘನೆ, ಹಣದುಬ್ಬರದ ಏರಿಕೆ ಇತ್ಯಾದಿಗಳು ಏಕಪ್ರಕಾರವಾಗಿ ನಡೆದುಕೊಂಡು ಬಂದಿವೆ. ಫಲಸ್ವರೂಪವಾಗಿ ದೇಶ ತನ್ನ ಕಂಠದವರೆಗೆ ಸಾಲದಲ್ಲಿ ಮುಳುಗಿದೆ. ಇದುವರೆಗೆ ಮಂಡಿತವಾಗಿರುವ ಯಾವ ಅಂದಾಜು ಪತ್ರಗಳೂ ಮೂಲ ಸಾಲವನ್ನು ತೀರಿಸುವತ್ತ ಪ್ರಯತ್ನ ಮಾಡಿಲ್ಲ. ಮೂಲ ಸಾಲವನ್ನು ತೀರಿಸುವ ಪ್ರಯತ್ನವು ಅರ್ಥಶಾಸ್ತ್ರಕ್ಕೆ ವಿರುದ್ಧತತ್ವವೆಂದೇ ಭಾವಿಸಲಾಗಿದೆ. ಸಾಲ ಮಾಡಿ ಅಭಿವೃದ್ಧಿ ಸಾಧಿಸಬೇಕು ಮತ್ತು ಉಂಟಾದ ಸಾಲವನ್ನು ಮರುಸಾಲವೆತ್ತಿ ತೀರಿಸಬೇಕು ಎಂಬುದೇ ಅರ್ಥನೀತಿಯಾಗಿರುತ್ತದೆ. ಆದುದರಿಂದ ದೇಶ ಸಾಲದ ಸುಳಿಯಿಂದ ಹೊರಬರಲು ಸ್ವಾತಂತ್ರ್ಯಾನಂತರದ ೬೫ ವರ್ಷಗಳ ನಂತರವೂ ಸಾಧ್ಯವಾಗಿಲ್ಲ. ಬದಲಿಗೆ ಇನ್ನೂ ಹೆಚ್ಚಿನ ವೇಗದ ಸುಳಿಯಲ್ಲಿ ಸಿಕ್ಕಿಕೊಳ್ಳುತ್ತಿದೆ. ಅಲ್ಲದೆ, ಕಾಲ ಉರುಳಿದಂತೆ ದೇಶವು ತನ್ನ ಆರ್ಥಿಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿದೆ. ಅಮೇರಿಕದ ಆಣತಿಯಂತೆ ಭಾರತ ಅಫಘಾನಿಸ್ತಾನದ ರಾಜ-ಕಾರಣದ ಕಾರಸ್ಥಾನದಲ್ಲಿ ಸೇರಿಕೊಂಡು, ಆ ದೇಶದಲ್ಲಿಯ ಅಶಾಂತ ಪರಿಸ್ಥಿತಿಯ ಮಧ್ಯೆಯೂ ಆ ದೇಶದ ನಿರ್ಮಾಣ ಕಾರ್ಯಕ್ಕಾಗಿ ಭಾರತ ತನ್ನ ಆರ್ಥಿಕ ಸ್ಥಿತಿ ಹದಗೆಟ್ಟಿದ್ದರೂ ಕೋಟ್ಯಂತರ ಡಾಲರ್ ಹಣವನ್ನು ಅನುದಾನವಾಗಿ ಕೊಡುತ್ತಿದೆ. ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ತನ್ನ ವಿದೇಶಾಂಗ ನೀತಿ ಹೇಗೆ ಪರಿಣಾಮ ಬೀರುತ್ತಿದೆ ಎಂಬುದು ಅಂದಾಜು ಪತ್ರ ತಯಾರಿಕೆಯ ಪರಿಗಣನೆಯ ಅಂಶವೇ ಆಗಿರುವುದಿಲ್ಲ. ಅದೇ ರೀತಿ ಪಾಕಿಸ್ತಾನದೊಂದಿಗಿನ ಸಂಬಂಧದ ಪರಿಣಾಮ. ಪಾಕಿಸ್ತಾನ ಘಜನಿ ಕ್ಷಿಪಣಿ ಪ್ರಯೋಗ ಮಾಡಿದರೆ ಮಾರನೆ ದಿನವೇ ಭಾರತ ಅಗ್ನಿ ಕ್ಷಿಪಣಿ ಪ್ರಯೋಗ ಮಾಡುತ್ತದೆ. ಕ್ಷಿಪಣಿಗಳ ಈ ಪ್ರಯೋಗಕ್ಕೆ ಕೊನೆಯೇ ಇಲ್ಲ. ಇದಕ್ಕಾಗಿ ದೇಶದ ರಕ್ಷಣೆಯ ಹೆಸರಿನಲ್ಲಿ ದೇಶದ ಅಂದಾಜು ಪತ್ರದಲ್ಲಿ ಶೇ.೧೧ರಷ್ಟು ಮೀಸಲಾಗಿರಿಸಲಾಗಿದೆ. ಶೇ.೧೯ರಷ್ಟನ್ನು ಸಾಲದ ಮೇಲಿನ ಬಡ್ಡಿ ಪಾವತಿಗಾಗಿ ಮೀಸಲಾಗಿರಿಸಿದೆ. ಇವೆರಡು ಖರ್ಚುಗಳು ಅನಿವಾರ್ಯವಾಗುವ ರೀತಿಯಲ್ಲಿ ದೇಶದ ನೀತಿಯನ್ನು ರೂಪಿಸಲಾಗಿದೆ. ರಕ್ಷಣೆ ಮತ್ತು ಬಡ್ಡಿ ಪಾವತಿಗಳಿಗಾಗಿ ಮೀಸಲಾಗಿರಿಸಿರುವ ಹಣ ಶೇ.೩೦ರಷ್ಟು ಆಗಿರುತ್ತದೆ. ಈ ಖರ್ಚುಗಳಲ್ಲದೆ ಚಂದ್ರಯಾನದಂಥ ಅತಿ ಜರೂರಲ್ಲದ ಯೋಜನೆಗೂ ಖರ್ಚುಮಾಡುವುದಕ್ಕೆ ಆಕಾಶವೇ ಮಿತಿಯಾಗಿದೆ.

ಈಗ ಚಂದ್ರನಲ್ಲಿ ನೀರು ಸಿಗುವ ಸಾಧ್ಯತೆ ಕಂಡುಬಂದಿರುವುದರಿಂದ ಚಂದ್ರಯಾನದ ಯೋಜನೆ ಹಾಗೂ ಅದಕ್ಕೆ ಪೂರಕವಾದ ಮುಂದಿನ ಯೋಜನೆಗಳಿಗೆ ಭಾರತ ಸರ್ಕಾರ ಅಪರಿಮಿತ ಹಣವನ್ನು ಖರ್ಚುಮಾಡಲಿದೆ. ಈ ಸಾಲಿನ ಅಂದಾಜು ಪತ್ರದಲ್ಲಿ ಈ ಯೋಜನೆಗೆ ೧೫೫೫ ಕೋಟಿ ಮೀಸಲಾಗಿರಿಸಲಾಗಿದೆ. ಇಂಥ ಖರ್ಚುಗಳಿಂದಾಗಿ ರಾಷ್ಟ್ರೀಯ ಅರ್ಥವ್ಯವಸ್ಥೆ ಸುಧಾರಣೆಗೊಳ್ಳುವ ಬದಲು ಅವನತಿಯತ್ತ ಸಾಗುತ್ತದೆ. ದುರ್ದೈವವೆಂದರೆ ಸರ್ಕಾರದ ಅವೈಜ್ಞಾನಿಕತೆಯ, ಅನಾದ್ಯತೆಯ, ಅನಾರ್ಥಿಕತೆಯ, ಅಪಮೌಲ್ಯದ ಅಂದಾಜು ಪತ್ರಗಳು ದೇಶದ ಆರ್ಥಿಕ ಪರಿಸ್ಥಿತಿಯನ್ನು ಇನ್ನಷ್ಟು ಅವನತಿಯತ್ತ ಕೊಂಡುಯ್ಯುತ್ತಿವೆ.

ಸ್ವಾತಂತ್ರ್ಯ ಬಂದ ಮೇಲೆ ಇದುವರೆಗೆ ಕೇಂದ್ರ ಸರ್ಕಾರವು ಮೂವತ್ತಾರು ಅಂದಾಜು ಪತ್ರಗಳನ್ನು ಮಂಡಿಸಿದೆ. ವಿವರ ಹೀಗಿದೆ; ಪಣವ್ ಮುಖರ್ಜಿ–೫, ಮುರಾರ್ಜಿ–೧೦, ಯಶವಂತ್ ಸಿನ್ಹ–೭, ಸಿ.ಡಿ.ದೇಶಮುಖ್–೬, ಚಿದಂಬರಂ–೬, ಮನಮೋಹನ್ ಸಿಂಗ್–೫, ಸಿ.ಸುಬ್ರಮಣ್ಯ–೪, ವೈ.ಬಿ.ಚವ್ಹಾಣ್–೩ ಹೀಗೆ ಇದುವರೆಗೆ ಮಂಡಿಸಲಾದ ೩೬ ಅಂದಾಜು ಪತ್ರಗಳಲ್ಲಿಯ ಒಟ್ಟು ಮೊತ್ತ ಕೋಟಿ ಕೋಟಿ ಕೋಟಿ. ೨೦೧೦–೧೧ನೇ ಸಾಲಿನ ಅಂದಾಜು ಪತ್ರದ ಒಟ್ಟು ಮೊತ್ತವೇ ೧೧ಲಕ್ಷದ ೮ಸಾವಿರ ಕೋಟಿ ಇದೆ. ಅಗಾಧ ಪ್ರಮಾಣದ ಇಷ್ಟು ಹಣವನ್ನು ಖರ್ಚುಮಾಡಿದ ಮೇಲೂ ಬಡತನದ ಕೆಳಗಿನ ರೇಖೆಯ ಮಾತು ಇನ್ನೂ ಏಕೆ ಜೀವಂತವಾಗಿದೆ? ನಿರುದ್ಯೋಗದ ಕೂಗು ಏಕೆ ಕೇಳಿಬರುತ್ತಿದೆ? ನಿರಕ್ಷರತೆಯ ಪ್ರಮಾಣ ಇನ್ನೂ ಏಕೆ ಕುಗ್ಗಿಲ್ಲ? ಮಕ್ಕಳಲ್ಲಿ ಅಪೌಷ್ಟಿಕತೆ ಏಕೆ ನಿವಾರಣೆಯಾಗಿಲ್ಲ? ಶಿಶುಸಾವುಗಳ ಸಂಖ್ಯೆ ಏಕೆ ಕಡಿಮೆಯಾಗಿಲ್ಲ? ರೈತರ ಆತ್ಮಹತ್ಯೆಗಳು ಏಕೆ ನಿಂತಿಲ್ಲ? ಸ್ಲಂ ಪ್ರದೇಶಗಳಲ್ಲಿಯ ಜನರು ಇನ್ನೂ ಏಕೆ ನಾಗರಿಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ? ರೈತರು ತಮ್ಮ ಹೊಲಗದ್ದೆಗಳಿಂದ ದವಸಧಾನ್ಯಗಳನ್ನು ಮನಗೆ ಕೊಂಡೊಯ್ಯುವ ಬದಲು ನ್ಯಾಯಬೆಲೆ ಅಂಗಡಿಗಳಿಂದ ಕೊಂಡೊಯ್ಯುವ ಪರಿಸ್ಥಿತಿ ಏಕೆ ಉಂಟಾಗಿದೆ? ತಮ್ಮ ಮನೆ ಹಾಲನ್ನು ಡೈರಿಗೆ ಹಾಕಿ ಪುನಃ ಅಲ್ಲಿಂದಲೇ ಹಾಲು ಖರೀದಿಸುವ ದುಃಸ್ಥಿತಿ ರೈತನಿಗೆ ಏಕೆ ಒದಗಿಬಂದಿದೆ? ಪರಿಸರ ವಿನಾಶ ಅವಿಚ್ಛಿನ್ನವಾಗಿ ಏಕೆ ನಡೆದಿದೆ? ಇಂಥ ಅನೇಕ ಪ್ರಶ್ನೆಗಳು ಈ ಅಂದಾಜು ಪತ್ರಗಳ ಬಹುದೊಡ್ಡ ಗಾತ್ರದ ಹೊಟ್ಟೆಯಿಂದಲೇ ಹುಟ್ಟುತ್ತವೆ. ಈ ಪ್ರಶ್ನೆಗಳನ್ನು ಗಮನಿಸಿದಾಗ ನಮ್ಮ ದೇಶ ತಪ್ಪು ಆರ್ಥಿಕ ದಾರಿಯಲ್ಲಿ ಹೋಗುತ್ತಿದೆ ಎಂದು ಅನಿಸುವುದಿಲ್ಲವೆ? ದೇಶದ ಪ್ರಗತಿಯನ್ನು ಅಳೆಯುವ ಮಾನದಂಡವೇ ದೋಷಪೂರಿತವಾಗಿದೆಯೆಂದು ಅನಿಸುವುದಿಲ್ಲವೆ?

ದೇಶದ ಪ್ರಗತಿಯನ್ನು ಅಳೆಯುವ ಮಾನದಂಡದಲ್ಲಿ ಸ್ಪಷ್ಟವಾಗಿ ದೋಷವಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರಮುಖ ದೋಷವೆಂದರೆ ಭಾರತ ಮೂಲದ ಅಂದಾಜು ಪತ್ರಗಳನ್ನು ತಯಾರಿಸುವಾಗ ವಿದೇಶೀ ವ್ಯಾಖ್ಯೆಯ ಪ್ರಗತಿಯ ಮಾನದಂಡವನ್ನು ದೃಷ್ಟಿಯಲ್ಲಿರಿಸಿಕೊಳ್ಳಲಾಗಿರುತ್ತದೆ. ಅಮೇರಿಕಾ ಮತ್ತು ಅಭಿವೃದ್ಧಿ ಹೊಂದಿದ ಇತರ ದೇಶಗಳಲ್ಲಿಯ ಸಾಮಾಜಿಕ, ಭೌಗೋಳಿಕ, ಸಾಂಸ್ಕೃತಿಕ, ರಾಜಕೀಯ ಸ್ಥಿತಿಗಳು ಬೇರೆ. ಭಾರತದಲ್ಲಿಯ ಪರಿಸ್ಥಿತಿ ಬೇರೆ. ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ಭಾರತ, ಮೆಕ್ಸಿಕೊ ಮತ್ತು

ಆಫ್ರಿಕಾ ಖಂಡದಲ್ಲಿಯ ದೇಶಗಳ ಮಧ್ಯೆ ಇರುವ ವ್ಯತ್ಯಾಸ ಆರ್ಥಿಕ ದೃಷ್ಟಿಯಿಂದ ಬಹುದೊಡ್ಡ ಗಾತ್ರದ್ದಾಗಿದೆ. ಪರಿಸ್ಥಿತಿ ಹೀಗಿರುವಾಗ ಭಾರತದ ಅಂದಾಜು ಪತ್ರಗಳು ದೇಶದ ಪರಿಸ್ಥಿತಿಗೆ ತಕ್ಕಂತೆ ಇರಬೇಕೇ ವಿನಃ ಭಾರತವನ್ನು ತದ್ರೂಪಿ ಅಮೇರಿಕಾ, ತದ್ರೂಪಿ ಇಂಗ್ಲೆಂಡ್‌ನಂತೆ ಮಾಡ ಹೊರಡುವುದು ಗಣೇಶನನ್ನು ಮಾಡುವುದಕ್ಕೆ ಹೋಗಿ ಮಂಗನನ್ನು ಮಾಡಿದಂತಾಗುತ್ತದೆಯೆ ವಿನಃ ಬೇರೆಯಲ್ಲ. ಈ ವಿಷಯವನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡಿದ್ದ ಮಹಾತ್ಮಾ ಗಾಂಧೀಜಿ ಇಂದಿಗೆ ನೂರು ವರ್ಷಕ್ಕೂ ಹಿಂದೆ ತಮ್ಮ ಹಿಂದ್ ಸ್ವರಾಜ್‌ದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಪೈಶಾಚಿಕ ಸಂಸ್ಕೃತಿಯೆಂದು ತೆಗಳಿದ್ದರು. ಆ ಸಂಸ್ಕೃತಿಯನ್ನು ಭಾರತ ಖಂಡಿತವಾಗಿ ತನ್ನದನ್ನಾಗಿ ಮಾಡಿಕೊಳ್ಳಕೂಡದೆಂದು ಹೇಳಿ, ಹಾಗೇನಾದರೂ ಆದಲ್ಲಿ ಭಾರತ ತನ್ನ ಅಸ್ಮಿತೆಯನ್ನು ಕಳೆದುಕೊಂಡು ಅದು ಒಂದು ರಾಷ್ಟ್ರವಾಗಿ ಉಳಿಯದೆ ಕೇವಲ ಜನನಿಬಿಡ ಪ್ರದೇಶವಾಗಿ ಮಾರ್ಪಾಟುಗೊಳ್ಳುವುದೆಂದೂ ಹೇಳಿದ್ದರು. ಇಂದಿನ ಅಂದಾಜು ಪತ್ರಗಳನ್ನು ಪರಿಶೀಲಿಸಿದಾಗ ನಮ್ಮ ದೇಶ ನಾಯಕರು ಭಾರತವನ್ನು ತದ್ರೂಪಿ ಅಮೇರಿಕಾದಂತೆಯೂ, ನಗರಗಳನ್ನು ತದ್ರೂಪಿ ಸಿಂಗಪುರದಂತೆಯೂ ಮಾಡಹೊರಟ್ಟಿದ್ದಾರೆಂಬುದು ಸೂರ್ಯನ ಬೆಳಕಿನಷ್ಟೇ ಸ್ಪಷ್ಟವಾಗಿ ಗೊತ್ತಾಗುತ್ತದೆ. ಉದಾಹರಣೆಗಾಗಿ ಒಂದು ಮಾತನ್ನು ಇಲ್ಲಿ ಗಮನಿಸಬಹುದು. ಕಡು ಬಡವನಿಗೂ ಅಗತ್ಯವಾದ ಉಪ್ಪಿನ ಮೇಲೆ ಹೆಣಭಾರ ತೆರಿಗೆಯನ್ನು ಹಾಕಿ ಸುಖ ಲೋಲುಪರಾಗಿ ರಾಜ್ಯಭಾರ ನಡೆಸುತ್ತಿದ್ದ ಇಂಗ್ಲಿಷರ ವಿರುದ್ಧ ಉಚಿತ ಉಪ್ಪಿಗಾಗಿ ತಮ್ಮ ಅರವತ್ತನೆ ವಯಸ್ಸಿನಲ್ಲಿ ಇನ್ನೂರು ಮೈಲಿ ನಡೆದುಕೊಂಡು ಹೋಗಿ ಸತ್ಯಾಗ್ರಹ ಮಾಡಿದರು ಗಾಂಧೀಜಿ. ಸ್ವತಂತ್ರ ಭಾರತದಲ್ಲಿ ಉಪ್ಪು ಎಲ್ಲರಿಗೂ ಉಚಿತವಾಗಿ ಸಿಗಬೇಕೆಂದು ಬಯಸಿದರು. ಹಾಗಾದಗಲೇ ಭಾರತಕ್ಕೆ ಎಲ್ಲರೀತಿಯಲ್ಲೂ ನಿಜವಾದ ಸ್ವಾತಂತ್ರ್ಯ ದೊರೆತಿದೆಯೆಂದು ಸಮಾಜದ ಕಟ್ಟಕಡೆಯ ಮನುಷ್ಯನಿಗೂ ಗೊತ್ತಾಗುತ್ತದೆಯೆಂದೂ ಹೇಳಿದ್ದರು. ಆದರೆ ಆರು ದಶಕಗಳ ಅವಧಿಯ ಸ್ವತಂತ್ರ ಭಾರತದಲ್ಲಿ ಆಗಿರುವುದೇನು? ಎಲ್ಲ ಜೀವನಾವಶ್ಯಕ ಪದಾರ್ಥಗಳ ಬೆಲೆ ಗಗನಕ್ಕೇರುತ್ತಿರುವಂತೆ ಕಡುಬಡವನ ಅಗತ್ಯ ಉಪ್ಪಿನ ಬೆಲೆಯೂ ಏರುತ್ತಿದೆ. ಅದರೊಂದಿಗೆ ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿ ನೀತಿ, ಶಿಕ್ಷಣ ನೀತಿ, ಕೃಷಿ ನೀತಿ, ವಾಣಿಜ್ಯ ನೀತಿ, ಕೈಗಾರಿಕಾ ನೀತಿ ಇತ್ಯಾದಿ ಸಾವಿರ ಬಗೆಯ ನೀತಿಗಳೆಲ್ಲವೂ ಸ್ವದೇಶಿತನವನ್ನು ಕಳೆದುಕೊಂಡು ಅಮೇರಿಕದ ಪ್ರಗಾಢ ಪ್ರಭಾವದ ವಿದೇಶಿತನವನ್ನು ತಮ್ಮದನ್ನಾಗ ಮಾಡಿಕೊಂಡಿವೆ. ತನ್ಮೂಲಕ ಪೈಶಾಚಿಕ ಸಂಸ್ಕೃತಿಗೆ ದೇಶ ತನ್ನ ಬಾಗಿಲನ್ನು ತೆರೆದಿಟ್ಟದೆ. ಭಾರತದ ಸಂಸ್ಕೃತಿ, ಭಾರತದ ಭಾಷೆಗಳು, ಭಾರತದ ಪ್ರಕೃತಿ ಸಂಪತ್ತು, ಭಾರತದ ಕೃಷಿ, ಭಾರತದ ಹಳ್ಳಿಗಳು, ಖನಿಜಗಳು ಇತ್ಯಾದಿಯಾಗಿ ಎಲ್ಲವೂ ಪಾಶ್ಚಿಮಾತ್ಯ ರೀತಿಯ ಪೈಶಾಚಿಕ ಸಂಸ್ಕೃತಿಗೆ ಸಿಕ್ಕು ಸರ್ವನಾಶವಾಗುತ್ತಿವೆ. ಸ್ವಾಗತಾರ್ಹವಲ್ಲದ, ಭಯಾನಕವಾದ ಮರುನಿರ್ಮಾಣ ಸಾಧ್ಯವಾಗದ ಪರಿಸ್ಥಿತಿಗೆ ದೇಶವನ್ನು ತಂದೊಡ್ಡಿರುವ ಅಂದಾಜು ಪತ್ರ ಶ್ರೀ ಸಾಮಾನ್ಯನ ಮಟ್ಟಿಗೆ ಆಕಾಶದಲ್ಲಿನ ನಕ್ಷತ್ರ!

* * *

ಶಬ್ದಾಡಂಬರದ ರಂಜನೀಯ ಸಾಹಿತ್ಯ ಬೇಡ

– ಗೀತಾ ನಾಗಭೂಷಣ

ಮಾಧ್ಯಮಗಳು ತನ್ನ ಸರಕುಗಳಿಗೆ ಗ್ರಾಹಕರನ್ನು ಸೆಳೆಯುವ ಜಾಹಿರಾತು ಲೋಕದ ಹಣದ ಥೈಲಿಯಲ್ಲಿ ಬಂಧಿತವಾಗಿವೆ. ಜನ ಮಾನಸವನ್ನು ರೂಪಿಸಬೇಕಾದ ಸಾಂಸ್ಕೃತಿಕ ರೂವಾರಿಗಳು ವ್ಯಾಪಾರೀಲೋಕದ ನಿಯಂತ್ರಕರಾಗಬೇಕೇ ಹೊರತು ನಿಯಂತ್ರಿತ ಸರಕುಗಳಾಗಬಾರದು. ಕಾಲಕಾಲಕ್ಕೆ ಬದಲಾದ ಮಾಧ್ಯಮಗಳನ್ನು ದುಡಿಸಿಕೊಳ್ಳಬೇಕಾದ ಸೃಜನಶೀಲ ಪ್ರತಿಭೆಗಳು ತಾವು ಅಖಂಡ ಜನಪದರ ಪ್ರತಿನಿಧಿಗಳು ಎಂಬ ಎಚ್ಚರದಲ್ಲಿರುವುದು ಒಳಿತು. ಈ ಎಚ್ಚರವಿದ್ದರೆ ಮಾತ್ರ ಸಾಹಿತ್ಯಕ್ಕೆ ಸಾರ್ವಕಾಲಿಕ ಧಾರಣಶಕ್ತಿ ಬರುತ್ತದೆ.

ಹಾಗೆ ನೋಡಿದರೆ ಎಂದಿಗಿಂತಲೂ ಇಂದು ಬರೆಯುವವರ ಸಂಖ್ಯೆ, ಬರೆದುದನ್ನು ಪ್ರಕಟಿಸುವ ಸಂಘ ಸಂಸ್ಥೆಗಳ ಸಂಖ್ಯೆ ಹೆಚ್ಚಾಗಿದೆ. ಪುಸ್ತಕ ಮಾರಾಟದಲ್ಲಿಯೂ ಕನ್ನಡ ಪುಸ್ತಕಗಳು ಹಿಂದೆ ಬಿದ್ದಿಲ್ಲ. ಪ್ರತಿ ಜಿಲ್ಲೆ, ತಾಲೂಕು, ಹೋಬಳಿ ಮಟ್ಟದಲ್ಲಿ ಸಾಹಿತ್ಯಕ ಸಭೆ, ಸಮಾರಂಭಗಳು ವೆಗ್ಗಳವಾಗಿ ಜರುಗುತ್ತಿವೆ. ನಾವು ಚಿಕ್ಕವರಿದ್ದಾಗ ಜಿಲ್ಲಾ ಕೇಂದ್ರಗಳಲ್ಲಿ ತಿಂಗಳಿಗೊಮ್ಮೆ ಅಥವಾ ತಿಂಗಳಿಗೆ ಎರಡು ಸಲ ಎಂಬಂತೆ ಸಾಹಿತ್ಯಕ ಕಾರ್ಯಕ್ರಮಗಳು ನಡೆಯುತ್ತಿದ್ದರೆ; ಇಂದು ಒಂದೇ ಊರಿನಲ್ಲಿ ದಿನವೊಂದಕ್ಕೆ ಹತ್ತಾರು ಕಾರ್ಯಕ್ರಮಗಳು ನಡೆಯುತ್ತಿರುವುದನ್ನು ನಾವೆಲ್ಲ ಮಾಧ್ಯಮಗಳಲ್ಲಿ ಗಮನಿಸುತ್ತಿದ್ದೇವೆ. ಸಾಹಿತ್ಯಕ ಚಟುವಟಿಕೆಗಳಿಗೆ ಕೊರತೆಯಿಲ್ಲ. ಆದರೆ ಎಪ್ಪತ್ತು ಎಂಭತ್ತರ ದಶಕದಂತೆ ಇಂದು ಸಾಹಿತ್ಯಕ ಪರಿಸರ, ಅಥವಾ ಸಾಹಿತ್ಯಕ ಸಂಚಲನವುಂಟಾಗುತ್ತಿಲ್ಲ. ಬಿಡಿ ಬಿಡಿ ಸಮೂಹಗಳು ನಡೆಸುತ್ತಿರುವ ಚಟುವಟಿಕೆಗಳಿಗೆ ಸರ್ವವ್ಯಾಪಿ ಪ್ರತಿಸ್ಪಂದನ ದೊರೆಯುತ್ತಿಲ್ಲ. ಒಂದೆಡೆ ಮಾಹಿತಿ ತಂತ್ರಜ್ಞಾನದ ಜಾಲ ವಿಶ್ವವನ್ನು ಹಳ್ಳಿಯಾಗಿ ನಿರ್ಮಿಸುತ್ತಿದ್ದರೆ, ಮಗದೊಂದೆಡೆ ಸಾಹಿತ್ಯದಂಥ ಸಶಕ್ತ ಮಾಧ್ಯಮವು ಅಲ್ಲಲ್ಲಿ ನಡುಗಡ್ಡೆಯಂತಾಗಿ ತಮ್ಮ ತಮ್ಮೊಳಗೆ ಹುತ್ತ ಕಟ್ಟುಕೊಳ್ಳುತ್ತಿವೆ. ಹೆಚ್ಚೆಚ್ಚು ವಿಸ್ತಾರವಾದಷ್ಟು, ಸಾರ್ವತ್ರಿಕವಾದಷ್ಟು ಸಾಹಿತ್ಯಕ್ಕೆ ಬಲ ಮತ್ತು ಛಲ ಬರುತ್ತದೆ. ಹೀಗಾಗುತ್ತಿಲ್ಲವೆಂದಾದರೆ, ಹೀಗಾಗದಂತೆ ನೋಡಿಕೊಳ್ಳುವ ವ್ಯವಸ್ಥೆಯೊಂದು ಜನತೆಯ ಪ್ರಾಬಲ್ಯವನ್ನು ಮೀರಿ ಕ್ರಿಯಾಶೀಲವಾಗುತ್ತಿದೆ ಎಂದೇ ಅರ್ಥ.

ಈಗ ಕರ್ನಾಟಕವನ್ನು ಒಳಗೊಂಡಂತೆ ಭಾರತವನ್ನು ನಿಯಂತ್ರಿಸುತ್ತಿರುವುದು ಅಂತಾರಾಷ್ಟ್ರೀಯ ಬಂಡವಾಳ ಲೋಕ. ಈ ಲೋಕಕ್ಕೆ ಮಾನವರ ಬಿಡಿ ಬಿಡಿ ಗುಂಪುಗಳು ಬೇಕು. ಅಖಂಡ ಸಮುದಾಯವಲ್ಲ. ಎಪ್ಪತ್ತರ ಅಥವಾ ಆ ಪೂರ್ವದ ದಶಕಗಳಲ್ಲಿ "ವಿಷಯ" ಕೇಂದ್ರಿತ ಹೋರಾಟಗಳು ಮುಂಚೂಣಿಯಲ್ಲಿದ್ದರೆ ಈಗ ನೋಡಿ ಹೇಗೆ ಜಾತಿಯಾಧಾರಿತ ಗುಂಪುಗಳು, ಪ್ರದೇಶ ಆಧಾರಿತ ಗುಂಪುಗಳು, ಉಪಭಾಷಾ ಆಧಾರಿತ ಗುಂಪುಗಳು ತುಂಡು ತುಂಡಾಗಿ ಹೋರಾಟದ ಕಾರ್ಯಕ್ರಮಕ್ಕೆ ಇಳಿಯುತ್ತಿವೆಯಲ್ಲವೆ? ಆಧುನಿಕೋತ್ತರದ ದೊಡ್ಡ ವ್ಯಂಗ್ಯವೆಂದರೆ ಹೋರಾಟವೆಂಬ

ವಿದ್ಯಮಾನಗಳು ಕಾರ್ಯಕ್ರಮಗಳಾಗಿ ಸಂಪನ್ನವಾಗುತ್ತಿರುವುದು. ಇತ್ತೀಚಿನ ದಿನಗಳಲ್ಲಿ ಕನ್ನಡ ನಾಡು-ನುಡಿಯ ಹೆಸರಿನ ಮೇಲೆ ಹುಟ್ಟಿಕೊಳ್ಳುತ್ತಿರುವ ಸಂಘಟನೆಗಳನ್ನು ನೋಡಿದರೆ ಯಾರಿಗಾದರೂ ಗಾಬರಿಯಾಗದೆ ಇರದು.

ಹೋರಾಟದ ಹೆಸರಿನಲ್ಲಿ ಅಲ್ಲಲ್ಲಿ ನೆರೆಯುತ್ತಿರುವ ಯುವಕರು, ಅವರ ಉತ್ಸಾಹದಾಯಕ ಚಟುವಟಿಕೆಗಳು, ಘೋಷಣೆ ಹಾಕುವ ಆ ಕಂಠಗಳು ಇವೆಲ್ಲವನ್ನು ಅಲಕ್ಷಿಸುವಂತಿಲ್ಲ. ಅವರ ಅಪಾರ ಶಕ್ತಿ ಸಾಧ್ಯತೆಯನ್ನು ಅಲ್ಲಗೆಳೆಯುವಂತಿಲ್ಲ. ಆದರೆ ನಮ್ಮ ಕುವೆಂಪು ಆ ಹೊತ್ತು ಹೇಳಿರುವಂತೆ, ಇವತ್ತು ಮತ್ತೆ ಅವರಿಗೆ ಮುಂದೊಂದು ಗುರಿಯೂ ಇಲ್ಲ ಹಿಂದೊಬ್ಬ ಗುರುವೂ ಇಲ್ಲ. ಹೋಗಲಿ ಅಕ್ಕಪಕ್ಕದಲ್ಲಿ ಅಪಾಯ ಬಂದಾಗಲಾದರೂ ಅವರನ್ನು ಎಚ್ಚರಿಸುವ ಒಬ್ಬ ಸ್ನೇಹಿತನೂ ಇಲ್ಲ. ಜಾತ್ರೆಯ ಗದ್ದಲದಲ್ಲಿ ಅಮ್ಮ-ಅಪ್ಪಂದಿರಿಂದ ಕೈ ಬಿಡಿಸಿಕೊಂಡು ಕಳೆದುಕೊಂಡಿರುವಂಥ ಪುಟ್ಟ ಮಗು ಕಂಡವರ ಹಿಂದೆ ಅಳುತ್ತಾ ಬೆನ್ನುಹತ್ತುವಂತೆ ಅವರ ಸ್ಥಿತಿಯಾಗಿದೆ.

ಪ್ರಸ್ತುತ ಜಾಗತೀಕರಣದ ಜಾತ್ರೆಯಲ್ಲಿ ಮಕ್ಕಳು ಮಾತ್ರ ಕಳಕೊಂಡಿಲ್ಲ. ಮಕ್ಕಳನ್ನು ರಕ್ಷಿಸಬೇಕಾದ ಅಪ್ಪ ಅಮ್ಮಂದಿರಂಥ ಸಾಂಸ್ಕೃತಿಕ ರೂವಾರಿಗಳೂ ಕಳೆದುಕೊಂಡಿರುವುದೇ ದುರಂತದ ಸಂಗತಿ.

ವರ್ಷವರ್ಷಕ್ಕೆ ಪ್ರಕಟವಾಗುತ್ತಿರುವ ಪುಸ್ತಕಗಳ ಸಂಖ್ಯೆ ಗಮನಿಸಿದರೆ ಈ ಮುಂಚಿನ ಹತ್ತಾರುಪಟ್ಟು ಹೆಚ್ಚು ಪುಸ್ತಕಗಳು ಪ್ರಕಟವಾಗುತ್ತಿವೆ ಮತ್ತು ಮಾರಾಟವಾಗುತ್ತಿವೆ. ಕನ್ನಡದಲ್ಲಿ ಪ್ರಕಾಶನ ಸಂಸ್ಥೆಗಳಂತೂ ಇನ್ನಿಲ್ಲದಂತೆ ಬೆಳೆಯುತ್ತಿವೆ. ಭಾಂಡಗೆ, ನವಕರ್ನಾಟಕ, ಅಂಕಿತ, ಅಭಿನಯ, ಲೋಹಿಯಾ, ಲಢಾಯಿ, ವಿದ್ಯಾನಿಧಿ, ಸಿದ್ಧಲಿಂಗೇಶ್ವರ ಪ್ರಕಾಶನ, ಸುಭದ್ರ ಪ್ರಕಾಶನ, ಸಾಹಿತ್ಯ ಭಂಡಾರ, ಸಂಕ್ರಮಣ ಪ್ರಕಾಶನ ಮತ್ತು ಅಭಿಮಾನಿ ಪ್ರಕಾಶನ! ಈ ಪಟ್ಟಿ ಇನ್ನೂ ದೀರ್ಘವಾಗಿ ಬೆಳೆಸಬಹುದು. ಈ ಸಂಸ್ಥೆಗಳು ಮಾಡುತ್ತಿರುವ ನುಡಿಸೇವೆ ನಿಜಕ್ಕೂ ಉಲ್ಲೇಖನಾರ್ಹ. ಕನ್ನಡದಲ್ಲೂ ಪುಸ್ತಕೋದ್ಯಮವು ಗಟ್ಟಿಗೊಳ್ಳುತ್ತಿರುವ ಸಂಕೇತ. ಆದರೆ ಈ ಎಲ್ಲ ಪ್ರಕಾಶಕರಿಗೆ ಈಡಾಗಬಲ್ಲಂಥ ಸಾಹಿತ್ಯ ಕೃತಿಗಳನ್ನು ನೀಡುವಲ್ಲಿಯೇ ಪ್ರತಿಭಾಲೋಕ ಹಿಂದೆಬೀಳುತ್ತಿದೆ ಎಂಬ ಗುಮಾನಿ ಬರುತ್ತಿದೆ. ಹಾಗೆ ನೋಡಿದರೆ ಇತ್ತಿಚಿನ ದಿನಗಳಲ್ಲಿ ಕಥೆ, ಕಾದಂಬರಿ, ಕವನಗಳಿಗಿಂತ ವೈಚಾರಿಕ, ವೈಜ್ಞಾನಿಕ, ಸಂಶೋಧನಾತ್ಮಕ ಲೇಖನಗಳ ಕಡೆ ಓದುಗ ಲೋಕ ಆಕರ್ಷಿತವಾದಂತಿದೆ. ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಅಂಕಣಗಳು ನಿಜಕ್ಕೂ ಮೌಲಿಕವೂ, ಆಪ್ತವಾಗಿಯೂ ಬರುತ್ತಿವೆ. ಅಷ್ಟಕ್ಕೂ ಒಂದು ಕಾಲಮಾನ ತನಗೆ ಬೇಕಾದ ರೂಪವನ್ನು ತಾನೆ ಕಟ್ಟಿಕೊಳ್ಳುತ್ತದೆ. ಕಾದಂಬರಿ ರೂಪ ಒಂದಷ್ಟು ಹಿಂದೆ ಬಿದ್ದಿರಬಹುದಾದರೂ ಕಥೆ, ಕವನ ತಮ್ಮ ಎಂದಿನ "ಪ್ಯಾಷನ್" ಉಳಿಸಿಕೊಂಡು ಬರುತ್ತಿವೆ. ಆ ಕಾಲದಷ್ಟು ಕಥೆ ಕವನಗಳ ಕ್ರೇಜ್ ಇರಲಿಕ್ಕಿಲ್ಲವಾದರೂ ಅವುಗಳನ್ನು ಇಷ್ಟಪಡುವ ವರ್ಗವೊಂದು ಇದ್ದೇ ಇದೆ. ಇತ್ತೀಚಿಗೆ ಕೆಲವರು ಕ್ಲುಪ್ತವಾದ, ಸಾಂದ್ರತೆಯುಳ್ಳ ಬರವಣಿಗೆಯತ್ತ ಧಾವಿಸುತ್ತಿದ್ದಾರೆ. ಬ್ಲಾಗ್ ಅಂತಹದ್ದೊಂದು ತೀವ್ರವಾದ ಬರಹರೂಪವೇನೋ ಕಾದು ನೋಡಬೇಕಿದೆ. ಹೀಗೆಂದಾಗ ಕನ್ನಡದ ಪ್ರತಿಭಾಲೋಕ ಸ್ಥಗಿತವಾಗಿದೆ ಅಥವಾ ಮಂದವಾಗಿದೆ ಎಂತೇನೂ ಅಲ್ಲ. ಹಾಗೆ ನೋಡಿದರೆ ಇದು "ಬ್ಲಾಗು"ಗಳ ಯುಗ. ಕೆಂಡಸಂಪಿಗೆ,

ಅವಧಿ, ಪುಸ್ತಕಪ್ರೀತಿ, ಅಂತರಂಗ, ಬುಕ್‌ಮಾರ್ಕ್, ಅನುಭವಮಂಟಪ, ಅನವರತ ಮತ್ತು ಅಭಿವ್ಯಕ್ತಿ ಬ್ಲಾಗುಗಳು ವಿವಿಧ ವೆಬ್‌ಸೈಟ್‌ಗಳಲ್ಲಿ ಬರುತ್ತಿರುವ ಬರಹಗಳ ಮೊನಚು, ಆಪ್ತತೆ ಎಂಥವರನ್ನೂ ದಂಗುಬಡಿಸದೆ ಇರಲಾರದು. ದಿನದ ಹೆಚ್ಚುಹೊತ್ತು ಕಂಪ್ಯೂಟರ್ ಎದಿರು ಕುಳಿತು ಎಲ್ಲದಕ್ಕೂ ಅದನ್ನೆ ಆಶ್ರಯಿಸಿಕೊಂಡಿರುವ ಹೈಟೆಕ್ ಸಿಟಿಗಳ ವಿದ್ಯಾವಂತರಿಗಂತೂ ಬ್ಲಾಗುಗಳ ಲೋಕ ತೀರ ಆಪ್ಯಾಯಮಾನವೆನಿಸುತ್ತಿದೆ. ಖಾಸಗಿಯಲ್ಲದ ಈ ಖಾಸಗಿ ಓದು ಸಾಫ್ಟ್‌ವೇರ್ ಜಗತ್ತಿಗೆ ಅನಿವಾರ್ಯ.

ಕರ್ನಾಟಕದ ಮೂಲೆ ಮೂಲೆಗಳಲ್ಲಿ ವಾಸಿಸುತ್ತಿರುವ ಮತ್ತು ಜೀವನವನ್ನರಸಿ ದಿನ ನಿತ್ಯ ಸಾವಿರ ಸಾವಿರ ಸಂಖ್ಯೆಯಲ್ಲಿ ವಲಸೆ ಹೋಗುತ್ತಿರುವ ಸಾಮಾನ್ಯ ಕನ್ನಡಿಗನಿಗೂ ಈ ಬ್ಲಾಗುವಿಗೂ ಸಂಬಂಧ ಕಲ್ಪಿಸಲಾದೀತೆ? ಅಕ್ಷರ ಬಲ್ಲ ಲೋಕವೊಂದನ್ನೇ ಇಟ್ಟುಕೊಂಡು ಸಾಹಿತ್ಯದ ಸಾಧ್ಯತೆಯನ್ನು ಚರ್ಚಿಸುವುದು ಸಾಧುವೇ? ಸ್ವಾತಂತ್ರ್ಯ ದೊರೆತು ಆರು ದಶಕ ದಾಟಿದ ಈ ಅವಧಿಯಲ್ಲಿ ಇನ್ನೂವರೆಗೂ ರಾಜ್ಯದ ಪ್ರತಿಶತ ನಲ್ವತ್ತರಷ್ಟು ಜನತೆಗೆ ಅಕ್ಷರ ಕೊಡಲು ಸಾಧ್ಯವಾಗಿಲ್ಲ. ಶಾಲೆಯ ಮುಖವೇ ನೋಡದ ಕೋಟಿ ಕೋಟಿ ಜನರು ನಮ್ಮೊಟ್ಟಿಗೆ ಇದ್ದಾರೆ.

ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ತುಂಬು ಉತ್ಸುಕತೆಯಿಂದ ಕನ್ನಡ ಭಾಷೆ-ಸಂಸ್ಕೃತಿ ಬಗೆಗೆ ಮಾತನಾಡಿದೆವು. ಅಂದಿನ ಜನಪ್ರತಿನಿಧಿಗಳ ಕಣ್ಣುಗಳಲ್ಲಿಯೂ ಹಲವು ಕನಸುಗಳು ಮೊಳೆತಿದ್ದವು. ಆದರೆ ನೋಡನೋಡುವಷ್ಟರಲ್ಲಿ ಆ ಕನಸುಗಳು ಕಮರಿಹೋದವು. ಅಷ್ಟೇ ಅಲ್ಲ ಇತ್ತಿಚೆಗಂತೂ ನಮ್ಮ ಜನಪ್ರತಿನಿಧಿಗಳಿಗೆ ಕಣ್ಣುಗಳೇ ಕಳೆದುಹೋಗಿವೆ. ನಮ್ಮ ಶಿಕ್ಷಣ ವ್ಯವಸ್ಥೆ ಮತ್ತು ಕನ್ನಡ ಮಾಧ್ಯಮದ ನೀತಿ ಇವೆರಡನ್ನು ಕುರಿತು ಮಾತಾಡುವುದೇ ವೃಥಾಲಾಪ ಎಂಬಂತಾಗಿದೆ. ಸಂಪೂರ್ಣ ಶಿಕ್ಷಣ ವ್ಯವಸ್ಥೆಯೇ ಖಾಸಗಿಯವರಿಗೆ ಪರಭಾರೆಯಾಗಿ ವರ್ಷಗಳೇ ಸಂದಿರುವಾಗ ನಮ್ಮ ಪ್ರಭುತ್ವ ತುಂಬಾ ಆದರ್ಶವೆನಿಸುವಂಥ ಹೇಳಿಕೆಗಳನ್ನು ಕೊಡುತ್ತಲೇ ಇರುವುದು ರೇಜಿಗೆ ಬರಿಸುತ್ತಿದೆ. ಎಲ್ಲರಿಗೂ ಅಕ್ಷರ ಕೊಡಬೇಕಾದ ಪ್ರಭುತ್ವವೇ ಕೈ ಚೆಲ್ಲಿ ಕುಳಿತಿರುವಾಗ ಕನ್ನಡ ಸಾಹಿತಿಗಳ ಹೊಣೆಗಾರಿಕೆ ಏನು? ಭಾರಿ ಭಾರಿ ಖಾಸಗಿ ಶಾಲಾ, ಕಾಲೇಜು ಸಂಘ-ಸಂಸ್ಥೆಯವರು ಕೊಡಮಾಡುತ್ತಿರುವ ಟಿ.ಎ, ಡಿ.ಎ, ಇನ್ನಿತರ ಕಾಣಿಕೆಗೆ ಆಕರ್ಷಿತರಾಗಿ ಹೋಗಿ ಅಲ್ಲಿ ಒಣ ಆದರ್ಶದ ಭಾರಿ ಭಾಷಣ ಬಿಗಿದುಬರುವುದೇ? ಶಿಕ್ಷಣ ಮಾಫಿಯಾದವರು ಸೃಷ್ಟಿಸಿದ ಸಂದರ್ಶಕರ ಪುಸ್ತಕದಲ್ಲಿ ನಮ್ಮ ಭಾಷಾ ಪ್ರೌಢಿಮೆ ಬಳಸಿ ಹೊಗಳಿಕೆಯ ಷರಾ ಬರೆದು ಬರುವುದೇ? ಈ ಪ್ರಶ್ನೆಗಳು ನಮ್ಮನ್ನು ಕಾಡದಿದ್ದರೆ ಸಾಹಿತ್ಯವೆಂಬ ಮಹಾನ್ ಅಸ್ತ್ರವು ನಿಷ್ಕ್ರಿಯವಾಗದೇ ಇರದು.

ಅಷ್ಟಕ್ಕೂ ಸಾಹಿತ್ಯವೆಂದರೆ ಬದುಕು ತಾನೆ? ತೀರ ಸುರಕ್ಷಿತ ಸಮೃದ್ಧ ಹಿನ್ನೆಲೆಯಿಂದ ಬಂದ ಲೇಖಕರು ಸಾಹಿತ್ಯವೆಂದರೆ ಹೇಗೆ ಗ್ರಹಿಸುತ್ತಾರೋ ನನಗೆ ಗೊತ್ತಿಲ್ಲ. ಹೇಗೆ ಗ್ರಹಿಸಿದರೂ ಅದು ಅವರ ಹಕ್ಕು. ಆದರೆ ನನಗೆ ಅಂದರೆ ತೀರ ಹಿಂದುಳಿದ ಭಾಗದ ತಳವರ್ಗದ ಅಲಕ್ಷಿತ ಸಮುದಾಯದಿಂದ ಬಂದ ನನಗೆ ಅಕ್ಷರವೆಂದರೆ ಬೆಳಕು, ಸಾಹಿತ್ಯವೆಂದರೆ ಹಿಲಾಲು (ಪಂಜು). ಈ ಹಿಲಾಲನ್ನು ಮತ್ತೆ ಮತ್ತೆ ಪ್ರಜ್ವಲಿಸಿ ಬದುಕಿನ ಸಮಗ್ರ ಆಯಾಮಗಳನ್ನು ನೋಡುವ ಉಪಕರಣ. ಕಗ್ಗತ್ತಲಿನ ಮೂಲೆ-ಮೊಡಕುಗಳಿಗೆ ಬೆಳಕಿನ ಕಿರಣ ಹಾಯಿಸಿ ಇಂಚು ಇಂಚನ್ನು

ಪ್ರಕಾಶಮಯಗೊಳಿಸುವ ಸಾಧನ. ಹೇಳಿ ಕೇಳಿ ನಾನು ವಚನ, ಕೀರ್ತನೆ, ತತ್ವಪದಕಾರರ ನಾಡಿನಿಂದ ಬಂದವಳು.

ವಚನಕಾರರ ಸಾಹಿತ್ಯಕ್ಕೆ ಧಾತುವಾದ "ಹಸಿವು" ನನ್ನನ್ನು ಮತ್ತೆ ಮತ್ತೆ ಕಾಡುತ್ತಿದೆ. ಸಹೃದಯ ಸಂಗಾತಿಗಳೇ, ಸಂವೇದನಾಶೀಲರಾದವರಿಗೆಲ್ಲ "ಹಸಿವು" ಈ ಹೊತ್ತು ಕಾಡಲೇಬೇಕಿದೆ. ಮುಕ್ತ ಮಾರುಕಟ್ಟೆ ವ್ಯವಸ್ಥೆಯು ಬಂಡವಾಳದ ಅಭಿವೃದ್ಧಿಯನ್ನೇ ದೇಶದ ಅಭಿವೃದ್ಧಿ ಎಂದು ಬಿಂಬಿಸುತ್ತಿರುವಾಗ ಅಭಿವೃದ್ಧಿಯ ಮಾನದಂಡಗಳೇ ತಲೆಕೆಳಗಾಗಿವೆ. ಅನಿಯಂತ್ರಿತ ಅಥವಾ ರೂಪಾಯಿ ಮೌಲ್ಯ ನಿಯಂತ್ರಿತ ಮಾರುಕಟ್ಟೆಯೂ ಒಂದೆಡೆ ಹಣದ ಗುಡ್ಡೆಯನ್ನೇ ಒಟ್ಟುತ್ತಿದ್ದರೆ, ಇನ್ನೊಂದೆಡೆ ರೈತರು ತಮ್ಮ ಬೆಳೆದ ಬೆಳೆಗೆ ಬೆಲೆಬರದೆ, ಮಾಡಿದ ಸಾಲ ತೀರಿಸಲಾಗದೆ, ತಮ್ಮೂರಿನಲ್ಲಿ ಆತ್ಮಹತ್ಯೆಯತ್ತ ಮೌನವಾಗಿ ದಂಡಿ ದಂಡಿಯಾಗಿ ಸಾಗುತ್ತಿದ್ದಾರೆ. ಕೂಲಿ ಕಾರ್ಮಿಕರಿಗೆ ಕೆಲಸ ಸಿಗದೆ ಗುಂಪು ಗುಂಪಾಗಿ ಗುಳೆ ಹೋಗುತ್ತಿದ್ದಾರೆ. ಮೊನ್ನೆ ನನ್ನದೇ ಜಿಲ್ಲೆಯ ಆಳಂದ ತಾಲ್ಲೂಕಿನ ಹಿತ್ತಲ ಶಿರೂರು, ಜವಳಿ-ಡಿ ಗ್ರಾಮದ ಕಾರ್ಮಿಕರು ಪುಣೆಯ ಇಟ್ಟಂಗಿ ಭಟ್ಟಿಯಲ್ಲಿ ದುಡಿಯಲೆಂದು ಹೋಗುವಾಗ ರಸ್ತೆ ಅಪಘಾತಕ್ಕೆ ಸಿಕ್ಕು ಪೂರಾ ಇಪ್ಪತ್ತು ಜೀವಗಳು ಅಂದರೆ ಕುಟುಂಬಕ್ಕೆ ಕುಟುಂಬವೇ ಸತ್ತದ್ದು, ಸಾಮೂಹಿಕ ಶವಸಂಸ್ಕಾರ ಮಾಡಿದ ಆ ಹೃದಯವಿದ್ರಾವಕ ದೃಶ್ಯ ಟಿ.ವಿ. ಪರದೆ ಮೇಲೆ ನೋಡಿದ್ದನ್ನು ಮರೆಯಲು ಸಾಧ್ಯವೇ ಆಗುತ್ತಿಲ್ಲ.

ದೇಶದಲ್ಲಿರುವ ಕೆಲವು ಬೆರಳೆಣಿಕೆಯಷ್ಟು ಶ್ರೀಮಂತರ ಆದಾಯವು ನಭೋಮಂಡಲಕ್ಕೆ ಏರಿ ಅವರ ಆದಾಯವನ್ನೇ ದೇಶದ ಸರಾಸರಿ ಆದಾಯವೆಂದು ಬಿಂಬಿಸಿ, ದೇಶವಾಸಿಗಳ ವಾರ್ಷಿಕ ತಲಾ ಆದಾಯದಲ್ಲಿ ಹೆಚ್ಚಳ ತೋರಿಸಿದರೆ ಇದೆಂಥ ಮೋಸ ಅಲ್ಲವೆ? ಈ ಎಲ್ಲ ಮಾತುಗಳನ್ನು ಹೇಳುತ್ತಿರುವಾಗಲೂ ನನ್ನ ತಲೆಯಲ್ಲಿ ಗಡಿಯಾರದ ಲಯದಂತೆ ಮತ್ತೆ ಮತ್ತೆ ಹೊಡೆದುಕೊಳ್ಳುತ್ತಿದೆ ಮೊನ್ನಿನ ಪ್ರವಾಹ. ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳು ಈ ವರ್ಷದ ಅವಧಿಯಲ್ಲಿ "ಬರ ಮತ್ತು ನೆರೆ" ಎರಡರಿಂದಲೂ ತತ್ತರಿಸಿವೆ. ಜೂನ-ಜುಲೈನಲ್ಲಿ ಮಳೆ ಬಾರದೆ, ಬಿತ್ತನೆ ಮಾಡದೆ, ಬಿತ್ತನೇ ಮಾಡಿದರೂ ಕಾಳು ಮೊಳಕೆಯೊಡೆಯದೆ ರೈತರ ಬದುಕು ಹಾಳಾಗಿ ಹಳ್ಳ ಹಿಡಿಯುತ್ತಿರುವಾಗಲೇ, ಈ ಹತ್ತಿಪ್ಪತ್ತು ವರ್ಷದ ಅವಧಿಯಲ್ಲಿ ಕಂಡು ಕೇಳರಿಯದಷ್ಟು ಮಳೆ ಬಂದು, ಕಣ್ಣೆವೆ ಪಿಳುಕಿಸುವಷ್ಟರಲ್ಲಿ ಇದ್ದ ಬದ್ದ ಬದುಕೆಲ್ಲವೂ ಜಲಸಮಾಧಿಯಾಗಿತ್ತು. ಹದಿನೈದು ಜಿಲ್ಲೆಗಳ ಬಹತೇಕ ಹಳ್ಳಿಗಳಲ್ಲಿ ರೈತ, ಕಾರ್ಮಿಕರಾದಿಯಾಗಿ ಎಲ್ಲರ ಮನೆಗಳು ಇಸ್ಪೀಟಿನ ಎಲೆಗಳಂತೆ ಉದುರಿ ಬಿದ್ದಿದ್ದವು. ಬಿದ್ದ ಮನೆಗಳ ಕರಾರುವಾಕ್ಕಾದ ಲೆಕ್ಕ ಇನ್ನು ಸಿಕ್ಕಿಲ್ಲ. ಅವರ ಹಾಳಾದ ಆಸ್ತಿ-ಪಾಸ್ತಿ, ಜಾನುವಾರುಗಳ ಲೆಕ್ಕ ಮಾಡುವಲ್ಲಿ ಪ್ರಭುತ್ವ ಅಸಹಾಯಕತೆ ತೋರುತ್ತಿರುವುದು ತೀರ ದುರಂತದ ಸಂಗತಿ. ನೆರೆ ಬಂದ ಅವಧಿಯಲ್ಲಿ ಸರಕಾರಿ ಯಂತ್ರ, ಜನಪ್ರತಿನಿಧಿಗಳು ಎಷ್ಟು ಮುತುವರ್ಜಿ ವಹಿಸಿ ರಕ್ಷಣೆ ನೀಡುವ ಕೆಲಸಗಳನ್ನು ಮಾಡಿದವೋ, ನಂತರದ ಪರಿಹಾರ ನೀಡುವ ಸಂದರ್ಭದಲ್ಲಿ ಅಷ್ಟೇ ಬೇಜವಾಬ್ದಾರಿತನ, ಅಸಡ್ಡೆ ಮಾಡಿರುವುದು ಖಂಡಿತ ಕ್ಷಮಾರ್ಹವಲ್ಲ. ನೂರಾರು ಹಳ್ಳಿಗಳಲ್ಲಿ ಈ ಕ್ಷಣಕ್ಕೂ ಜನರು ಬಿದ್ದ ಮುರುಕಲು ಮನೆಗಳಲ್ಲಿ, ತಾತ್ಕಾಲಿಕ ಶೆಡ್ಡುಗಳಲ್ಲಿ, ಶಾಲೆ ಸಮುದಾಯ ಭವನದ ಕಟ್ಟಡಗಳಲ್ಲಿ

ವಾಸಿಸುತ್ತಿದ್ದಾರೆ. ಭಾರತದಂಥ ವಿಶಾಲ ಸಮೃದ್ಧಿ ಹೊಂದಿರುವ ದೇಶದಲ್ಲಿ ಹದಿನೈದು ಜಿಲ್ಲೆಗಳ ಹಾನಿ ಬಹುದೊಡ್ಡದೇನಲ್ಲ. ಇಂಥ ಅವಘಡಗಳನ್ನು ಸಂಭವಿಸಿದಾಗಲೆಂದೇ ಭಾರತ ಬಹು ಹಿಂದೆಯೇ 'ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯಿದೆ' ಮತ್ತು ಅದಕ್ಕಾಗಿ ಪ್ರತ್ಯೇಕ ನಿಧಿಯನ್ನು ನಿಗದಿಪಡಿಸಿದೆ. ಆಶ್ಚರ್ಯದ ಸಂಗತಿ ಎಂದರೆ, ಆ ನಿಯಮಾವಳಿಗಳು ಆದರ್ಶವಾಗಿ ಕಡತ ಮಟ್ಟದಲ್ಲಿಯೇ ಉಳಿದಿವೆ. ವಾಸ್ತವಿಕವಾಗಿ ವಿಪತ್ತು ನಿರ್ವಹಣಾ ಸಮಿತಿಯಾಗಲೀ, ಅವಶ್ಯಕ ಸಂಪನ್ಮೂಲವಾಗಲೀ, ಇಲ್ಲವೇ ಇಲ್ಲ. ಅಷ್ಟಕ್ಕೂ ವಿಜ್ಞಾನ-ತಂತ್ರಜ್ಞಾನವು ದೇದೀಪ್ಯಮಾನವಾಗಿ ಬೆಳೆದಿರುವ ಈ ಯುಗದಲ್ಲಿ ಇಂಥ ಪ್ರಾಕೃತಿಕ ವಿಕೋಪಗಳನ್ನು ಎದುರಿಸುವುದು, ಅಂಥವುಗಳಿಂದ ಜಾಸ್ತಿ ಹಾನಿಯಾಗದಂತೆ ಮಾರ್ಗೋಪಾಯಗಳನ್ನು ಕಂಡುಕೊಳ್ಳುವುದು ಅಸಾಧ್ಯವೇನಲ್ಲ. ಪಕ್ಕದ ಜಪಾನ್, ಕ್ಯೂಬಾ, ಚಿನಾದಂಥ ದೇಶಗಳು ತಮ್ಮ ನಾಡನ್ನು ಕಟ್ಟಿರುವ ಪರಿಯನ್ನು ನಾವು ನೋಡಬೇಕಿದೆ.

ಬಂಧುಗಳೇ, ನಮ್ಮ ನಾಡಿನ ಅಸಂಖ್ಯರು ಇನ್ನೂ ಬೀದಿಯ ಮೇಲೆ ಕಾಲ ಕಳೆಯುತ್ತಿದ್ದು ತುತ್ತು ಅನ್ನಕ್ಕೂ ಪರದಾಡುವ ಸ್ಥಿತಿಯಲ್ಲಿರುವಾಗ ಯಾವುದೇ ಅದ್ದೂರಿ ಸಭೆ, ಸಮಾರಂಭ, ಉತ್ಸವಗಳು ಜಿಗುಪ್ಸೆಯನ್ನು ಮೂಡಿಸುತ್ತವೆ ಅಲ್ಲವೆ? ಆದ್ದರಿಂದ ನಾನು ನಾಡಿನ ನುಡಿಹಬ್ಬದ ಜವಾಬ್ದಾರಿಯುತವಾದ ಈ ವೇದಿಕೆಯನ್ನು ಬರ-ನೆರೆಗಳಿಗೆ ಸಿಕ್ಕು ನಲುಗಿದವರ ಬದುಕನ್ನು ಎತ್ತರಿಸುವ ಚಿಂತನಾ ಕಾರ್ಯಗಾರವಾಗಬೇಕೆಂದು ಆಶಿಸುತ್ತೇನೆ.

ಕನ್ನಡ ಮಾತು ಬಲ್ಲ ಲೋಕವುಳಿದಾಗಲೇ ಕನ್ನಡ ಸಾಹಿತ್ಯ ಉಳಿದು ಬೆಳೆಯಬಲ್ಲದು ಅಲ್ಲವೇ? ಅಷ್ಟಕ್ಕೂ ಈ ಹೊತ್ತು ಕನ್ನಡವನ್ನು ಉಳಿಸಿಕೊಂಡು ಬರುತ್ತಿರುವವರು ಗ್ರಾಮೀಣ ಪ್ರದೇಶದ ಜನಸಾಮಾನ್ಯರೇ ಹೊರತು, ಐಟಿ, ಬಿಟಿ ಲೋಕದ ಶ್ರೀಮಂತ ಫಲಾನುಭವಿಗಳಲ್ಲ ಎಂಬುದನ್ನು ಮರೆಯದಿರೋಣ. ಆದ್ದರಿಂದಲೇ ಕರ್ನಾಟಕದ ಗ್ರಾಮೀಣ ಜನತೆಯ ಬದುಕು, ಅದರಲ್ಲೂ ಮಹಿಳೆಯರ, ದಲಿತರ, ಅಲ್ಪಸಂಖ್ಯಾತರ ಬದುಕಿನ ಬಗೆಗೆ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸಬೇಕಿದೆ.

'ಹೆಣ್ಣಾಗಿ ಹುಟ್ಟುವುದಕ್ಕಿಂತ ಮಣ್ಣಾಗಿ ಹುಟ್ಟಿದರೆ
ಮಣ್ಣಿನ ಮೇಲೊಂದು ಮರವಾಗಿ ಹುಟ್ಟಿದರೆ
ಪುಣ್ಯವಂತರಿಗೆ ನೆರಳಾದೆ'

ಇಂಥ ಹತ್ತಾರು ಜಾನಪದ ತ್ರಿಪದಿಗಳು ಹೆಣ್ಣಿನ ಜನುಮದ ಬಗೆಗೆ ನಕಾರಾತ್ಮಕ ಪರಿಕಲ್ಪನೆಯನ್ನೇ ಕಟ್ಟಿಕೊಡುತ್ತವೆ. ಶೋಷಣೆಯ ಹಲವು ಮಜಲುಗಳಲ್ಲಿ ಬಿದ್ದು ಒದ್ದಾಡಿದ ಅಸಂಖ್ಯ ಸ್ತ್ರೀಯರು ಹೀಗಲ್ಲದೆ ಮತ್ತೆ ಹೇಗೆ ಹಾಡಲು ಸಾಧ್ಯವಿತ್ತು ಎಂದು ಒಮ್ಮ ಅನಿಸಿದರೆ,

ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ
ಗಂಡು ಗಂಡಾದಡೆ ಹೆಣ್ಣಿನ ಸೂತಕ
ಮನದ ಸೂತಕ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ?
ಮುನ್ನಿಲ್ಲದ ಸೂತಕಕ್ಕೆ ಜಗ ಮರುಳಾಯಿತ್ತು ಚನ್ನಮಲ್ಲಿಕಾರ್ಜುನ

ಎಂದು ಅಕ್ಕನಂತೆ ಈ ಎಲ್ಲರೂ ಸಿಡಿದು ಏಳಲಿಲ್ಲವೇಕೆ? ಎಂದು ಸಾತ್ವಿಕ ಕೋಪ

ಬರದೆ ಇರದು. ಆದರೆ ಯಾವುದೇ ಒಂದು ಅಸಮಾನ ವ್ಯವಸ್ಥೆಯಲ್ಲಿ ತಲಸ್ಪರ್ಶಿ ಬದಲಾವಣೆ ತರದ ಹೊರತು ಶೋಷಣೆ ನಿಲ್ಲುವುದಿಲ್ಲ. ಎಂಬ ಸತ್ಯವನ್ನು ಈಗ ಮನಗಂಡಿದ್ದೇವೆ. ಆಧುನಿಕ ಗಾಳಿಯೂ ಭಾರತದ ಜಿಡ್ಡುಗಟ್ಟಿದ ವ್ಯವಸ್ಥೆಯಲ್ಲಿ ಅನೇಕ ಸುಧಾರಣೆ ತಂದಿರುವಂತೆ ಮಹಿಳೆಯರ ಬದುಕಿನಲ್ಲಿಯೂ ದೊಡ್ಡ ಮಟ್ಟದ ಬದಲಾವಣೆ ನಿರೀಕ್ಷಿಸಲಾಗಿತ್ತು. ಆದರೆ ಹಾಗಾಗಲಿಲ್ಲ ಎಂಬುದೇ ನೋವಿನ ಸಂಗತಿ. ಸ್ತ್ರೀಯರಿಗೆ ಸಂಬಂಧಿಸಿರುವಂತೆ ಒಟ್ಟು ಬದುಕು ಆಧುನಿಕವಾಗಿದೆ. ತತ್ಪರಿಣಾಮವಾಗಿ ಶೋಷಣೆಯ ಸ್ವರೂಪ ಮತ್ತು ಗಾತ್ರದಲ್ಲಿ ಬದಲಾವಣೆ ಆಗಿದೆ ಹೊರತು ಸಂಪೂರ್ಣ ಅವಳು ಬಂಧಮುಕ್ತಳಾಗಿಲ್ಲ. ಹೆಚ್ಚುತ್ತಿರುವ ವರದಕ್ಷಿಣೆ ಕಿರುಕುಳ, ಇನ್ನೂ ಜೀವಂತವಾಗಿರುವ ಬಾಲ್ಯ ವಿವಾಹ, ದೇವದಾಸಿ ಪದ್ಧತಿ, ಕೌಟುಂಬಿಕ ಹಿಂಸೆ ಇವೆಲ್ಲವೂ ರೋಗಗ್ರಸ್ತ ಸಮಾಜದ ಲಕ್ಷಣಗಳೇ ಆಗಿವೆ. ಸಮಾಜದ ನಂಬಿಕೆಗಳಲ್ಲಿ ಬದಲಾವಣೆ ತರದ ಹೊರತು, ಆಧುನಿಕ ಜೀವನಶೈಲಿಯಲ್ಲಾದ ಎಂಥ ಕ್ರಾಂತಿಕಾರಿ ಆವಿಷ್ಕಾರಗಳಾದರೂ ಸ್ತ್ರೀಯರ ಪರವಾಗಿರುವುದಿಲ್ಲ ಎಂಬುದಕ್ಕೆ ಹೆಣ್ಣು ಭ್ರೂಣ ಹತ್ಯೆಯೇ ಜ್ವಲಂತ ಸಾಕ್ಷಿಯಾಗಿದೆ. ಈ ನಡುವೆ ಶಹರುಗಳ ಕಾಲ್ ಸೆಂಟರ್‌ಗಳಲ್ಲಿ ಕೆಲಸಮಾಡುತ್ತಿರುವ ಮಹಿಳೆಯರು, ಫ್ಯಾಕ್ಟರಿಗಳಲ್ಲಿ ದುಡಿಯುತ್ತಿರುವ ಮಹಿಳೆಯರು, ನೌಕರಸ್ತ ಮಹಿಳೆಯರು ಇನ್ನಿಲ್ಲದ ಸಂಕಟಗಳಿಗೆ ಬಲಿಯಾಗುತ್ತಿದ್ದಾರೆ. ಇತ್ತೀಚೆಗೆ ಒಂಟಿ ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ಕೊಲೆಗಳು ಹೆಚ್ಚಾಗುತ್ತಿರುವುದು ತುಂಬಾ ಆತಂಕಕಾರಿ ಸಂಗತಿಯಾಗಿ ಪರಿಣಮಿಸುತ್ತಿವೆ. ಗ್ರಾಮೀಣ ಪ್ರದೇಶದ ರೈತಾಪಿ, ಕೃಷಿ, ಕಾರ್ಮಿಕ ಮಹಿಳೆಯರ ಸಮಸ್ಯೆಗಳು ಹೊಸ ಹೊಸ ರೂಪ ತೊಟ್ಟು ಎದುರಾಗುತ್ತಿವೆ. ಈ ದೇಶದಲ್ಲಿ ಮಹಿಳೆಯರಿಗೆ ಕನಿಷ್ಠ ಶೌಚಾಲಯದ ವ್ಯವಸ್ಥೆ ಇಲ್ಲ ಎಂಬ ಸಂಗತಿಯನ್ನು ಎಷ್ಟು ಸಲ ಅಂತ ಪ್ರಶ್ನಿಸುವುದು ಎಂಬಂತಾಗಿದೆ.

ಇನ್ನೊಂದೆಡೆ ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು, ಧನಿಕರ ದರ್ಬಾರಿನಲ್ಲಿ ಗಮನಕ್ಕೂ ಬರದಂತೆ ನೇಪಥ್ಯಕ್ಕೆ ಸರಿಯುತ್ತಿವೆ. ಖಾಸಗಿಕರಣದ ಸಂತೆಯಲ್ಲಿ ಮೀಸಲಾತಿಯಂಥ ಅವಕಾಶಗಳು ಹಿಂಬಾಗಿಲಿನಿಂದ ಪರಾರಿಯಾಗುತ್ತಿವೆ. ಮಗದೊಂದೆಡೆ ಕೋಮುದ್ವೇಷದ ದಂಗೆಗೆ ಬಲಿಯಾಗಿ ಜನಸಾಮಾನ್ಯರು ಸಹನಾ ಸಂಸ್ಕೃತಿಗೆ ತಿಲಾಂಜಲಿ ಕೊಡುತ್ತಿದ್ದಾರೆ. ದಿನಬೆಳಗಾದರೆ ನಡೆಯುತ್ತಿರುವ ಚರ್ಚ್ ಮೇಲಿನ ದಾಳಿಗಳು, ಭಾಷಾ ಹೆಸರಿನಿಂದ ನಡೆಯುತ್ತಿರುವ ಅನಾವಶ್ಯಕ ದೊಂಬಿ, ಗಲಭೆಗಳು, ಮತ್ತೊಂದು ಕಡೆ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿರುವ ಗಡಿ ಸಮಸ್ಯೆಗಳು, ರಾಜಕೀಯ ದುರಾಕ್ರಮಣಗಳು ಹೀಗೆ ಎಷ್ಟೊಂದು ಸಮಸ್ಯೆಗಳು ರಿಪಿಯಾಗಿ ಕಾಡುತ್ತಿವೆ. ಈ ಎಲ್ಲವುಗಳ ಪರಿಹಾರಕ್ಕಾಗಿ ಪ್ರಭುತ್ವಕ್ಕೆ ದೊಡ್ಡ ಇಚ್ಛಾಶಕ್ತಿ ಬೇಕು. ಇಂಥ ಇಚ್ಛಾಶಕ್ತಿಯ ಸಂಚಯಕ್ಕಾಗಿ ಸಾಂಸ್ಕೃತಿಕ ರೂವಾರಿಗಳು ತಮ್ಮ ಜವಾಬ್ದಾರಿಯನ್ನು ನಿಭಾಯಿಸಲೇಬೇಕಲ್ಲವೆ? ಕನ್ನಡಕ್ಕಾಗಿ ನಾವು ಕನಸಿದ ಶಾಸ್ತ್ರೀಯ ಸ್ಥಾನಮಾನ ದೊರೆತಾಗಿದೆ. ಆದರೆ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವ ದಿಶೆಯಲ್ಲಿ ನಾವೆಲ್ಲ ಕಾರ್ಯಪ್ರವೃತ್ತರಾಗಬೇಕಿದೆ. ಒಂದು ವೇಳೆ ನಾವು ಈ ದಾರಿಯಲ್ಲಿ ಎಚ್ಚರಿಕೆಯಿಂದ ಹೆಜ್ಜೆಯಿಟ್ಟು ದಾಪುಗಾಲು ಹಾಕದಿದ್ದರೆ ಮುಂದೊಂದು ದಿನ ಇಂಥದ್ದು ಬರುತ್ತದೆ. ಆಗ ಒಂದು ಕಡೆ ಶೋಷಕ ಇನ್ನೊಂದು ಕಡೆ ಶೋಷಿತರು, ಒಂದು ಕಡೆ

ಇದ್ದವರು, ಇನ್ನೊಂದು ಕಡೆ ಇಲ್ಲದವರು, ವಿರುದ್ಧ ದಿಕ್ಕಿನಲ್ಲಿ ಎದಿರುಬದಿರಾಗಿ ನಿಲ್ಲುವ ಈ ಎರಡರಲ್ಲಿ ನಾವು ಕೇವಲ ಒಂದನ್ನು ಆರಿಸಿಕೊಳ್ಳುವ ಪರಿಸ್ಥಿತಿ ಖಂಡಿತ ಬರುತ್ತದೆ. ಅಂಥ ನಿರ್ಣಾಯಕ ಹಂತದಲ್ಲಿ ಸಾಂಸ್ಕೃತಿಕ ಯಜಮಾನನಾದ ಸಾಹಿತಿ ಯಾರ ಪರ ನಿಲ್ಲಬೇಕು? ಶೋಷಿತರ ಪರವೋ? ಅಥವಾ ಶೋಷಕರ ಪರವೋ? ನಿರ್ಧಾರ ನಿಮಗೆ ಬಿಟ್ಟಿದೆ. ಜನರು ಹಸಿವಿನಿಂದ ಸಾಯುತ್ತಿರುವಾಗ, ನಿರುದ್ಯೋಗಿಗಳು ನಿರ್ಗತಿಕ ಸ್ಥಿತಿಗೆ ದೂಡಲ್ಪಡುತ್ತಿರುವಾಗ, ನಮ್ಮೆಲ್ಲರಿಗೂ ಅನ್ನ ಹಾಕಿ ತಾನೇ ಅನ್ನಾನ್ನ ನಿರ್ಗತಿಕನಾಗಿ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ಸಾಂಸ್ಕೃತಿಕ ವಕ್ತಾರರಾದ ಸಾಹಿತಿ, ಕಲಾವಿದ, ಬುದ್ಧಿಜೀವಿಗಳೇ ನಿಮ್ಮ ನಿಲುವು ಮತ್ತು ನೆಲೆಯನ್ನು ಖಚಿತಪಡಿಸಿಕೊಳ್ಳುವ ತುರ್ತು ಈಗ ಬಂದಿದೆ. ಹೇಳಿ ನೀವು ಯಾರ ಪರ? ಯಾಕೆಂದರೆ ನಿಮ್ಮ ನಿರ್ದಿಷ್ಟ ನಿಲುವೇ ಸಾಹಿತ್ಯ ಮತ್ತು ಸಮಾಜದ ಗತಿಯನ್ನು ನಿರ್ಧರಿಸಲಿದೆ.

ಒಟ್ಟಾರೆಯಾಗಿ ವಚನಕಾರರು, ಹರಿದಾಸರು, ತತ್ವಪದಕಾರರು, ಜನಪದರು ಅಂದು ತಮ್ಮ ಸಾಹಿತ್ಯದಿಂದ ಸಾವಿರಾರು ವರ್ಷಗಳುದ್ದಕ್ಕೂ ಮಾಡಿಕೊಂಡು ಬಂದ ಜನಜಾಗೃತಿ, ಶಾಂತಿಸೌಹಾರ್ದತೆ, ಪ್ರೀತಿವಾತ್ಸಲ್ಯ, ಕ್ರಾಂತಿ ಚಳುವಳಿಗಳ ಮೂಲಕ ಸುಧಾರಣೆ ಮತ್ತು ಜನಹಿತ ಕಾರ್ಯವನ್ನು ಇಂದಿನ ಸಾಹಿತಿಗಳೂ ಸಾಧಿಸಿ ತೋರಿಸಬೇಕಾಗಿದೆ. ಬರೀ ಶಬ್ದಾಡಂಬರದ ರಂಜನೀಯ ಸಾಹಿತ್ಯ ನಮಗೆ ಬೇಡ, ಸಾಹಿತ್ಯ ಅದೊಂದು ಮಾನಸಿಕ ಸುಧಾರಣೆಯ ಸಾಧನ. ಅದು ಸಮಾಜದ ಅಭ್ಯುದಯಕ್ಕಾಗಿ ದುಡಿಯುವಂತಾಗಬೇಕು.

ವಿಜ್ಞಾನಿಯ ತಲೆ, ಸಂತನ ಹೃದಯ ಈ ದೇಶಕ್ಕೆ ಬೇಕು. ಬುದ್ಧನ ಕರುಣೆ, ಬಸವನ ಛಲ, ಬಾಬಾ ಸಾಹೇಬರ ಸ್ವಾಭಿಮಾನ ಮತ್ತು ಗಾಂಧೀಜಿಯ ಅಹಿಂಸೆಯ ತುಡಿತ ಈ ಎಲ್ಲವನ್ನು ಹುರಿಗೊಳಿಸಿ ಹೊಸೆದ ಹಗ್ಗದಿಂದಲೇ ನಾವು ಸರ್ವರ ಅಭ್ಯುದಯ ಸಾಧಿಸಬಲ್ಲ ನಭೋಸ್ಪರ್ಶಿ ವ್ಯವಸ್ಥೆಗೆ ಏಣಿ ಕಟ್ಟಬೇಕಾಗಿದೆ.

* * *

ಶುಭಾಶಯ

ವಿಕೃತಿ ನಾಮ ಸಂವತ್ಸರದ ಆಗಮನದ ಶುಭ ಸಂದರ್ಭದಲ್ಲಿ ಜನಪದ ವಿಚಾರದ ಚಂದಾದಾರರಿಗೆ, ಓದುಗರಿಗೆ ಮತ್ತು ಜನಪದ ಸೇವಾ ಟ್ರಸ್ಟಿನ ದಾನಿಗಳಿಗೆ ಹಾಗೂ ಅಭಿಮಾನಿಗಳಿಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು – ಸಂ

ಮಹಾತ್ಮರ ಪ್ರತಿಮೆ : ಮುಖ್ಯಮಂತ್ರಿ ಬರಲಿಲ್ಲ

(ಆಂಗ್ಲ ಮೂಲ : ಕೆ.ಜಿ.ಮಲ್ಯ : ಕನ್ನಡಕ್ಕೆ : ಲ.ನರಸಿಂಹಯ್ಯ)

(ಕಳೆದ ಸಂಚಿಕೆಯಿಂದ ಮುಂದುವರಿದದ್ದು...)

ಅಂದು ವಿಜಯದಶಮಿ ದಿನ! ಹೊತ್ತು ಎಂದಿನಂತೆ ಮೂಡಿ ತನ್ನ ಹೊಂಗಿರಣಗಳನ್ನು ಎಲ್ಲೆಡೆ ಬೀರಿತ್ತಾದರೂ, ಗಾಂಧೀ ಮೈದಾನದಲ್ಲಿ ಮಾತ್ರ ತೀರಾ ರಂಗು-ರಂಗಿನ ಮತ್ತು ಹಬ್ಬದ ಸಡಗರ ಕಂಡು ಬರುತ್ತಿತ್ತು. ಅಲ್ಲಿ ವಿಶಾಲವಾದ ಶಾಮಿಯಾನ ಇದ್ದಿತು. ಹೂ, ತೋರಣ, ಆಕಾಶಬುಟ್ಟಿ ಮತ್ತು ಮಾವಿನಸೊಪ್ಪು ಮುಂತಾದವುಗಳಿಂದ ಸಮುಚಿತವಾಗಿ ಅಲಂಕರಿಸಲ್ಪಟ್ಟಿತ್ತು. ಅದರ ಒಳಗೆ ಮತ್ತು ಹೊರಗೆ ಇದ್ದ ಧ್ವನಿವರ್ಧಕಗಳ ಮೂಲಕ ಒಂದಾದ ಮೇಲೆ ಒಂದರಂತೆ ಧ್ವನಿ ಮುದ್ರಿಕೆಗಳು ಕೇಳಿ ಬರುತ್ತಿದ್ದವು. ಪುರಸಭಾಧ್ಯಕ್ಷರ ಆಹ್ವಾನವನ್ನು ಅಂಗೀಕರಿಸಿದ್ದ ರಾಜ್ಯದ ಮುಖ್ಯಮಂತ್ರಿಯವರು ಸ್ಥಳಕ್ಕೆ ಬಂದು ಭೂಮಿ ಪೂಜೆ ಮಾಡುವುದನ್ನು ಖುದ್ದು ನೋಡುವುದಕ್ಕಾಗಿ ಇಡೀ ಪಟ್ಟಣದ ಜನ ಮೈದಾನದಲ್ಲಿ ಜಮಾಯಿಸಿತ್ತು. ಕಳೆದ ಒಂದು ನೂರು ವರ್ಷದ ಇತಿಹಾಸದಲ್ಲಿ ತಮ್ಮ ಪುರಸಭೆ ಕಂಡ ಅಧ್ಯಕ್ಷರುಗಳ ಪೈಕಿ ಅತ್ಯಂತ ಕಿರಿಯರು, ಕಿರಿಯರು ಮಾತ್ರವಲ್ಲ ಮೇಧಾವಿಗಳು ಮತ್ತು ಅಷ್ಟೇ ಉತ್ಸಾಹಿಗಳು, ಸರಿಯಾದ ಅವಕಾಶ ಮತ್ತು ಪ್ರೋತ್ಸಾಹ ದೊರಕಿದ್ದೇ ಆದರೆ ಯಾವ ಹುದ್ದೆಯನ್ನಾದರೂ ನಿರ್ವಹಿಸುವ ಸಾಮರ್ಥ್ಯವಿದೆಯೆಂದು ಸೇರಿದ್ದವರು ಅಭಿಪ್ರಾಯಪಡುತ್ತಿದ್ದರು. ಶಾಮಿಯಾನದ ಒಳಗೆ ಮುಖ್ಯ ಅತಿಥಿಗಳಿಗಾಗಿ, ಎದ್ದು ಕಾಣುವ ವಿಶೇಷವಾದ ವೇದಿಕೆಯೂ ನಿರ್ಮಾಣವಾಗಿತ್ತು. ಅದರ ಮುಂಭಾಗದಲ್ಲಿ ಆಹ್ವಾನಿತರಿಗಾಗಿ ಕುರ್ಚಿಗಳನ್ನು ಒಪ್ಪವಾಗಿ ಜೋಡಿಸಲಾಗಿತ್ತು.

ಶಾಮಿಯಾನದಿಂದ ಹೊರಗೆ ಕೆಲವು ಮೀಟರುಗಳ ದೂರದಲ್ಲಿ ಭೂಮಿ ಪೂಜೆಗಾಗಿ ಸ್ಥಳವನ್ನು ಗುರುತಿಸಲಾಗಿತ್ತು. ವಸ್ತುತಃ ಪುರೋಹಿತರು ಎಲ್ಲ ರೀತಿಯಲ್ಲೂ ಸಿದ್ಧರಾಗಿ ಭೂಮಿ ಪೂಜೆ ಮಾಡಲು ಅಪ್ಪಣೆಗಾಗಿ ಮಾತ್ರ ಕಾಯುತ್ತಿದ್ದರು.

ಪುರಸಭೆಯ ಹಿರೀ ಸದಸ್ಯರೊಬ್ಬರನ್ನು ಬಿಟ್ಟು ಮಿಕ್ಕವರೆಲ್ಲರೂ, ಅಧ್ಯಕ್ಷರ ಕೋರಿಕೆಯಂತೆ ಸಕಾಲದಲ್ಲಿ ಹಾಜರಾಗಿದ್ದರು. ಮುಖ್ಯ ಅತಿಥಿಗಳನ್ನು ಮತ್ತು ಆಹ್ವಾನಿತರನ್ನು ಸ್ವಾಗತಿಸಲು ಪ್ರವೇಶದ್ವಾರದ ಬಳಿ ಎಲ್ಲರೂ ಸಾಲಾಗಿ ನಿಂತಿದ್ದರು.

ಮುಖ್ಯಮಂತ್ರಿಯವರು ಮತ್ತು ಸಂಬಂಧಪಟ್ಟ ಮಂತ್ರಿಯವರೂ ಒಂಭತ್ತು ಗಂಟೆಗೆ ಸ್ಥಳಕ್ಕೆ ಆಗಮಿಸುವ ಕಾರ್ಯಕ್ರಮವಿತ್ತು. ರಾಜಧಾನಿಗೆ ಯಾರಾದರೂ ಹೋಗಿ ಅಲ್ಲಿಂದ ಅವರನ್ನು ಸಾಂಪ್ರದಾಯಿಕವಾಗಿ ಬೆಂಗಾವಲಿನಲ್ಲಿ ಕರೆದುಕೊಂಡು ಬರುವಂಥದೇನೂ ಇರಲಿಲ್ಲ. ಮುಖ್ಯಮಂತ್ರಿಯವರು ಬಹಳ ಶಿಸ್ತಿನ ಮನುಷ್ಯ, ತನ್ನದಲ್ಲದ ತಪ್ಪು-ಕಾರಣಗಳನ್ನು ಬಿಟ್ಟರೆ ಮಿಕ್ಕೆಲ್ಲ ಸಂದರ್ಭಗಳಲ್ಲಿಯೂ ಸಮಯಪಾಲನೆಗೆ ಅವರು ಹೆಸರಾಗಿದ್ದರು. ಆದ್ದರಿಂದ ಅವರು ಸಕಾಲದಲ್ಲಿ ಬಂದೇ ಬರುವರೆಂಬ ಭರವಸೆ ಅಧ್ಯಕ್ಷರಿಗೂ ಇತ್ತು. ನಿಗದಿಯಾಗಿದ್ದ ಒಂಭತ್ತು ಗಂಟೆ ಆಯಿತು, ಒಂದೊಂದು ನಿಮಿಷವೂ ಮುಂದೆ ಸಾಗುತ್ತಿತ್ತಾದರೂ ಮುಖ್ಯಮಂತ್ರಿಯವರಾಗಲೀ,

ಸಂಬಂಧಪಟ್ಟ ಮಂತ್ರಿಯವರಾಗಲೀ ಬರುವ ಯಾವ ಲಕ್ಷಣವೂ ಕಂಡು ಬರಲಿಲ್ಲ. ಅಧ್ಯಕ್ಷರಿಗೆ ಆತಂಕ ಶುರುವಾಯಿತು. ಗಂಟೆ ಒಂಭತ್ತೂವರೆಯಾಯಿತು. ಆ ವೇಳೆಗೆ ಇಡೀ ಶಾಮಿಯಾನ ಆಹ್ವಾನಿತರಿಂದ ತುಂಬಿ ಹೋಗಿತ್ತು. ಧ್ವನಿ ಸುರುಳಿ ಮಾತ್ರ ತನ್ನ ಪಾಡಿಗೆ ತಾನು ಹಾಡುತ್ತಿತ್ತು. ಕಾಲ ಕಳೆದರೂ ಅತಿಥಿಗಳ ಆಗಮನದ ಸುಳಿವು ಮಾತ್ರ ಕಂಡುಬರಲಿಲ್ಲ. ಸೇರಿದ್ದ ಜನ ಆಕಳಿಸತೊಡಗಿದರು. ಪೂಜಾ ಕಾರ್ಯಕ್ಕೆ ಪ್ರಶಸ್ತವಾದ ಮುಹೂರ್ತವು ಕಳೆದುಹೋಗುವುದೆಂದು ಪುರೋಹಿತರು ಪದೇ ಪದೇ ತಮ್ಮ ಕೈಗಡಿಯಾರವನ್ನು ನೋಡಿಕೊಳ್ಳುತ್ತಿದ್ದರು. ಅಧ್ಯಕ್ಷರು ಮತ್ತು ಪುರಸಭಾ ಸದಸ್ಯರು, ಹೆದ್ದಾರಿಯತ್ತ ತಮ್ಮ ಕತ್ತುಗಳನ್ನು ನೀಳವಾಗಿಸಿ ನೋಡತೊಡಗಿದರು.

"ಎಲ್ಲೋ ಏನೋ ಅನಿರೀಕ್ಷಿತ ತೊಂದರೆಯಾಗಿರಬೇಕು ಅಂತ ಕಾಣುತ್ತೆ. ಇಲ್ಲದೆ ಇದ್ದಿದ್ದರೆ..." ಪಕ್ಕದಲ್ಲಿದ್ದ ಪುರಸಭಾ ಸದಸ್ಯರ ಹತ್ತಿರ ಅಧ್ಯಕ್ಷರು ಹೇಳಿದರು.

"ಹೌದು ಸರ್, ನನಗೂ ಹಾಗೇ ಅನಿಸುತ್ತೆ. ಇಲ್ಲದೇ ಹೋಗಿದ್ದರೆ ಇಷ್ಟು ಹೊತ್ತಿಗೆ ಅವರು ಇಲ್ಲಿಗೆ ಬಂದು ಇಳೀತಿದ್ರು" ಸದಸ್ಯರು ಮಾತು ಕೂಡಿಸಿದರು.

"ಒಂಭತ್ತು ನಲವತ್ತೈದು ಆಯಿತು, ಯಾವ ಸುದ್ದಿಯೂ ಇಲ್ಲ, ಏನಾಗಿರಬಹುದು?" ಅಸಹಾಯಕರಾಗಿ ಅಧ್ಯಕ್ಷರು ಅನುಮಾನಿಸಿದರು.

"ಏನೋ ಆಗಿರಬಹುದು ಸಾರ್! ವಾಹನದ ತೊಂದರೆಯಿಂದ ಹಿಡಿದು ಕಾರ್ಯಕ್ರಮವನ್ನ ರದ್ದು ಮಾಡೋವರೆಗೆ ಏನೂ ಆಗಿರಬಹುದು, ರಾಜಧಾನಿಯಿಂದ ಇಲ್ಲಿಗೆ ಮೂರು ಗಂಟೆ ಪ್ರಯಾಣ, ಬೆಳಿಗ್ಗೆ ಆರೂವರೆ, ಆರೂಮುಕ್ಕಾಲಿಗೆ ಹೊರಟಿದ್ದರೂ ಇಷ್ಟೊತ್ತಿಗೆ ಇಲ್ಲಿಗೆ ಬರಬಹುದಾಗಿತ್ತು." ಸದಸ್ಯರು ಮಾತಾಡಿ ಸಮಯ ಕಳೆಯಲು ಪ್ರಯತ್ನಿಸಿದರು.

ಅಷ್ಟು ಹೊತ್ತಿಗೆ, ಬೈಸಿಕಲ್ ಸವಾರನೊಬ್ಬ ವೇಗವಾಗಿ ಶಾಮಿಯಾನದತ್ತ ಬರುತ್ತಿರುವುದು ಅವರ ಗಮನಕ್ಕೆ ಬಂದಿತು. ತೀರಾ ಆತುರಾತುರವಾಗಿ ಬರುತ್ತಿದ್ದ ಅವನನ್ನೇ ನೋಡುತ್ತ ನಿಂತರು.

ಹತ್ತಿರ ಹತ್ತಿರಕ್ಕೆ ಬರುತ್ತಿದ್ದಂತೆ, ಬೈಸಿಕಲ್ ಸವಾರ ವೇಗವನ್ನು ಕಡಿಮೆ ಮಾಡಿದ, ಪ್ರವೇಶದ್ವಾರದ ಹತ್ತಿರ ಪುರಸಭಾಧ್ಯಕ್ಷರನ್ನು ಕಂಡು ಇಳಿದ, ಗೌರವಪೂರ್ವಕವಾಗಿ ನಮಸ್ಕಾರ ಮಾಡಿ ಲಕೋಟೆಯೊಂದನ್ನು ಅವರ ಕೈಗೆ ಕೊಟ್ಟ. ಅಧ್ಯಕ್ಷರಿಗೆ ಕಾತರ ಉಂಟಾಯಿತು. ಆತುರಾತುರವಾಗಿ ಅದನ್ನು ತೆರೆದು ನೋಡಿದರು. ಪುರಸಭೆಯ ಹಿರೀ ಸದಸ್ಯರು ರವಾನಿಸಿದ್ದ ಪತ್ರ ಅದಾಗಿತ್ತು. ಅದರ ಒಕ್ಕಣೆ ಹೀಗಿತ್ತು. "ಅಧ್ಯಕ್ಷರೇ, ರಾಜ್ಯದ ಸ್ಥಳೀಯ ಸಂಸ್ಥೆಗಳ ಸನ್ಮಾನ್ಯ ಸಚಿವರು ರಾಜಧಾನಿಯಿಂದ ದೂರವಾಣಿ ಮೂಲಕ ನನ್ನ ಹತ್ತಿರ ಮಾತನಾಡಿದರು. ದೆಹಲಿಯಿಂದ ತುರ್ತಾದ ಕರೆಯೊಂದರ ನಿರೀಕ್ಷೆಯಲ್ಲಿರುವುದರಿಂದ ಮುಖ್ಯಮಂತ್ರಿಯವರು ಮತ್ತು ತಾವು ಸ್ಥಳದ ಕಾರ್ಯಕ್ರಮಕ್ಕೆ ಹಾಜರಾಗಲು ಸಾಧ್ಯವಾಗುತ್ತಿಲ್ಲವೆಂದೂ, ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಲೆಂದೂ ತಿಳಿಸಿದ್ದಾರೆ, ಹಾರೈಸಿದ್ದಾರೆ."

ಪತ್ರವನ್ನು ಓದಿಕೊಂಡ ಮೇಲೆ ತಮ್ಮ ತುಟಿ ಕಚ್ಚಿಕೊಳ್ಳುತ್ತಾ "ಇದು ಇರಲಿ, ನಿಮ್ಮ ಯಜಮಾನರೆಲ್ಲಿ?" ಎಂದು ಕೇಳಿದರು.

"ಸರ್, ಅವರಿಗೆ ವಿಪರೀತ ತಲೆನೋವಂತೆ. ಅದಕ್ಕೆ ಅವರು ರೆಸ್ಟ್‌ನಲ್ಲಿದ್ದರು ಸಾರ್!" ಕೈ ಮುಗಿದು ಕ್ಷಮೆಯನ್ನು ಕೋರುವಂತೆ ಬೈಸಿಕಲ್ ಸವಾರ

ಮಾತನಾಡಿದ.

"ಹೌದಾ! ಹಾಗಾದರೆ ನೀನು ವಾಪಸ್ಸು ಹೋಗುವಾಗ ಮುನ್ಸಿಪಲ್ ಆಸ್ಪತ್ರೆಯಿಂದ ತಲೆನೋವಿನ ಔಷಧಿ ತೆಗೆದುಕೊಂಡು ಹೋಗಿ ನಿಮ್ಮೆಜಮಾನ್ರಿಗೆ ಕೊಡು, ನಾನೇ ಕಳಿಸಿಕೊಟ್ಟೆ ಅಂತ ಅವರಿಗೆ ಹೇಳು!" ಅಧ್ಯಕ್ಷರು ನಗುತ್ತಾ ಹೇಳಿದರು.

"ಹಂಗೆ ಆಗಲಿ ಸಾರ್!" ಎಂದು ಅಧ್ಯಕ್ಷರಿಗೆ ನಮಸ್ಕಾರ ಮಾಡಿ ಬಂದ ವೇಗದಲ್ಲಿಯೇ ಅವನು ಹಿಂದಿರುಗಿದ. ಅಧ್ಯಕ್ಷರು ಸದಸ್ಯರೊಂದಿಗೆ ಸಮಾಲೋಚಿಸಿದರು. ವ್ಯಕ್ತವಾದ ಅಭಿಪ್ರಾಯ ಸರ್ವಾನುಮತದ್ದಾಗಿತ್ತು. ಮುಖ್ಯಮಂತ್ರಿಗಳು ಮಾಡಬೇಕಾಗಿದ್ದ ಭೂಮಿ ಪೂಜೆಯನ್ನು ಪಟ್ಟಣದ ಪ್ರಥಮ ಪ್ರಜೆಯಾಗಿರುವ ಪುರಸಭಾಧ್ಯಕ್ಷರೇ ಮಾಡಬೇಕು, ಸಭೆಯನ್ನು ಉದ್ದೇಶಿಸಿ ಅವರೇ ಮಾತನಾಡಬೇಕು, ಪುರಸಭೆ ಇರಿಸಿಕೊಂಡಿರುವ ಯೋಜನೆಗಳನ್ನು ಸಭೆಯ ಗಮನಕ್ಕೆ ತರಬೇಕು, ವಿಶೇಷ ಭೋಜನ ವ್ಯವಸ್ಥೆಗೆ ಬದಲಾಗಿ ಸರಳವಾದ ವ್ಯವಸ್ಥೆಯಾಗಬೇಕು. ತಂದಿರುವ ನೆನಪಿನ ಕಾಣಿಕೆಗಳನ್ನು ಅಧ್ಯಕ್ಷರ ಕಾರ್ಯಾಲಯದಲ್ಲಿ ಜೋಪಾನವಾಗಿರಿಸಿದ್ದು ಕಟ್ಟಡದ ಉದ್ಘಾಟನಾ ಸಂದರ್ಭದಲ್ಲಿ ಬಳಸಿಕೊಳ್ಳುವುದಾಗಬೇಕು–ಇತ್ಯಾದಿ. ಈ ತೀರ್ಮಾನಗಳನ್ನು ಸಾರ್ವಜನಿಕ ಸಭೆಗೂ ತಿಳಿಸಿ, ಕಾರ್ಯಕ್ರಮವನ್ನು ಮುಂದುವರಿಸಿದರು.

ತಾಯಿ ಭೂದೇವಿಯನ್ನು ಆವಾಹನೆ ಮಾಡುವ ಮಂತ್ರೋಚ್ಚಾರಣೆಯೊಂದಿಗೆ ಪುರೋಹಿತರು ಪೂಜಾ ಕಾರ್ಯವನ್ನು ಪ್ರಾರಂಭಿಸಿದರು. ಅಲ್ಲಿ ಹಾಕಿದ್ದ ವರ್ತುಲದ ಮುಂಭಾಗದಲ್ಲಿ ಮಣೆಯೊಂದನ್ನು ಹಾಕಿ, ಅದರ ಮೇಲೆ ಕುಳಿತುಕೊಳ್ಳುವಂತೆ ಅಧ್ಯಕ್ಷರಿಗೆ ತಿಳಿಸಿದರು. ಅಧ್ಯಕ್ಷರು ವಿಧೇಯತಾ ಭಾವದಿಂದ ಕುಳಿತುಕೊಂಡು ಭಕ್ತಿ ಭಾವದಿಂದ ಕೈಜೋಡಿಸಿದರು. ಶುಭಾರಂಭ ಸೂಚಕವಾಗಿ ಹಿರಿಯ ಪುರೋಹಿತರು ಅಧ್ಯಕ್ಷರ ಹಣೆಗೆ ಕುಂಕುಮದ ಬೊಟ್ಟನ್ನು ಹಚ್ಚಿದರು. ಮಂತ್ರವನ್ನು ಹೇಳುತ್ತಾ ನೀರನ್ನು ವೃತ್ತದ ಮೇಲೆ ಚುಮುಕಿಸುವಂತೆ, ಹೂಮಾಲೆಯೊಂದನ್ನು ಹಿತ್ತಾಳೆ ಬಿಂದಿಗೆಗೆ ಹಾಕುವಂತೆ ಹೇಳಿದರು. ಅದರಂತೆಯೆ ಹೂಮಾಲೆಯನ್ನು ಹಾಕಿದ ಅಧ್ಯಕ್ಷರು "ಇದು ಯಾವುದರ ಸಂಕೇತ?" ಎಂದು ಕೇಳಿದರು.

ಪುರೋಹಿತರು ಮಂತ್ರೋಚ್ಚಾರಣೆಯನ್ನು ನಿಲ್ಲಿಸಿ, ಗೌರವಪೂರ್ವಕವಾಗಿ ಅಧ್ಯಕ್ಷರನ್ನು ದೃಷ್ಟಿಸುತ್ತಾ–"ಇದು ಕಲಶ, ಬ್ರಹ್ಮಾಂಡದ ಸಂಕೇತ, ಎಲ್ಲ ದೇವತೆಗಳ, ಗ್ರಹಗಳ, ನದಿಗಳ, ಸಾಗರಗಳ ಮತ್ತು ಪವಿತ್ರಗ್ರಂಥಗಳ ಪರಮಸಂಕೇತ. ಬ್ರಹ್ಮಾಂಡದ ಒಂದಂಶವಾಗಿರುವ ತಾಯಿ ಭೂದೇವಿಯನ್ನು ನಾವೀಗ ಪೂಜಿಸುತ್ತಿದ್ದೇವೆ" ಎಂದರು.

"ಹಾಗಾದರೆ ಒಂದು ಸಣ್ಣ ಬದಲಾವಣೆ ಮಾಡುವುದಕ್ಕೆ ಅನುಮತಿ ನೀಡ್ತೀರಾ?" ಎಂದು ಕೇಳಿದರು. "ಅಧ್ಯಕ್ಷ ಮಹಾಶಯರು ಕೇಳುತ್ತಿರುವ ಬದಲಾವಣೆ ಏನಿರಬಹುದು" ಎಂಬುದು ಹಿರಿಯ ಪುರೋಹಿತರಿಗೂ ಒಗಟಾಯಿತು. ಆದರೂ ಏನೆಂದು ಕೇಳುವಷ್ಟು ಧೈರ್ಯ ಉಂಟಾಗಲಿಲ್ಲ.

ಪುರೋಹಿತರ ಸಂದಿಗ್ಧವನ್ನು ಅರ್ಥಮಾಡಿಕೊಂಡ ಅಧ್ಯಕ್ಷರು, "ನಾನು ಬಯಸುತ್ತಿರುವ ಬದಲಾವಣೆ ಇಷ್ಟೆ. ನಮ್ಮ ಪುರಸಭೆಯ ಪ್ರತಿಸದಸ್ಯರು ಮುಖ್ಯಮಂತ್ರಿಯವರಿಗೆ ಹಾಕಲು ಅನುವಾಗುವಂತೆ ಮೂವತ್ತು ಹಾರಗಳನ್ನು

ತರಿಸಿದ್ದೇವೆ. ಈಗ ಅವರು ಬರುವುದಿಲ್ಲಾಂತ ಖಾತ್ರಿ ಆದ್ಮೇಲೆ, ಅವು ವ್ಯರ್ಥವಾಗಬಾರ್ದು. ಆದ್ದರಿಂದ ಈಗ ನಾನು ಈ ಕಲಶಕ್ಕೆ ಅರ್ಪಿಸಿದ ರೀತಿಯಲ್ಲಿಯೇ ನಮ್ಮ ಪುರಸಭಾ ಸದಸ್ಯ ಮಿತ್ರರೆಲ್ಲರೂ ಮಾಲಾರ್ಪಣೆ ಮಾಡಬಹುದೇ?" ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

"ಹಾಗೆ ಮಾಡುವುದರಲ್ಲಿ ತಪ್ಪೇನೂ ಇಲ್ಲ!" ಹಿರಿಯ ಪುರೋಹಿತರು ಸ್ವಲ್ಪ ಅಭ್ಯಂತರಿಸುತ್ತಾ "ಆದರೆ ಒಂದು ವಿಷಯ, ಅವರೆಲ್ಲರೂ ತಮ್ಮ ಪಾದರಕ್ಷೆಗಳನ್ನು ಬಿಟ್ಟು ಮಾಲಾರ್ಪಣೆ ಮಾಡಬೇಕಾಗುತ್ತದೆ. ಗೌರವ ಮತ್ತು ಭಕ್ತಿಗಳ ಸಂಕೇತವಾಗಿ ಪ್ರತಿಯೊಬ್ಬರೂ ಬರಿಗಾಲಿನಲ್ಲಿರಬೇಕು–ಅಷ್ಟೆ!" ಎಂದು ಸ್ಪಷ್ಟ ಪಡಿಸಿದರು.

"ಮಹಮದೀಯರೂ, ಕ್ರಿಶ್ಚಿಯನ್ನರೂ ಮಾಲಾರ್ಪಣೆ ಮಾಡಬಹುದು ತಾನೆ?" ಅನುಮಾನ ಪರಿಹಾರಕ್ಕಾಗಿ ಮತ್ತೆ ಕೇಳಿದರು.

"ಯಾಕಾಗಬಾರದು? ಎಲ್ಲರಿಗೂ ನೆಲೆಯಾಗಿರುವ ಭೂತಾಯಿ ಬಗ್ಗೆ ಅವರಿಗೂ ನಂಬಿಕೆ ಗೌರವ ಇಲ್ಲವೇನು?" ಪುರೋಹಿತರು ಆಶ್ಚರ್ಯ ಚಕಿತರಾಗಿ ಅಧ್ಯಕ್ಷರನ್ನೇ ದೃಷ್ಟಿಸುತ್ತಾ ಕೇಳಿದರು.

"ಉಹ್ಞೂ ಹಾಗಲ್ಲ! ಸಂಪ್ರದಾಯವಾದಿಗಳಾದ ನಮ್ಮ ಪುರೋಹಿತರು ಪೂಜಾಸ್ಥಳಕ್ಕೆ ಸಾಮಾನ್ಯವಾಗಿ ಬೇರೆಯವರನ್ನು ಬಿಡುವುದಿಲ್ಲ, ಅದಕ್ಕಾಗಿ ಕೇಳಿದೆ" ಸ್ಪಷ್ಟಪಡಿಸಿದರು.

ಹಿರಿಯ ಪುರೋಹಿತರು ಮಧ್ಯ ಬಾಯಿಹಾಕಿ– "ಸ್ವಾಮಿ, ದೇವರು ಹೇಗೋ ಈ ಪುರಸಭೆಯೂ ಹಾಗೆಯೆ, ಇದು ಯಾರೊಬ್ಬರ ಖಾಸಗಿ ಆಸ್ತಿಯೂ ಅಲ್ಲ, ವಿವಿಧ ನಂಬಿಕೆಗಳಿಗೆ ಸೇರಿದ ಎಲ್ಲ ನಾಗರೀಕರಿಗೂ ಸೇರಿದ್ದು. ಈ ಭೂಮಾತೆ ವಿವಿಧ ಧಾರ್ಮಿಕ ನಂಬಿಕೆಗಳಿಗೆ ಸೇರಿದವರೆಲ್ಲರ ತವರು" ಎಂಬುದಾಗಿ ಅಥರ್ವಣ ವೇದದ ಉದ್ಘೋಷವಿರುವುದು ತಮಗೂ ತಿಳಿದಿದೆ. ಜಾತಿ, ಪಂಥ ಅಥವಾ ಪಂಗಡ ಎಂಬ ಭೇದವಿಲ್ಲದೆ ಎಲ್ಲರನ್ನೂ, ಎಲ್ಲವನ್ನೂ ತನ್ನ ತಾಯ್ತನದ ತೊಟ್ಟಿಲಲ್ಲಿ ಸಂರಕ್ಷಿಸುತ್ತಿರುವ ಮಹಾತಾಯಿ ಭೂಮಾತೆಗೆ ಒಬ್ಬೊಬ್ಬರಾಗಿ ಬಂದು ಮಾಲಾರ್ಪಣೆ ಖಂಡಿತಾ ಮಾಡಬಹುದು–ಮಾಡಲಿ!" ಎಂದರು.

ಅಧ್ಯಕ್ಷರಿಗೆ ಹಾಗೆಯೇ ಸದಸ್ಯರೆಲ್ಲರಿಗೂ ಸಂತೋಷವಾಯಿತು. ಎಲ್ಲರಿಗಿಂತ ಕೊನೆಯವರಾಗಿ ಮಾಲಾರ್ಪಣೆ ಮಾಡಿದ ಹಿಂಬೆಂಚಿನ ಸದಸ್ಯರು, "ಉಳಿದದ್ದು ಏನೇ ಇರಲಿ, ಭೂತಾಯಿ ನಮಗೆ ತಿನ್ನಲು ಆಹಾರ, ಕುಡಿಯಲು ನೀರು, ಮನೆಕಟ್ಟಿಕೊಳ್ಳಲು, ಕೆಲಸಮಾಡಲು ಮತ್ತು ವಿಶ್ರಾಂತಿ ತೆಗೆದುಕೊಳ್ಳಲು ಸ್ಥಳಾವಕಾಶವನ್ನು ದಯಪಾಲಿಸಿದ್ದಾಳೆ. ನಾವು ಮಾತ್ರ ವಿವೇಚನೆಯಿಲ್ಲದೆ ಆಕೆಯನ್ನು ಶೋಷಣೆ ಮಾಡುತ್ತಿದ್ದೇವೆ. ಆದರೂ ಆಕೆ ಸಹನಶೀಲಳಾಗಿ ಎಲ್ಲವನ್ನೂ ಸಹಿಸಿಕೊಳ್ಳುತ್ತಿದ್ದಾಳೆ. ಭೂತಾಯಿ ನಿಜಕ್ಕೂ ಮಹಾತಾಯಿ!" ಎಂದು ಕೊಂಡಾಡುತ್ತಾ ಕಲಶದ ಮುಂದೆ ಸಾಷ್ಟಾಂಗ ಪ್ರಣಾಮಮಾಡಿದ್ದನ್ನು ಕಂಡು ಎಲ್ಲರೂ ವಿಸ್ಮಯಗೊಂಡರು. ಅವರು ಮೇಲೆದ್ದು, "ಮುಖ್ಯ ಮಂತ್ರಿಯವರು ಬರದೇ ಇದ್ದದ್ದು ಒಳ್ಳೆಯದೇ ಆಯಿತು. ಯಾಕೆಂದ್ರೆ ಭೂತಾಯಿಗೆ ಮಾಲಾರ್ಪಣೆ ಮಾಡಿ ಆಶೀರ್ವಾದವನ್ನು ಬೇಡೋ ಸದವಕಾಶ ನಮಗ್ಯಾರಿಗೂ ಸಿಗ್ತಿರಲಿಲ್ಲ" ಎಂದು ಉದ್ಗರಿಸಿ ಭಕ್ತಿಯಿಂದ ಪುರೋಹಿತರ ಪಾದಕ್ಕೂ ನಮಸ್ಕಾರ ಮಾಡಿ ಆಶೀರ್ವಾದ ಕೋರಿದರು.

ಅದಾದ ಮೇಲೆ, ಕಲಶಕ್ಕೆ ಕರ್ಪೂರವನ್ನು ಬೆಳಗಿದ ಹಿರೀ ಪುರೋಹಿತ, ಹಾಲಿನ ಒಂದು ಕುಡಿಕೆಯನ್ನು ಅಧ್ಯಕ್ಷರ ಕೈಗೆ ಕೊಟ್ಟು ನಿಗದಿಯಾಗಿದ್ದ ಜಾಗದಲ್ಲಿ ಸುರಿಯುವಂತೆ ಹೇಳಿದರು. ಅದರಂತೆ ಕುಡಿಕೆ ಹಾಲನ್ನು ಸುರಿದ ಮೇಲೆ ಅಧ್ಯಕ್ಷರ ಕೈಗೆ ಪಿಕಾಸಿಯನ್ನು ಎತ್ತಿಕೊಟ್ಟು, ಎತ್ತರಿಸಿದ ಧ್ವನಿಯಲ್ಲಿ ಮಂತ್ರೋಚ್ಚಾರಣೆ ಮಾಡುತ್ತಾ, "ಹಾಲನ್ನು ಸುರಿದ ಜಾಗದಲ್ಲಿ ಮೂರು ಸಾರಿ ಮಣ್ಣನ್ನು ಸಾಂಕೇತಿಕವಾಗಿ ಅಗೆಯಿರಿ" ಎಂದು ಹೇಳಿದರು.

ಪಿಕಾಸಿಯನ್ನು ಕೈಗೆತ್ತಿಕೊಂಡು ಅಧ್ಯಕ್ಷರು "ಶಾಸ್ತ್ರಕ್ಕಾಗಿ ಪಿಕಾಸಿಯನ್ನು ಭೂಮಿಗೆ ಮುಟ್ಟಿಸಲೋ, ಒಂದಿಷ್ಟು ಬಲವಾಗಿ ಅಗೆಯಲೋ" ಎಂದು ಕೇಳಿದರು.

"ಅದು ನಿಮಗೇ ಬಿಟ್ಟಿದ್ದು, ನೀವು ಹೇಗೂ ಮಾಡಬಹುದು, ಪಿಕಾಸಿಯಿಂದ ನೀವು ಮೂರು ಬಾರಿ ಭೂಮಿಯನ್ನು ಅಗೆದಿರಿ ಅಂದರೆ, ಶಾಸ್ತ್ರ ರೀತ್ಯ ಕೆಲಸ ಪ್ರಾರಂಭ ಆಯಿತು ಅಂತ ಅರ್ಥ. ಕಟ್ಟಡದ ನಿರ್ಮಾಣ ಕಾರ್ಯ ಮುಂದುವರೆಸಬಹುದು. ಇಲ್ಲಿ ನಿಮ್ಮ ವ್ಯವಸ್ಥೆ ಹೇಗಿದೆಯೋ ತಿಳಿಯದು" ಎಂದರು ಪುರೋಹಿತರು.

"ಸರಿ, ಇದೀಗ ಕೆಲಸವನ್ನು ಪ್ರಾರಂಭಿಸುತ್ತಾ ಇದ್ದೇವೆ!" ಅಧ್ಯಕ್ಷರ ಮುಖದ ಮೇಲೆ ಮುಗುಳ್ನಗೆ ಇತ್ತು ಕೈಯಲ್ಲಿ ಪಿಕಾಸಿಯೂ ಸಿದ್ಧವಾಗಿತ್ತು.

"ಕ್ಷಮಿಸಿ ಸಾರ್, ಒಂದೇ ಒಂದು ಫೋಟೋ ತೆಗೆದುಕೊಳ್ತೀನಿ ಸಾರ್" ಎಂದು ಫೋಟೋಗ್ರಾಫರ್ ಮುಂದೆ ಬಂದ.

"ಆಗಬಹುದು" ಅಧ್ಯಕ್ಷರು ಅನುಮೋದಿಸಿದರು.

ಫೋಟೋಗ್ರಾಫರ್ ತನ್ನ ಕೆಲಸವನ್ನು ಮುಗಿಸಿ ನಮಸ್ಕರಿಸಿ ಅತ್ತಿತ್ತ ಸರಿದ.

ಅಧ್ಯಕ್ಷರು ಪಿಕಾಸಿಯಿಂದ ಬಲವಾಗಿ ಒಂದು ಬಾರಿ, ಎರಡನೇ ಬಾರಿ ಅಗೆದರು. ಇನ್ನೂ ಬಲವಾಗಿ ಮೂರನೆ ಬಾರಿಗೆ ಅಗೆದಾಗ, ಒಳಗಿನಿಂದ "ಠಣ್" ಶಬ್ದ ಕೇಳಿಬಂದಿತು. ಯಾವುದೋ ಲೋಹಾಂಶಕ್ಕೆ ಪಿಕಾಸಿ ತಾಗಿದ ಏಟಿನ ಶಬ್ದ ಅದಾಗಿತ್ತು.

"ಠಣ್" ಶಬ್ದವನ್ನು ಕೇಳಿಸಿಕೊಳ್ಳುತ್ತಿದ್ದಂತೆಯೇ, ಹಣದ ಕೊಪ್ಪರಿಗೆ ದೊರೆಯುವುದಂತೂ ಖಾತ್ರಿ ಎಂದು ಅಲ್ಲಿದ್ದವರೆಲ್ಲ ತೀರ್ಮಾನಿಸಿದರು. ಅಧ್ಯಕ್ಷರು ಪುರಸಭೆಯ ಇಂಜಿನಿಯರ್ ಅವರನ್ನು ಖುದ್ದಾಗಿ ಕರೆದು, ಗೌಪ್ಯವಾಗಿ ಏನನ್ನೋ ಹೇಳಿ ಪಿಕಾಸಿಯನ್ನು ಅವರ ಕೈಗಿತ್ತರು. ಕೂಡಲೆ ಇಂಜಿನಿಯರ್ ತಮ್ಮ ಸಿಬ್ಬಂದಿಯನ್ನು ಕರೆದು ಸಿದ್ಧವಾಗಿರುವಂತೆ ಸೂಚಿಸಿದರು.

ಪೂಜಾಕಾರ್ಯದ ಉಳಿದ ಅಂಶಗಳನ್ನು ಬೇಗ ಬೇಗ ಮಾಡಿ ಮುಗಿಸಿಬಿಟ್ಟರು. ಅದಾದ ಮೇಲೆ ಅಧ್ಯಕ್ಷರು ಮತ್ತು ಅವರ ಸದಸ್ಯ ಮಿತ್ರರು ವೇದಿಕೆಯ ಮೇಲೆ ಆಸೀನರಾದರು.

ಪುರಸಭಾಧ್ಯಕ್ಷರು ಸಂಕ್ಷಿಪ್ತವಾಗಿ ಮಾತನಾಡಿದ ಮೇಲೆ ವೇದಿಕೆ ಕಾರ್ಯಕ್ರಮವೂ ಮುಕ್ತಾಯವಾಯಿತು.

(ಮುಂದುವರಿಯುವುದು...)

* * *

ಶ್ರದ್ಧಾದೇವಿಯೇ ನಮ್ಮ ಶ್ರದ್ಧೆಯನ್ನು ಬಲಪಡಿಸು; ದೀನನಾಗದೆ ನೂರು ವರ್ಷ ಬದುಕು

- ವಿನೋಬಾ

ನಾಸದೀಯಾ ಸೂಕ್ತ

ನಾಸ ದೀಯಾ ಸೂಕ್ತವನ್ನು ಒಂದು ಅಪ್ರತಿಮ ಸೂಕ್ತವೆಂದು ತಿಳಿಯಲಾಗುತ್ತದೆ. ಆ ಸೂಕ್ತವು ಹಿಂದೂಸ್ತಾನದ ತತ್ವಜ್ಞಾನದ ಉಗಮಸ್ಥಾನ. ಅದರಲ್ಲಿ ***ನಾಸದಾಸೀನ್ನೋ ಸದಾಸೀತ್ ತದಾನೀಮ್***... ಆರಂಭದಲ್ಲಿ ಸತ್ ಇರಲಿಲ್ಲ ಎಂದು ಹೇಳಬಹುದು, ಅಸತ್‌ವಿರಲಿಲ್ಲವೆಂದೂ ಹೇಳಬಹುದು.

ಕೆಲವರು ಜಗತ್ತು ಸತ್ಯವೆಂದು ಹೇಳುತ್ತಾರೆ, ಇನ್ನು ಕೆಲವರು ಮಿಥ್ಯೆಯೆಂದು ಹೇಳುತ್ತಾರೆ. ಇನ್ನು ಕೆಲವರು ಉಭಯಸ್ವರೂಪವೆಂದೂ ಹೇಳುತ್ತಾರೆ. ಯಾರು ಈ ಮೂರೂ ಭ್ರಮೆಗಳನ್ನು ಬಿಡುತ್ತಾರೋ ಅವನೇ ಹರಿಯನ್ನು ತಿಳಿಯುತ್ತಾನೆ ಎಂದು ತುಳಸೀದಾಸರು ಹೇಳುತ್ತಾರೆ. ಈಶ್ವರ ಮತ್ತು ಸೃಷ್ಟಿಯ ಸಂಬಂಧದಲ್ಲಿ ಚರ್ಚೆಮಾಡುವವರಿಗೆ 'ಸೃಷ್ಟಿ ಚಿಂತಕ'ರೆಂದು ಗೌಡಪಾದರು ಹೆಸರುಕೊಟ್ಟಿದ್ದಾರೆ. ಈ ಸೃಷ್ಟಿ ಚಿಂತನೆಯನ್ನು ಮುಕ್ತಿ ಮಾರ್ಗಕ್ಕೆ ಬಾಧಕವೆಂದು ತಿಳಿಯಲಾಗಿದೆ. ಗೌತಮ ಬುದ್ಧನೂ ಕೂಡ ಇದೇ ನೀತಿಯನ್ನು ಅನುಸರಿಸಿದ್ದಾನೆ.

ರಚಾನಾನುಪಪತ್ತೇಶ್ಚ ನ ಅನುಮಾನಂ ಎಂಬ ವೇದಾಂತ ಸೂತ್ರ ಪ್ರಸಿದ್ಧವೇ ಇದೆ. ದೇವರ ಸೃಷ್ಟಿ ಮನಸ್ಸಿಗೆ ಅಗೋಚರ. ಆದ್ದರಿಂದ ಅನುಮಾನ ಮಾಡುತ್ತಾ ಕುಳಿತುಕೊಳ್ಳುವುದು ವ್ಯರ್ಥ. ಇದು ಎಂಥ ವಿಚಿತ್ರ ವಿಷಯವೆಂದರೆ ಇದರ ವರ್ಣನೆಯನ್ನು ಸತ್-ಅಸತ್ ಎರಡರಿಂದಲೂ ಮಾಡಲಾಗುವುದಿಲ್ಲ. ***ನಾ ಅಸತ್ ಆಸೀತ್ ನೊ ಸತ್ ಆಸೀತ್*** ಹಾಗಾದರೆ ಈ ಸೃಷ್ಟಿ ಹೇಗೆ ಸೃಷ್ಟಿಯಾಯಿತು? ವಿಸೃಷ್ಟಿ ಹೇಗೆ ಆಗುತ್ತದೆ ಎಂಬುದನ್ನು ಯಾರು ಬಲ್ಲರು ಯಾರು ಹೇಳಬಲ್ಲರು?

ಅದ್ದಾ ವೇದ್‌ಕ ಇಹ ಪ್ರವೋಚತ್ ಕುತ ಆಜಾತಾ ಕುತ ಇಯಂ ವಿಸೃಷ್ಟಿಃ

ಸೃಷ್ಟಿ ಅನಾದಿ ಎಂದು ಭಾಷ್ಯಕಾರರು ಹೇಳಿದ್ದಾರೆ. ಅನಾದಿ ಸೃಷ್ಟಿಯ ಆದಿ ಇರಲು ಸಾಧ್ಯವಿಲ್ಲ. ಆದ್ದರಿಂದ ಎಂದಿನಿಂದ ಪರಮೇಶ್ವರನಿದ್ದಾನೋ ಅಂದಿನಿಂದ ಸೃಷ್ಟಿ ಇದೆ. ಅದು ಇಂದಿನ ರೂಪದಲ್ಲಿ ಇಲ್ಲದೇ ಇರಬಹುದು. ಒಂದಲ್ಲಾ ಒಂದು ರೂಪದಲ್ಲಿದೆ. ಆದ್ದರಿಂದ ಇದರ ಆರಂಭ ಹೇಗೆ ಆಯಿತು ಎಂಬ ಪ್ರಶ್ನೆಯೇ ವ್ಯರ್ಥ. ಸಾರಂಶವಿಷ್ಟೆ, ಜಗತ್ತಿನ ರಚನೆಯ ಜಂಜಾಟವನ್ನು ಬಿಟ್ಟು ದೃಷ್ಟಿಯನ್ನು ಒಳಕ್ಕೆ ಬೀರಬೇಕು. ಆತ್ಮಶೋಧನೆಯನ್ನು ಮಾಡುತ್ತಾ ಹೋಗಬೇಕು. ಇದರಲ್ಲಿಯೇ ಸಾರವಿದೆ.

ನಾಸದೀಯ. ಸೂಕ್ತದಲ್ಲಿ ಮುಂದೆ ಶಾಶ್ವತವಾದ ಧರ್ಮಗೋಪ್ತ ಸ್ವರೂಪದ ಭಗವಂತನ ವರ್ಣನೆ ಇದೆ. ಧರ್ಮದ ಅಧ್ಯಕ್ಷ ಪರಮಾತ್ಮನೆಂದು ಸ್ಮರಿಸಲಾಗಿದೆ. ***ಯೋ ಅಸ್ಯಾಧ್ಯಕ್ಷಃ ಪರಮೇ ವ್ಯೋಮನ್ ಸೊ ಅಂಗ ವೇದ ಯದಿ ವಾ ನ ವೇದ*** ಈ ಸೃಷ್ಟಿಯ ಅಧ್ಯಕ್ಷನಾಗಿರುವಂಥವನು, ಪರಮ ಆಕಾಶದಲ್ಲಿರುವಂಥವನು, ಅಂತರದಲ್ಲಿ ಹೃದಯಾಕಾಶದಲ್ಲಿ ಇರುವಂಥವನು. ಬಹುಶಃ ಇದನ್ನು ತಿಳಿದಿರಬಹುದು ಅಥವಾ ತಿಳಿಯದಿರಬಹುದು. ನನಗೆ

ಈ ಪ್ರಶ್ನೆಗೆ ನಾಸದೀಯ ಸೂಕ್ತದಲ್ಲಿ ಸಿಕ್ಕಂಥ ಉತ್ತರಕ್ಕಿಂತ ಉತ್ತಮವಾದ ಉತ್ತರ ಬೇರೆಲ್ಲಿಯೂ ಸಿಕ್ಕಿಲ್ಲ.

ಪರಮೇ ವ್ಯೋಮನ್ ಶಬ್ದದ ಅರ್ಥ ಹೃದಯಾಕಾಶದಲ್ಲಿ ಇರುವಂಥವನು. ಪರಮಾತ್ಮ ಎಲ್ಲೆಡೆಯೂ ವಿರಾಜಮಾನನಾಗಿದ್ದಾನೆ. ಆದರೂ ಕೂಡ ಅವನ ವಾಸಸ್ಥಾನ ನಮ್ಮ ಹೃದಯ.

ಶ್ರದ್ಧಾಂ ಪ್ರಾತರ್ಹವಾಮಹೇ

ವೇದದಲ್ಲಿ ಮೂರು ನಾಲ್ಕು ಮಂತ್ರಗಳುಳ್ಳ ಒಂದು ಶ್ರದ್ಧಾ ಸೂಕ್ತವಿದೆ ಅದರಲ್ಲಿ **ಶ್ರದ್ಧಾಂ ಭಗಸ್ಯ** ಎಂದು ಹೇಳಿದೆ. ಶ್ರದ್ಧೆಯನ್ನು ಭಗವಂತನ ತಲೆಯ ಮೇಲೆ ಇರಿಸುತ್ತೇವೆ.

ಶ್ರದ್ಧಾಂ ಪ್ರಾತರ್ಹವಾಮಹೇ ಶ್ರದ್ಧಾಂ ಮಧ್ಯಂದಿನಂ ಪರಿ
ಶ್ರದ್ಧಾಂ ಸೂರ್ಯಸ್ಯ ನಿಮ್ರುಚಿ ಶ್ರದ್ಧೇ ಶ್ರದ್ಧಾಪಹೇಹನಃ

ಪ್ರಾತಃಕಾಲದಲ್ಲಿ ಶ್ರದ್ಧೆಯನ್ನು ಆಹ್ವಾನಿಸುತ್ತೇವೆ. ಮತ್ತು ಮಧ್ಯಾಹ್ನವೂ ಶ್ರದ್ಧೆಯನ್ನು ಆಹ್ವಾನಿಸುತ್ತೇವೆ. ಸೂರ್ಯಾಸ್ತದ ಸಮಯದಲ್ಲಿ ಅದೇ ಶ್ರದ್ಧೆಯನ್ನು ಆಹ್ವಾನಿಸುತ್ತೇವೆ. ಹೇ ಶ್ರದ್ಧೇ! ಶ್ರದ್ಧಾ ದೇವೀ!! ನಮ್ಮೆಲ್ಲರ ಶ್ರದ್ಧೆಯನ್ನು ಗಟ್ಟಿಮಾಡು.

ಶತಂ ಜೀವ ಶರದಃ

ಇದು ವೈದಿಕ ಋಷಿಯ ಆಶೀರ್ವಾದ–***ಶತಂ ಜೀವ ಶರದೋ ವರ್ಧಮಾನಃ*** ನಿಮಗೆ ನೂರು ವರ್ಷದ ಆಯುಃ ಪ್ರಾಪ್ತವಾಗಲಿ ವರ್ಧಮಾನಃ–ನಿಮ್ಮ ಧೈರ್ಯ ಬೆಳೆಯುತ್ತಿರಲಿ, ಮಾನಸಿಕ ಶಕ್ತಿ, ತಿರುಗಾಟದ ಶಾರೀರಿಕ ಶಕ್ತಿ ಬೆಳೆಯಬೇಕು. ನೂರು ವರ್ಷ ಪೂರ್ಣ ಮಾಡಬೇಕು. ಪುನಃ ನಂತರ ಹೇಳಿದ, ನೂರು ವರ್ಷಕ್ಕಿಂತಲೂ ಹೆಚ್ಚು ಬದುಕಬೇಕು. ನೂರು ವರ್ಷ ಬದುಕುವ ಮಾತು ವೈದಿಕ ಸಂಸ್ಕೃತಿಯಲ್ಲಿ ಚಲಾವಣೆಯಲ್ಲಿದೆ. ಈಶಾವಾಸ್ಯ ಉಪನಿಷತ್ತಿನಲ್ಲಿ ಕೂಡ ಜೀಜೀ ವಿಶೇತ್ ಶತಂ ಸಮಾಃ ನೂರು ವರ್ಷ ಬದುಕುವ ಇಚ್ಛೆ ಮಾಡು ಆದರೆ ವೇದಗಳು ಮಾಡಿರುವ ಆಶೀರ್ವಾದದಲ್ಲಿ ಇನ್ನೊಂದು ಮಾತೂ ಇದೆ. **ವರ್ಧಮಾನಃ**– ಚಿತ್ತವೃತ್ತಿಗಳು ವಿಕಸಿತಗೊಳ್ಳುತ್ತಿವೆ, ಚಿಂತನಶಕ್ತಿ ಬೆಳೆಯುತ್ತಿದೆ ಎಂಬೀ ಸ್ಥಿತಿಯಲ್ಲಿ ನೂರು ವರ್ಷ ಬದುಕಬೇಕು. ವೃತ್ತಿಗಳು ಕ್ಷೀಣವಾಗುತ್ತಿವೆ, ಚಿಂತನಶಕ್ತಿ ಕಡಿಮೆಯಾಗುತ್ತಿದೆ ಎಂಬ ಸ್ಥಿತಿಯಲ್ಲಿ ಬದುಕಬಾರದು. ಜೈನರು ಮಹಾವೀರರನ್ನು ವರ್ಧಮಾನನೆಂದು ಕರೆದರು. ವರ್ಧಮಾನನೆಂದರೆ ನಿತ್ಯ ಬೆಳೆಯುವಂಥವನು. ಇಂದಿನದು ನಾಳೆ ಇಲ್ಲ, ದಿನೇ ದಿನೇ ಬೆಳೆಯುವವನು. ಮನಸ್ಸಿನ ವಿಕಾಸ, ಗುಣಗಳ ವಿಕಾಸ ದಿನವೂ ಆಗುತ್ತದೆ. ಈ ರೀತಿ ಮಹಾವೀರನ ಸ್ಥಿತಿ ಇದೆ. ವೈದಿಕರೂ ಕೂಡ ಅದನ್ನೇ ಹೇಳಿದರಲ್ಲದೆ, ನಾವು ವರ್ಧಮಾನರಾಗಿರಬೇಕೆಂದು ಆಶಿಸಿದರು. ಚಿತ್ತವೃತ್ತಿಗಳನ್ನು ವಿಕಾಸ ಮಾಡುತ್ತಾ ಮಾಡುತ್ತಾ ಚಿಂತನ ಶಕ್ತಿಯನ್ನು ಹಾಗೂ ಗುಣಗಳನ್ನು ಬೆಳೆಸುತ್ತಾ ನೂರು ವರ್ಷ ಬದುಕಿರಿ.

ವೇದದಲ್ಲಿ **ಭೂಯಶ್ಚ ಶರದಃ ಶತಂ** ಎಂದೂ ಹೇಳಿದೆ. ಮಹಾಭಾರತದಲ್ಲಿ ನೂರಕ್ಕಿಂತಲೂ ಹೆಚ್ಚು ಆಯುಃ ಹೇಳಿದೆ. ಉಪನಿಷತ್ತಿನಲ್ಲಿ– **ಸ ಹ ಷೋಡಶಂ ವರ್ಷಶತಂ ಅಜೀವತ** ಎಂದು ಹೇಳಲಾಗಿದೆ. ಅಂದರೆ ಯಾವನು ಈ ಪ್ರಕಾರ ಚಿಂತಿಸುವನೋ ಆತನು ನೂರ ಹದಿನಾರು ವರ್ಷ ಬದುಕುವನು. ವೇದಗಳು ಹೀಗೆಯೇ ಬೋಧಿಸಿವೆ. **ಅದೀನಾಃ ಸ್ಯಾಮ ಶರದಃ ಶತಂ** ದೀನನಾಗದೆ ನೂರು ವರ್ಷ ಬದುಕಬೇಕು. ಈಶಾವಾಸ್ಯದಲ್ಲಿ **ಕುರ್ವನ್ ಏವ ಇಹ ಕರ್ಮಾಣಿ**– ಕರ್ಮ ಮಾಡುತ್ತಾ ನೂರು ವರ್ಷ ಬದುಕು ಎಂಬ ಮಾತಿನಲ್ಲಿ ಅದೇ ಸೂಚಿತವಾಗಿದೆ.

* * *

ವ್ಯಕ್ತಿ ಕೇಂದ್ರಿತ ಅರ್ಥವ್ಯವಸ್ಥೆಯ ಇತಿಮಿತಿಗಳು

– ರೋಬಿ ರಾಜನ್– ಕನ್ನಡಕ್ಕೆ : ಅಕ್ಷರ.ಕೆ.ವಿ

ಬಂಡವಾಳ ಮತ್ತು ಕಾರ್ಮಿಕ ಶಕ್ತಿಯ ಚಲನೆಗೆ ಯಾವುದೇ ವಿಶೇಷ ಅಡೆತಡೆ ಇಲ್ಲದ ಒಂದು ಸ್ಥಿತಿ ಇದೆಯಾದರೆ, ಆಗ ನಡೆಯುವ ಭಾಗಶಃ ಅತಿ ಉತ್ಪಾದನೆಯು ಕಾಲಕ್ರಮೇಣ ತನ್ನನ್ನೇ ತಾನು ಸರಿಪಡಿಸಿಕೊಳ್ಳುತ್ತದೆ.

– ಜೆ.ಬಿ.ಸೇಯ್

ಸಮಕಾಲೀನ ಅರ್ಥಶಾಸ್ತ್ರವು ನಿರ್ಮಿಸಿದ ಬಂಗಾರದ ಪಂಜರವು ಈಗ ಕಠಿಣ ಆರ್ಥಿಕ ಶಿಸ್ತುಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ–ಹಣದುಬ್ಬರವನ್ನು ನಿಯಂತ್ರಿಸುವ ಸರ್ಕಾರಿ ಖರ್ಚನ್ನು ಕಡಿತಗೊಳಿಸುವ ಮತ್ತು ಸಾರ್ವಜನಿಕ ವೆಚ್ಚವನ್ನು ತಗ್ಗಿಸುತ್ತಾ ಹೋಗುವ ಉಪಾಯಗಳೆಲ್ಲವೂ ಆರ್ಥಿಕ ಧೋರಣೆಯ ಪರಿಣಾಮವೇ ಸರಿ. ಹೊಸ ನಿಯಮಗಳ ಕಾರಣದಿಂದಾಗಿ ಸರ್ಕಾರಗಳು ತೆರಿಗೆ ಮೂಲಕ ಹಣ ವಸೂಲು ಮಾಡಿ ಅದರಿಂದ ಸಮಾಜಕಲ್ಯಾಣ ಕೆಲಸಗಳನ್ನು ಮಾಡುವ ಶಕ್ತಿಯನ್ನು ಕಡಿತಗೊಳಿಸಲಾಗುತ್ತಿದೆ, ಬದಲು ಆರ್ಥಿಕ ಧೋರಣೆಗಳನ್ನೇ ಯಾಂತ್ರಿಕವಾಗಿ ಅನುಸರಿಸಿಕೊಂಡು ನಡೆದರೆ ಅರ್ಥವ್ಯವಸ್ಥೆಯು ತಾನಾಗಿಯೇ ಸರಿದಾರಿಗೆ ಬರುತ್ತದೆ ಎಂದು ನಂಬಲಾಗುತ್ತಿದೆ. ಇವತ್ತಿನ ಅರ್ಥಶಾಸ್ತ್ರದ ಭರವಸೆಯ ಪ್ರಕಾರ "ಇಂಥ ಕಠಿಣ ನಿಯಮಗಳನ್ನು ತಪ್ಪದೇ ಅನುಸರಿಸಿದರೆ ಸಾಕು, ಸಮಾಜ ಜೀವನವು ತನ್ನನ್ನು ಪಲ್ಲಟಗೊಳಿಸುವಂತೆ ಬೆದರಿಸುತ್ತಿರುವ ಏರುಪೇರುಗಳನ್ನು ಹಿಡಿದು ಹದಗೊಳಿಸಿಕೊಂಡು ದೃಢ ಸಂತುಲನವೊಂದನ್ನು ಮರಳಿ ಗಳಿಸಿಕೊಳ್ಳುತ್ತದೆ" ಈ ದೃಷ್ಟಿಯಿಂದ ನೋಡಿದಾಗ, ಇವತ್ತಿನ ಈ ಆರ್ಥಿಕ ಧೋರಣೆಯು ಆಧುನಿಕ ಪೂರ್ವಕಾಲದಲ್ಲಿ ಕಾಣಸಿಗುತ್ತಿದ್ದ ಮುಚ್ಚಿದ ವ್ಯವಸ್ಥೆಯ ಆರ್ಥಿಕತೆಯನ್ನು ನೆನಪಿಗೆ ತರುವಂತಿದೆ ಆದರೆ ಆ ಆಧುನಿಕ ಪೂರ್ವ ಯುಗದಲ್ಲಿ ಆರ್ಥಿಕತೆ ಎಂಬುದೇ ಒಟ್ಟೂ ಸಮಾಜ ವ್ಯವಸ್ಥೆಯ ಒಂದು ಉಪಾಂಗವಾಗಿತ್ತು ಅದೇ ಎಲ್ಲಕ್ಕಿಂತ ಪ್ರಧಾನವಾದ ಗುರಿಯೇನೂ ಆಗಿರಲಿಲ್ಲ. ಆಧುನಿಕ ಅರ್ಥ ವ್ಯವಸ್ಥೆಯು ಆಧುನಿಕ ಪೂರ್ವದ ಅಂಥ ವ್ಯವಸ್ಥೆಯನ್ನೇ ಸಂಪೂರ್ಣವಾಗಿ ಮರುಜೋಡಣೆ ಮಾಡಿದೆ, ಇಲ್ಲಿ ಆರ್ಥಿಕತೆ ಎಂಬುದೇ ಮುಖ್ಯವಾಗಿ ಸಮಾಜದ ಉಳಿದೆಲ್ಲ ವಲಯಗಳೂ (ರಾಜಕಾರಣ, ಸಂಸ್ಕೃತಿ ಮೊದಲಾದ ಕ್ಷೇತ್ರಗಳು) ಆನುಷಂಗಿಕ ವಸ್ತುಗಳಾಗಿ ಬಿಟ್ಟಿವೆ. ಇಂಥ ಸನ್ನಿವೇಶದಲ್ಲಿ ಈ ಅರ್ಥಪ್ರಾಧಾನ್ಯತೆಯನ್ನೇ ಸಮಾಜವನ್ನು ಕಾಯುವ ಒಂದು ಬೆದರು ಬೊಂಬೆಯನ್ನಾಗಿಸಿ ನಿಲ್ಲಿಸುವ ಪ್ರಯತ್ನವನ್ನು ಅರ್ಥವ್ಯವಸ್ಥೆಯು ನೇರವಾಗಿ ಮಾಡಲಿಕ್ಕೆ ಕೈ ಹಾಕಿದೆ.

ಅರ್ಥಶಾಸ್ತ್ರಜ್ಞ ಕೇನ್ಸ್, ಅರ್ಥಶಾಸ್ತ್ರದ ಈ "ನಂಬುವ ಪ್ರಜೆಗಳ ಮಿಥ್ಯೆ" ಯನ್ನು ಮನಗಂಡಿದ್ದನಾದರೂ ಆರ್ಥಿಕತೆಯನ್ನು ಸಮಾಜದಲ್ಲಿ ಇನ್ನೆಲ್ಲ ಕ್ಷೇತ್ರಗಳಿಗಿಂತ ಪ್ರಧಾನವಾಗಿಸುವ ಯೋಜನೆಯಲ್ಲಿ ಪಾಲುದಾರನಾಗಿದ್ದ. ಸೇಯ್‌ನ ನಿಯಮವೊಂದನ್ನು

ನಿರಾಕರಿಸಿದರೆ ಸಾಕು ಆರ್ಥಿಕ ಸಮಸ್ಯೆಗಳೆಲ್ಲವೂ ಪರಿಹಾರವಾಗುತ್ತದೆಂದು ಆತ ಭಾವಿಸಿದ್ದ, ಬಳಿಕೆ ವಸ್ತುಗಳನ್ನು ಕೊಳ್ಳುವುದಕ್ಕೂ ಉಪಯೋಗವಾಗದೆ ಹಾಗೂ ಎಲ್ಲೂ ಹೂಡಿಕೆಯೂ ಆಗದೆ ನುಣಚಿಕೊಳ್ಳುವ ಉಳಿತಾಯದ ಸೋರಿಕೆಯನ್ನು ತಪ್ಪಿಸಿದರೆ ಸಾಕು ಈ ಸಮಸ್ಯೆಯನ್ನು ಬಗೆಹರಿಸಬಹುದೆಂದು ಆತ ತಿಳಿದಿದ್ದ. ಆದರೆ ವಾಸ್ತವ ಸಂಗತಿ ಬೇರೆಯೇ. ಅರ್ಥವ್ಯವಸ್ಥೆ ಎಂಬುದು ಸಮಾಜದ ಕಟ್ಟಡದಲ್ಲಿಯೇ ಅತ್ಯಂತ ಪ್ರಧಾನವಾದ ಅಂಗವೆಂದು ಅದನ್ನು ಹೆಗ್ಗಳಿಸಿದ್ದು ಈ ಸಮಸ್ಯೆಗಳಿಗೆಲ್ಲ ಮೂಲವಾಗಿದೆ, ಮತ್ತು ಅದರಿಂದಾಗಿ ಈ ಇಡಿಯ ವ್ಯವಸ್ಥೆಯಲ್ಲಿ ಒಂದು ಖಾಯಂ ಅಸ್ಥಿರತೆ ನಿರ್ಮಾಣವಾಗಿದೆ. ಸರಾಸರಿ ಬೇಡಿಕೆಯ ಪ್ರಮಾಣವನ್ನು ಹತೋಟಿಯಲ್ಲಿ ಇಟ್ಟುಕೊಂಡಮಾತ್ರಕ್ಕೆ ಈ ಅಸ್ಥಿರತೆಯನ್ನು ಪಳಗಿಸಲು ಸಾಧ್ಯವಾಗದು. ಈ ವ್ಯವಸ್ಥೆಯೊಳಗೆ ಅಂತರ್ಗತವಾಗಿರುವ ಸಮಸ್ಯೆಗಳು–ಬಗೆಗಳನ್ನು ತಣಿಸುವ ಸಲುವಾಗಿ ಅರ್ಥವ್ಯವಸ್ಥೆಯು ಉತ್ಪಾದನೆ ಮಾಡಿದಷ್ಟೂ ತಣಿಯದೆ ಉಳಿಯುವ ಇನ್ನಷ್ಟು ಬಯಕೆಗಳನ್ನು ಹುಟ್ಟುಹಾಕುತ್ತದೆ, ಹೆಚ್ಚು ಹೆಚ್ಚು ಜೈಲುಗಳನ್ನು ನಿರ್ಮಿಸಿದಷ್ಟು ಅಪರಾಧಿಗಳ ಸಂಖ್ಯೆ ಮಿಗುತ್ತಾ ಹೋಗುತ್ತದೆ. ಹೆಚ್ಚು ಹೆದ್ದಾರಿಗಳನ್ನು ನಿರ್ಮಿಸಿದಷ್ಟೂ ಹೆದ್ದಾರಿಗಳ ಮೇಲೆ ಇನ್ನಷ್ಟು ಒತ್ತಡ ಏರುತ್ತದೆ. ಹೊಸ ಔಷಧಗಳನ್ನು ಕಂಡು ಹಿಡಿದಷ್ಟೂ ತ್ವರಿತವಾಗಿ ಹೊಸ ರೋಗಗಳು ಕಾಣಿಸಿಕೊಳ್ಳುತ್ತವೆ.

ಪ್ರಾಚೀನ ಅಧಿಕಾರ ವ್ಯವಸ್ಥೆಗಳಲ್ಲಾದರೋ ಅತಿಗಳನ್ನು ಮಿತಿಗೊಳಿಸಲು ಸಾಂಕೇತಿಕ ಆಚರಣೆ, ವಿಧಿ ವಿಧಾನಗಳು ಸಾಕಾಗುತ್ತಿದ್ದವು. ಆಧುನಿಕ ಅರ್ಥಶಾಸ್ತ್ರಕ್ಕೆ ಇಂಥ ಅನುಕೂಲತೆ ಇಲ್ಲ. ಇರುವ ಒಂದೇ ಉಪಾಯ–ನೇರವಾದ ಹಸ್ತಕ್ಷೇಪ ಮಾತ್ರ. ತನ್ನ ಅಧಿಕಾರವನ್ನು ಬಲಪ್ರಯೋಗದೊಂದಿಗೆ ಬಳಸಿ ಸಾರ್ವಜನಿಕ ಶಾಸನಗಳನ್ನು ರೂಪಿಸಬೇಕು ತನ್ಮೂಲಕ ಆರ್ಥಿಕ ವಿದ್ಯಮಾನಗಳನ್ನು ಹತೋಟಿಗೆ ತಂದುಕೊಳ್ಳಬೇಕು, ಹಾಗೂ ಅದರ ಪರಿಣಾಮವಾಗಿ ಆರ್ಥಿಕ ವಾಸ್ತವವೆಂಬುದನ್ನು ನಿರ್ಮಿಸಿಕೊಳ್ಳಬೇಕು. ಈ ಕಾರಣದಿಂದಾಗಿಯೇ, ಇವತ್ತು ಆರ್ಥಿಕ ಮುನ್ಸೂಚನೆಯೊಂದು ಹೀಗೆ ಘೋಷಿಸುತ್ತದೆ ಅನ್ನೋಣ– 'ಸಾಮಾಜಿಕ ಬಾಬತ್ತುಗಳ ಮೇಲೆ ಮಾಡುವ ಖರ್ಚನ್ನು ಹೆಚ್ಚಿಸಿದರೆ ಅದರಿಂದ ಅರ್ಥಿಕ ಬಿಕ್ಕಟ್ಟು ಉಲ್ಬಣವಾಗುತ್ತದೆ' ಈ ಮುನ್ಸೂಚನೆಯು ಒಂದು ವೇಳೆ ನಿಜವಾಯಿತಾದರೆ, ಅದರ ತಾತ್ಪರ್ಯ ಅರ್ಥಶಾಸ್ತ್ರದ ಮೇಲೆ 'ನಂಬಿಕೆಯಿದೆಯೆಂದು ಭಾವಿತವಾದ ಪ್ರಜೆಗಳು' ಇಂಥ ಬಿಕ್ಕಟ್ಟು ಉಲ್ಬಣಗೊಳ್ಳುತ್ತದೆ ಎಂದು ನಂಬಿದ್ದಾರೆ ಎಂದಷ್ಟೇ ಹೊರತು, ಆರ್ಥಿಕ ಶಿಸ್ತನ್ನು ರೂಢಿಸಿಕೊಳ್ಳುವುದು ಈ ಸಮಸ್ಯೆ ಉಂಟಾಗದಂತೆ ತಡೆಯಬಲ್ಲ 'ವಸ್ತುನಿಷ್ಠ ಮಾರ್ಗ' ಎಂದೇನೂ ಅಲ್ಲ. ಅಂದರೆ, ಅರ್ಥಶಾಸ್ತ್ರವು ಸ್ವತಃ ರೂಪಿಸಿ ರೂಢಿಸಿರುವ ನಿಯಮಗಳೇ ಬಿಕ್ಕಟ್ಟುಗಳು ಉದ್ಭವಿಸುವುದಕ್ಕೆ ಬೇಕಾದ ಸನ್ನಿವೇಶಗಳನ್ನು ಸೃಷ್ಟಿಸುತ್ತವೆಯೇ ಹೊರತು ನಿಜವಾಗಿ ಬಿಕ್ಕಟ್ಟುಗಳ ಮುನ್ಸೂಚನೆ ನೀಡುವುದಿಲ್ಲ.

ಹಣ ಮತ್ತು ಆಯವ್ಯಯದ ನೀತಿಗಳ ಮೂಲಕವೇ ಇವತ್ತಿನ ಅರ್ಥಶಾಸ್ತ್ರವು ಹಿಂಬಾಗಿಲಿನಿಂದ ಪ್ರವೇಶ ಮಾಡುತ್ತಿದೆ ಮತ್ತು ಸಾಂಪ್ರದಾಯಿಕವಾಗಿ ರಾಜಕೀಯ ಸಿದ್ಧಾಂತಗಳು ಆಳುತ್ತಿದ್ದ ಕ್ಷೇತ್ರವನ್ನು ಅದೀಗ ಆಕ್ರಮಿಸುತ್ತಿದೆ. ರಾಜಕೀಯ ಕೊಟ್ಟಿದ್ದ ಒಂದು ಪ್ರಮುಖ ಭರವಸೆಯನ್ನೂ ಈಗಿನ ಅರ್ಥಶಾಸ್ತ್ರವು ಹುಸಿಗೊಳಿಸುತ್ತಿದೆ. ಅದೇನೆಂದರೆ, ಉದಾರವಾದಿ ರಾಜ್ಯವೊಂದರಲ್ಲಿ ಚಾಲ್ತಿಯಲ್ಲಿರುವ ಹಲವು ಹಿತಾಸಕ್ತಿಯ

ಗುಂಪುಗಳು-ಒಂದು ಕಡೆಗೆ ಸಾರ್ವತ್ರಿಕವಾಗಿ ಮತಚಲಾಯಿಸುವ ಪ್ರಜೆಗಳು ಮತ್ತು ಇನ್ನೊಂದು ಕಡೆಗೆ ರಾಷ್ಟ್ರದ ನೀತಿ ಇವುಗಳ ನಡುವಿನ ಸಂಬಂಧವೊಂದಕ್ಕೆ ಸೇತುವೆಯಂತೆ ಕೆಲಸಮಾಡಬೇಕು. ಅಲ್ಲದೆ ಹಲವಾರು ರೀತಿಯ ತಡೆಗಳು ಮತ್ತು ನಿಯಮಗಳ ನಡುವೆ ನಡೆಯುವ ಇಂಥ ಸೇತುಬಂಧದ ಪ್ರಕ್ರಿಯೆಯು ಕೊಡುಕೊಳ್ಳುವ ಚೌಕಾಸಿ ಪ್ರಕ್ರಿಯೆಗಳ ಮೂಲಕ, ಒಂದು ಸಮಾಜದ ಸಾರ್ವಜನಿಕ ಅಗತ್ಯಗಳನ್ನೂ ಹಂಚಿಕೆಯ ಪ್ರಶ್ನೆಗಳನ್ನೂ ಮತ್ತು ಆರ್ಥಿಕ ಲೇವಾದೇವಿಯ ಸ್ಥೂಲ ಸ್ವರೂಪಗಳನ್ನೂ ನಿರ್ಧರಿಸುವ ಪಾತ್ರವಹಿಸಬೇಕು- ಎಂಬುದ ಈ ರಾಜಕೀಯ ಭರವಸೆಯ ತಿರುಳು. ಆದರೆ, ಅರ್ಥಶಾಸ್ತ್ರವೇ ರಾಜಕೀಯಕ್ಕಿಂತ ಪ್ರಧಾನ ಎಂಬ ದೃಷ್ಟಿಕೋನದಿಂದ ನೋಡಿದರೆ-ಆಗ ಮೇಲೆ ಹೇಳಿದ ಈ ಎಲ್ಲ ಪ್ರಕ್ರಿಯೆಗಳು ಅರ್ಥವ್ಯವಸ್ಥೆಯ ಸುಲಲಿತ ಚಾಲನೆಗೆ ಒದಗುವ ತೊಡಕುಗಳೆಂಬಂತೆ ಕಾಣತೊಡಗುತ್ತದೆ. ಆದ್ದರಿಂದಲೇ ಇಂಥ ದೃಷ್ಟಿಕೋನವು ಸುಲಲಿತವಾದ ಅರ್ಥವ್ಯವಸ್ಥೆಯ ಅನುಕೂಲಕ್ಕಾಗಿ ರಾಜಕೀಯದ ಆಯ್ಕೆಯ ಸಾಧ್ಯತೆಗಳನ್ನೇ ಕಡಿತಗೊಳಿಸಿದರೆ ಒಳ್ಳೆಯದು ಎಂದು ತೀರ್ಮಾನವಾಗುತ್ತದೆ.

ಹೀಗೆ ಅರ್ಥಶಾಸ್ತ್ರವೇ ರಾಜಕೀಯವನ್ನು ಬದಿಗೆ ತಳ್ಳಿ ಸಿಂಹಾಸನಾರೂಢವಾಗಿರುವ ಇಂಥ ಸ್ಥಿತಿಯಲ್ಲೀಗ, ರಾಜಕೀಯವು ಮತ್ತೊಮ್ಮೆ ತನ್ನನ್ನು ತಾನು ಸಮರ್ಥಿಸಿಕೊಂಡು ಮೇಲೆದ್ದು ಬರುವ ಅಗತ್ಯ ಉದ್ಭವಿಸಿದೆ. ಒಂದು ಕಡೆಗೆ ಪ್ರತಿಯೊಂದು ಅಂಗವ್ಯವಸ್ಥೆಗೂ ತಕ್ಕ ತಕ್ಕ ಸ್ಥಾನವಿರುವ ವಿಶಾಲ ಜಾಗತಿಕ ವ್ಯವಸ್ಥೆ ಮತ್ತು ಇನ್ನೊಂದು ಕಡೆಗೆ ಇಂಥ ವ್ಯವಸ್ಥೆಗೆ ಅಡಿಯಾಳಾಗಿ ಬದುಕುತ್ತಿರುವ ನಿರ್ದಿಷ್ಟ ಕ್ರಮಗಳು ಇವುಗಳ ನಡುವೆ ಈಗ ರಾಜಕಾರಣವು ಮಹತ್ವದ ಪಾತ್ರ ವಹಿಸಬೇಕಿದೆ. ಅರ್ಥಶಾಸ್ತ್ರವಾದರೋ ತನ್ನ ಯಜಮಾನಿಕೆಯ ಅಡಿಗೆ ಹಲವು ಹಿತಾಸಕ್ತಿಗಳು ಲಭ್ಯ ಸಂಪನ್ಮೂಲಗಳಿಗಾಗಿ ಪೈಪೋಟಿ ನಡೆಸುತ್ತ ಇವೆಯೆಂದೂ ಮತ್ತು ರಾಜಕಾರಣವೆಂಬುದು ಅಂಥ ಒಂದು ಅಧೀನ ಕ್ಷೇತ್ರವೆಂದೂ ಭಾವಿಸಿಕೊಂಡಿರುವ ಸ್ಥಿತಿ ಇವತ್ತು ಕಾಣುತ್ತಿದೆ. ಇಂಥ ಸ್ಥಿತಿಯಲ್ಲಿ ರಾಜಕಾರಣವು ತನ್ನ ಅಧೀನ ಸ್ಥಿತಿಯಿಂದ ಹೊರಬಂದು ಅರ್ಥಶಾಸ್ತ್ರದ ವ್ಯಾಪ್ತಿಯಲ್ಲೂ ತನ್ನ ಅಸ್ತಿತ್ವವನ್ನು ತೋರಿಸಿಕೊಳ್ಳಬೇಕಾಗಿದೆ.

"ನಂಬುತ್ತಾರೆಂದು ನಂಬಲಾಗಿರುವ" ಅರ್ಥಶಾಸ್ತ್ರದ ಪ್ರಜಾವರ್ಗವನ್ನು ರಾಜಕಾರಣವು ಮರಳಿ ಸ್ವಾಧೀನಪಡಿಸಿಕೊಳ್ಳುವ ಈ ಕೆಲಸವು ನಿಜವಾಗಿ, ಮೇಲ್ನೋಟಕ್ಕೆ ಇವತ್ತು ಕಾಣುವಷ್ಟು ಅಸಾಧ್ಯ ಸಂಗತಿಯೇನೂ ಅಲ್ಲ. ಅರ್ಥಶಾಸ್ತ್ರಜ್ಞ ಸಹವರ್ತಿಗಳಲ್ಲಿ ಕೇಳಲಾಯಿತು 'ಸಮಕಾಲೀನ ಜಗತ್ತಿನಲ್ಲಿ ಎಲ್ಲ ಅರ್ಥವ್ಯವಸ್ಥೆಯ ಅಧ್ಯಯನಗಳಿಗೆ ಆಧಾರಭೂತವೆಂದು ಭಾವಿತವಾಗಿರುವ ವ್ಯಕ್ತಿಕೇಂದ್ರಿತ ಮಾದರಿ ಏನಿದೆ ಅದನ್ನು ನಿಜವಾಗಿ ನಂಬುತ್ತೀರಾ?' ಉತ್ತರ ಒಂದೇ ಪದಪುಂಜದಿಂದ ಆರಂಭಗೊಂಡಿದ್ದು- 'ಕೆಲವು ಅರ್ಥಶಾಸ್ತ್ರಜ್ಞರೇನೋ ಅದನ್ನು ನಂಬುತ್ತಾರೆ...'

* * *

(ಸಾಭಾರ : ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು : ವಿನಯ ಲಾಲ್ ಮತ್ತು ಅಶೀಶ್ ನಂದಿ ಸಂಪಾದಿಸಿರುವ ಪರಿಭಾಷಾಕೋಶ)

ಮೂರ್ತಿ ಪೂಜಕರ ನಾಡಿನಲ್ಲಿ ಮೂರ್ತಿ ಭಂಜಕರ ನಾಡಿನ ಆಲ್ ಬೆರೂನಿ

– ಜ್ಯೋತ್ಸ್ನಾ ಕಾಮತ್

ಅತಿ ಪ್ರಾಚೀನಕಾಲದಿಂದಲೂ ಭಾರತದ ಸಾಂಸ್ಕೃತಿಕ ಸಂಬಂಧ ಪೂರ್ವ ಮತ್ತು ಪಶ್ಚಿಮ ದೇಶಗಳೊಡನೆ ನಡದೇ ಇತ್ತು. ವಾಣಿಜ್ಯ, ಧರ್ಮ, ಗಣಿತ, ಭೂಮಿತಿ, ಖಗೋಳಶಾಸ್ತ್ರ, ಜ್ಯೋತಿಷ್ಯ, ಆರೋಗ್ಯ ವಿಜ್ಞಾನಗಳಲ್ಲೆಲ್ಲ ಭಾರತ ಮುಂದೆ ಇತ್ತು. ಬೌದ್ಧ ಧರ್ಮದ ವಿಶೇಷ ಅಧ್ಯಯನಕ್ಕೆ ಭಾರತಕ್ಕೆ ಬಂದ ಫಾಹಿಯಾನ್, ಹ್ಯುಯೆನ್‌ತ್ಸಾಂಗ್, ಇತ್ಸಿಂಗ್ ಮೊದಲಾದ ಚೀನೀ ಯಾತ್ರಿಕರಿಂದಲೇ ಎಷ್ಟೋ ಸಮಕಾಲೀನ ಭಾರತದ ಸಾಂಸ್ಕೃತಿಕ ಜೀವನದ ಅಧಿಕೃತವಾದ ಒಳನೋಟಗಳನ್ನು ನಾವು ಪಡೆಯುವಂತೆ ಆಯಿತು. ಅರಬ್ ಜನಾಂಗವೂ ಇಸ್ಲಾಂ ಧರ್ಮ ಸ್ಥಾಪನೆಯ ಮೊದಲಿನಿಂದಲೂ ಭಾರತದೊಡನೆ ವಾಣಿಜ್ಯ ಸಂಬಂಧ ಹೊಂದಿದ್ದು, ಕೊಡು-ಕೊಳ್ಳುಗಳು ನಡೆದೇ ಇದ್ದವು. ಅರಬ್ ವಿದ್ವಾಂಸರಿಂದಲೇ ಭಾರತೀಯ ತತ್ವಜ್ಞಾನ, ಬೀಜಗಣಿತ, ಖಗೋಳಶಾಸ್ತ್ರಗಳು ಮೊಟ್ಟಮೊದಲಿಗೆ ಯುರೋಪು ಖಂಡವನ್ನು ಮುಟ್ಟಿದವು. ಸೋಮನಾಥ ಮಂದಿರವನ್ನು ಮತ್ತೆ ಮತ್ತೆ ಆಕ್ರಮಿಸಿ, ಸಂಪತ್ತನ್ನು ಸೂರೆ ಮಾಡಿದ ಕುಖ್ಯಾತಿಯ ಗಝ್ನಿ ಮಹಮ್ಮದನು ಅರಬ್ ವಿದ್ವಾಂಸರಿಗೆ ಆಶ್ರಯದಾತನೂ ಆಗಿದ್ದ. ಅವನ ಕಾಲಕ್ಕೇ ಭಾರತಕ್ಕೆ ಬಂದು, ಆರು ವರ್ಷ ಇಲ್ಲಿದ್ದು ಸಂಸ್ಕೃತ ಭಾಷೆಯನ್ನು ಅಧ್ಯಯನ ಮಾಡಿ, ಭಗವದ್ಗೀತೆ, ಗಣಿತ, ಖಗೋಳಶಾಸ್ತ್ರಗಳಾದಿಯಾಗಿ ಮಹತ್ವದ ಗ್ರಂಥಗಳನ್ನು ಅಭ್ಯಸಿಸಿ, ಅನುವಾದಿಸಿ ತನ್ನವರಿಗೆ ಅನುಕೂಲ ಮಾಡಿಕೊಟ್ಟ ಅರಬ್ ವಿದ್ವಾಂಸರಲ್ಲಿ ಅಬು ರೈಹಾನ್, ಮಹಮ್ಮದ್ ಇಬ್ನ್ ಮಹಮ್ಮದ್ ಅಥವಾ ಆಲ್ ಬೆರೂನಿ ಪ್ರಮುಖರು. ಆತನ 'ಕಿತಾಬ್-ಉಲ್-ಹಿಂದ್' ಎಂಬ ಗ್ರಂಥ ಆ ಕಾಲದ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಅಮೂಲ್ಯ ಗ್ರಂಥವಾಗಿದೆ.

ಕ್ರಿ.ಶಕ ೯೭೩ ರಿಂದ ೧೦೪೮ ರವರೆಗೆ ಜೀವಿಸಿದ್ದ ಆಲ್ ಬೆರೂನಿ, ಅರಬ್ ಸಂಸ್ಕೃತಿ ವ್ಯಾಪಕವಾಗಿದ್ದ ಮಧ್ಯ ಏಶಿಯಾದ ಉಝುಬೆಕಿಸ್ತಾನದಲ್ಲಿ ಇರಾಣಿ ವಂಶದಲ್ಲಿ ಹುಟ್ಟಿದ. ಕುಶಾಗ್ರಮತಿಯಾದ ಆತ ಅರಬ್ಬೀ ಅಲ್ಲದೇ ಪರ್ಶಿಯನ್, ಗ್ರೀಕ್, ತುರ್ಕಿ, ಸಿರಿಯನ್, ಹೀಬ್ರೂ ಭಾಷೆಗಳನ್ನು ಬಲ್ಲವನಾಗಿದ್ದ. ಸಂಸ್ಕೃತವನ್ನು ಕುರಿತು ಆ ಭಾಷೆಯಲ್ಲಿರುವ, ತನ್ನ ಪ್ರೀತಿಯ ಖಗೋಳಶಾಸ್ತ್ರದ ಬಗ್ಗೆ ಹೆಚ್ಚೆಚ್ಚು ತಿಳಿದುಕೊಳ್ಳಲೆಂದು ಭಾರತಕ್ಕೆ ಬಂದ. ಮ್ಲೇಚ್ಛನೆಂದು ಇಲ್ಲಿಯ ಸಮಾಜಕ್ಕೆ ತಿರಸ್ಕಾರವಿದ್ದರೂ ಕಷ್ಟಪಟ್ಟು ಬೇಕಾದ ಮಾಹಿತಿ ಸಂಗ್ರಹಿಸಿದ. ಇಲ್ಲಿಯ ಧಾರ್ಮಿಕ, ಸಾಂಪ್ರದಾಯಿಕ ರೂಢಿಗಳನ್ನು ಅರಿತು ಆತ ವಿಶ್ಲೇಶಿಸಿದ ಬಗೆ, ಒಂದು ಸಹಸ್ರವರ್ಷಗಳ ತರುವಾಯವೂ ಸಾಮಯಿಕವಾಗಿದೆ. ಆತನ ತೆರದ ಮನಸ್ಸಿಗೆ ನಿದರ್ಶನವಾಗಿದೆ.

ಉದಾಹರಣೆಗೆ ಆತ ವಿವರಿಸಿದ ವಿಗ್ರಹಾರಾಧನೆಯ ವಿಚಾರವನ್ನು ತೆಗೆದುಕೊಳ್ಳಬಹುದು. ಇಸ್ಲಾಂ ಧರ್ಮ ಅತಿಯಾಗಿ ತಿರಸ್ಕರಿಸುವ ಮೂರ್ತಿಪೂಜೆಗೆ ಹಿಂದೂ ಧರ್ಮದಲ್ಲಿ ಅತಿ ಮಹತ್ವದ ಸ್ಥಾನವಿದೆ. ಆಲ್ ಬೆರೂನಿ ಕಲ್ಲು, ಮರ, ಕೋತಿ-ಹಾವುಗಳ ಜೊತೆಗೆ ಅಸಂಖ್ಯ ದೇವತೆಗಳನ್ನು ಭಾರತೀಯರು ಪೂಜಿಸುವುದನ್ನು ಕಂಡಿದ್ದ. ಆತನ

ವಿಶ್ಲೇಷಣೆ ಹೀಗಿದೆ :-

ಸಾಮಾನ್ಯ ಮನುಷ್ಯನ ಚಿಂತನೆ ಇಂದ್ರಿಯ ಮುಖಿಯಾಗಿದೆ. ಕಂಡದ್ದನ್ನು ನಂಬುವ ಆತ, ಗಹನವಾದ ವಿಚಾರಗಳತ್ತ ಮನಸ್ಸು ಹಾಯಿಸಲಾರ! ಸಾರಾಸಾರ ವಿಚಾರಮಾಡುವ ಸುಶಿಕ್ಷಿತರು ಯಾವ ಕಾಲ-ದೇಶಗಳಲ್ಲಾದರೂ ಕಡಿಮೆ ಸಂಖ್ಯೆಯಲ್ಲಿ ಇರುತ್ತಾರೆ. ದೃಶ್ಯ ವಿಚಾರಗಳು ಮಾತ್ರ ಅವರ ಕಣ್ ಸೆಳೆಯುತ್ತವೆ. ಭಗವಂತನ ಪ್ರತಿಬಿಂಬವೆಂದು ನಂಬುವ ವಿಗ್ರಹಗಳು, ಪೂಜಾಸ್ಥಾನಗಳು ಗ್ರೀಕರಲ್ಲಿ, ಕೆಲ ಯಹೂದಿ, ಕ್ರಿಶ್ಚಿಯನ್ ಮತ್ತಿತರ ಜನಾಂಗಗಳಲ್ಲಿ ಸಾಮಾನ್ಯವಾಗಿವೆ. ಉದಾಹರಣೆಗೆ, ಪ್ರವಾದಿ ಮಹಮ್ಮದರಾಗಲಿ, ಮಕ್ಕಾ, ಕ-ಅಬಾ ಪವಿತ್ರ ಸ್ಥಾನಗಳದ್ದಾಗಲಿ ಚಿತ್ರಗಳು ನೋಡಲು ಸಿಗುವಂತಾದರೆ, ಅದೆಂಥ ಪ್ರತಿಕ್ರಿಯೆಯನ್ನು ಕಾಣಬಹುದು! ಅಶಿಕ್ಷಿತರು, ಅರೆಶಿಕ್ಷಿತರು, ಮುಗ್ಧ ಗಂಡಸರಾಗಲಿ, ಹೆಂಗಸರಾಗಲಿ ಸಂತೋಷದ ಭರದಲ್ಲಿ ಅಂತಹ ಚಿತ್ರಗಳನ್ನು ಚುಂಬಿಸಬಹುದು, ಹಣೆ ಕೆನ್ನೆಗಳಿಗೆ ಸ್ಪರ್ಶಿಸಬಹುದು ಅಥವಾ ಅವುಗಳೆದುರು ಧೂಳಿಯಲ್ಲಿ ಹೊರಳಾಡಬಹುದು. ಅವರೆಲ್ಲರಿಗೆ ಅವು ಬರೀ ಚಿತ್ರಗಳಲ್ಲ. ಪ್ರತ್ಯಕ್ಷ ಅನುಭವ!

ಇದೇ ಕಾರಣಕ್ಕೆ ದೇವದೂತರಾಗಲಿ, ಸಂತ, ಋಷಿ, ಪ್ರವಾದಿಗಳಾಗಲಿ, ಪವಿತ್ರತಾಣಗಳಾಗಲಿ, ಪ್ರತಿಮೆಗಳ ರೂಪದಲ್ಲಿ ಜನರಿಗೆ ಹತ್ತಿರವಾಗುತ್ತಾರೆ. ತಲೆಮಾರುಗಳು, ಶತಮಾನಗಳು, ಕಳೆದ ಬಳಿಕ ಅವುಗಳ ಮೂಲ ರೂಪವಾಗಲಿ, ಆಖ್ಯಾಯಿಕೆಗಳಾಗಲಿ ಬದಲಾದರೂ ಶ್ರದ್ಧೆಯು ಬದಲಾಗುವುದಿಲ್ಲ. ಭಾವುಕರ ಈ ವರ್ತನೆಯನ್ನು ಬಲ್ಲ ಪುರೋಹಿತಾದಿ ವರ್ಗವು ಪೂಜನೀಯ ಅಂಶಗಳನ್ನು ಕಡ್ಡಾಯವಾಗಿಸಿ ಬಿಡುತ್ತದೆ... ಹಿಂದುಗಳಲ್ಲಿ ವ್ಯಾಪಕವಾಗಿರುವ ಮೂರ್ತಿ ಪೂಜೆಯ ಬಗ್ಗೆ ಹೇಳಲೇ ಬೇಕು. ಇದನ್ನು ಕೈಕೊಳ್ಳುವವರೆಲ್ಲ ಸಮಾಜದ ಅಶಿಕ್ಷಿತ, ಅಜ್ಞಾನಿವರ್ಗ. ಆದರೆ ಪಾರಮಾರ್ಥಿಕ ವಿಚಾರಗಳಲ್ಲಿ ನಂಬಿಕೆ ಇಟ್ಟವರು, ಬ್ರಹ್ಮಜ್ಞಾನಕ್ಕೆ ಎಳಸುವವರು, ಮೂರ್ತಿ ಪೂಜೆಯಲ್ಲಿ ವಿಶ್ವಾಸವಿಡುವುದಿಲ್ಲ. ಭಗವಂತನು ಏಕೀಶ್ವರನೆಂದು ಕಂಡುಕೊಳ್ಳುತ್ತಾರೆ. ಭಗವಂತನಿಗೆ ಅನೇಕ ರೂಪಗಳು. ವಿಗ್ರಹ ರೂಪದಲ್ಲಿ ಕಂಡು ಬರುತ್ತಿರಬಹುದು. ಆದರೆ ಆಯಾ ವಿಗ್ರಹವೇ ನಿಜವಾದ ದೇವರು ಎಂದು ಇಂಥ ಜ್ಞಾನಿಗಳು ನಂಬುವುದಿಲ್ಲ!" ಎಂದು ಆಲ್ ಬೆರೂನಿ ಹೇಳುತ್ತಾನೆ. ಭಗವದ್ಗೀತೆಯ ಏಳನೆಯ ಮತ್ತು ಒಂಭತ್ತನೆಯ ಅಧ್ಯಾಯಗಳ ವಾಸುದೇವನು (ಶ್ರಿ ಕೃಷ್ಣನು) ಅರ್ಜುನನಿಗೆ ನೀಡಿದ ಉಪದೇಶವನ್ನು ಉದಹರಿಸುತ್ತಾನೆ. "ತುಂಬ ಜನ ನನ್ನನ್ನು ಪಡೆಯಲು, ನನ್ನದಲ್ಲದ ಮಾರ್ಗಗಳನ್ನು ಅನುಸರಿಸುತ್ತಾರೆ. ಬಗೆಬಗೆಯ ರೂಪಗಳಲ್ಲಿ ಆರಾಧಿಸುತ್ತಾರೆ. ಆಯಾ ಸಾಧನೆಗಳಲ್ಲಿ ಅವರ ಇಷ್ಟಾರ್ಥಗಳು ಸಾಧಿಸುವಂತೆ ನಾನು ಸಹಾಯಮಾಡುತ್ತೇನೆ" ಎಂಬ ಶ್ರೀಕೃಷ್ಣನ ವಾಕ್ಯಗಳನ್ನು ನೆನಪಿಸುತ್ತಾನೆ. ಸನಾತನ ಧರ್ಮದ ಮೂಲ ಅಂಶಗಳನ್ನು ಆಲ್ ಬೆರೂನಿ ಅರಿತಿದ್ದ.

ಪ್ರಾಚೀನ ಅರಬರಲ್ಲಿ, ಗ್ರೀಕರಲ್ಲಿ, ಸಿರಿಯನ್ನರಲ್ಲಿ ಮೂರ್ತಿಪೂಜೆ ಪ್ರಚಲಿತವಿದ್ದುದನ್ನು ನೆನೆಪಿಸಿದ್ದಾನೆ. ಈ ಎಲ್ಲ ಅಂಶಗಳನ್ನು ಉಲ್ಲೇಖಿಸಲು ಕಾರಣ ತನ್ನ ದೇಶದವರು ಹೆಚ್ಚಿನ ಅಧ್ಯಯನ ಕೈಗೊಳ್ಳಲು ಈ ದೇಶಕ್ಕೆ ಬಂದರೆ ಇಲ್ಲಿಯ ಒಂದರಿಂದ ನಾಲ್ಕು ಮುಖಗಳ, ಎಂಟರಿಂದ ಹದಿನೆಂಟು ಕೈಗಳ ದೇವಾಧಿದೇವತೆಗಳನ್ನು ಕಂಡು ಕಕ್ಕಾವಿಕ್ಕಿಯಾಗಬಾರದು ಎಂದಿದ್ದಾನೆ!

ಮೂರ್ತಿ ಭಂಜಕರ ನಾಡಿನಲ್ಲಿ ಹುಟ್ಟಿ ಬೆಳೆದಾತ, ಈ ರೀತಿಯ ವಿಶಾಲ ಮನೋಭಾವವನ್ನು ಕಾಫಿರರ ನಾಡಿನಲ್ಲಿ ಆರು ವರ್ಷಗಳನ್ನು ಕಳೆದ ಬಳಿಕವೂ ಬರೆದು ಕಾದಿರಿಸಿದ್ದು ವಿಶೇಷವೆನ್ನಬೇಕು.

* * *

ಪುಸ್ತಕ ಪರಿಚಯ

ಪುಸ್ತಕದ ಹೆಸರು : **ಸೌರಮಂಡಲದ ಸೋಜಿಗದ ಸಂಗತಿಗಳು**
ಲೇಖಕರು : ಡಾ.ಕೆ.ಬದರಿನಾರಾಯಣ
ಪ್ರಕಾಶಕರು : ಹೇಮಂತ ಸಾಹಿತ್ಯ, # ೯೭೨ 'ಸಿ', ನಾಲ್ಕನೇ 'ಇ' ವಿಭಾಗ, ಹತ್ತನೇ'ಎ' ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು - ೫೬೦೦೧೦, ದೂರವಾಣಿ:೦೮೦ ೨೩೩೫೪೬೯೯
ಪುಟಗಳು : ೮೦ : ಬೆಲೆ-೫೦ರೂ.

ಬೆಂಗಳೂರಿನಲ್ಲಿರುವ ಇಸ್ರೋ ಉಪಗ್ರಹ ಕೇಂದ್ರ ತನ್ನ ಕರ್ನಾಟಕ ರಾಜ್ಯೋತ್ಸವ ಸಮಿತಿಯಲ್ಲಿ ಅಂತರಿಕ್ಷ ಪುಸ್ತಕಮಾಲೆಯನ್ನು ಪ್ರಾರಂಭಿಸಿ ಸಮಸ್ತ ಕನ್ನಡಿಗರ ಅದರಲ್ಲೂ ವಿಜ್ಞಾನ ಕ್ಷೇತ್ರದ ವಿದ್ಯಾರ್ಥಿಗಳಿಗೆ ಮಹದುಪಕಾರ ಮಾಡಿದೆ. ಈಗಾಗಲೇ ಅಂತರಿಕ್ಷದ ಮತ್ತು ಅಂತರಿಕ್ಷದಲ್ಲಿ ನಡೆಯುತ್ತಿರುವ ಮನುಷ್ಯನ ಅನೇಕ ವೈಜ್ಞಾನಿಕ ಕಾಯಕಗಳ ಬಗ್ಗೆ ಸುಮಾರು ೯ ಪುಸ್ತಕಗಳನ್ನು ಪ್ರಕಟಿಸಿದೆ. ಈ ಸಾಲಿನಲ್ಲಿ ಇತ್ತೀಚೆಗೆ ಪ್ರಕಟಗೊಂಡಿರುವ ಪುಸ್ತಕವಿದು. ಈ ಪುಸ್ತಕದಲ್ಲಿ ೯ ಅಧ್ಯಾಯಗಳಿವೆ. ಒಂದೊಂದು ಅಧ್ಯಾಯವೂ ಸೌರಮಂಡಲದಲ್ಲಿಯ ಸೋಜಿಗದ ಸಂಗತಿಗಳಿಂದ ಮನೋಹರವಾಗಿರುವಂತೆ ಜ್ಞಾನ ಸ್ರೋತವೂ ಆಗಿವೆ. ಈ ಪುಸ್ತಕಮಾಲೆಯ ಸಂಪಾದಕರಾದ ಸ್ವತಃ ವಿಜ್ಞಾನಿಗಳೂ ಪದ್ಮಶ್ರೀ ಪುರಸ್ಕೃತರಾದ ವಿ.ಆರ್.ಕಟ್ಟಿಯವರ 'ಹೆಚ್ಚಿನ ಓದಿಗಾಗಿ ಓದುಗರನ್ನು ಪ್ರೇರೇಪಿಸುವಂತಾದರೆ ಲೇಖಕರ ಪರಶ್ರಮ ಸಫಲವಾದಂತೆ' ಎಂಬ ಅವರ ಆಶಯ ಪ್ರಸ್ತುತ ಪುಸ್ತಕದಿಂದ ಈಡೇರುತ್ತದೆ. ಪುಸ್ತಕದ ಲೇಖಕರಾದ ಶ್ರೀ ಕೆ.ಬದರೀನಾರಾಯಣ ತಾಂತ್ರಿಕ ಮತ್ತು ಯಾಂತ್ರಿಕ ವಿಷಯಗಳಲ್ಲಿ ತಜ್ಞರು. 'ಅಂತರಿಕ್ಷ ಕರಕುಶಲ ತಂತ್ರಜ್ಞಾನ' ಎಂಬ ಹೆಸರಿನ ಇಂಗ್ಲಿಷ್ ನಿಯತಕಾಲಿಕೆಯ ಪ್ರಧಾನ ಸಂಪಾದಕರಾಗಿದ್ದಾರೆ. ಅನೇಕ ಲೇಖನಗಳನ್ನೂ ಬರೆದಿದ್ದಾರೆ. ಪ್ರತಿಯೊಂದು ಶಾಲಾಕಾಲೇಜಿನ ಗ್ರಂಥಾಲಯದಲ್ಲಿ ಅಗತ್ಯವಾಗಿರಬೇಕಾದ ಪುಸ್ತಕವಿದು.

ಪುಸ್ತಕದ ಹೆಸರು : **ಕೃತಕ ಉಪಗ್ರಹಗಳು**
ಲೇಖಕರು : ಬಿ.ಎಸ್.ಜಗದೀಶ್ ಬಾಬು
ಪ್ರಕಾಶಕರು : ಹೇಮಂತ ಸಾಹಿತ್ಯ, # ೯೭೨ 'ಸಿ', ನಾಲ್ಕನೇ 'ಇ' ವಿಭಾಗ, ಹತ್ತನೇ'ಎ' ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು - ೫೬೦೦೧೦, ದೂರವಾಣಿ:೦೮೦ ೨೩೩೫೪೬೯೯
ಪುಟಗಳು : ೧೧೨ : ಬೆಲೆ-೬೦ರೂ.

ಇಸ್ರೋ ಉಪಗ್ರಹ ಕೇಂದ್ರದಲ್ಲಿ ಕರ್ನಾಟಕ ರಾಜ್ಯೋತ್ಸವ ಸಮಿತಿಯು ಪ್ರಾರಂಭಿಸಿರುವ ಅಂತರಿಕ್ಷ ಪುಸ್ತಕಮಾಲೆಯಲ್ಲಿ ಪ್ರಕಟವಾದ ತುಂಬ ಇತ್ತೀಚಿನ ಪುಸ್ತಕವಿದು. ಇದರಲ್ಲಿ ಹನ್ನೊಂದು ಅಧ್ಯಾಯಗಳಿವೆ. ಇದರಲ್ಲಿ ಪಾರಿಭಾಷಿಕ ಶಬ್ದಗಳನ್ನೂ ಕೊಡಲಾಗಿದೆ. ಈ ಎಲ್ಲಾ ಅಧ್ಯಾಯಗಳು ಸಂಕೀರ್ಣ ವೈಜ್ಞಾನಿಕ ವಿಷಯಗಳನ್ನು ಬಹಳ ಸುಲಭವಾಗಿ ಅರ್ಥವಾಗುವಂತೆ ಸ್ವತಃ ವಿಜ್ಞಾನಿಯಾದ ಬಿ.ಎಸ್.ಜಗದೀಶ್ ಬಾಬುರವರು ಬರೆದಿದ್ದಾರೆ. ವೃತ್ತಿಯಿಂದ ವಿಜ್ಞಾನಿಯಾಗಿ ಪ್ರವೃತ್ತಿಯಿಂದ ಉಪಗ್ರಹ ತಂತ್ರಜ್ಞಾನಗಳ ಬಗ್ಗೆ ಲೇಖನಗಳನ್ನು ಬರೆಯುವ ಹವ್ಯಾಸವನ್ನಿಟ್ಟುಕೊಂಡಿದ್ದಾರೆ. ಅಂತರಿಕ್ಷ ಪುಸ್ತಕಮಾಲೆಯ ಪ್ರಧಾನ ಸಂಪಾದಕರಾದ ಶ್ರೀ ವಿ.ಆರ್.ಕಟ್ಟಿ ಮತ್ತು ಇನ್ನೂ ಐದು ಜನ ಸದಸ್ಯರು ಈ ಪುಸ್ತಕವನ್ನು ಪರಿಷ್ಕರಿಸಿದ್ದಾರೆ. ಈ ಪುಸ್ತಕ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳೂ ಓದಿ ಅರ್ಥಮಾಡಿಕೊಳ್ಳುವಷ್ಟು ಅಂದರೆ ಬಾಳೆ ಹಣ್ಣನ್ನು ಸುಲಿಯುವಷ್ಟು ಸುಲಭವಾದ ಶೈಲಿಯಲ್ಲಿ ಬರೆದಿದ್ದಾರೆ.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಮೇಲುಕೋಟೆಯಲ್ಲಿರುವ ಸಂಸ್ಕೃತ ಸಂಶೋಧನಾ ಸಂಸತ್‌ನವರು ಪ್ರಕಟಪಡಿಸಿದ ಶ್ರೀ ಕೂರತ್ತಾಳ್ವಾನ್ ವಿರಚಿತ ಪಂಚಸ್ತವ ಮತ್ತು ಶ್ರೀ ಲಕ್ಷ್ಮೀನಾರಾಯಣ ಹೃದಯ ಸ್ತೋತ್ರ ಪುಸ್ತಕಗಳನ್ನು ಟ್ರಸ್ಟಿನ ಅಧ್ಯಕ್ಷರು ಬಿಡುಗಡೆಗೊಳಿಸಿದರು. ಟ್ರಸ್ಟ್ ನಡೆಸುತ್ತಿರುವ ಖಾದಿ ಸಿದ್ಧ ಉಡುಪು ಘಟಕಕ್ಕೆ ತಿಪಟೂರಿನ ಖಾದಿ ಸಂಸ್ಥೆಯವರು ತಮಗೆ ಬೇಕಾದ ಖಾದಿ ಸಿದ್ಧ ಉಡುಪುಗಳನ್ನು ಟ್ರಸ್ಟಿನ ಘಟಕದಲ್ಲಿ ಸೂಕ್ತ ಮಜೂರಿ ಕೊಟ್ಟು ಹೊಲಿಸಿಕೊಳ್ಳುತ್ತಿದ್ದಾರೆ. ತನ್ಮೂಲಕ ಟ್ರಸ್ಟಿನ ಘಟಕ ಬೆಳೆಯಲು ಪ್ರೋತ್ಸಾಹಿಸುತ್ತಿದ್ದಾರೆ. ಟ್ರಸ್ಟಿನ ಆಡಳಿತ ಮಂಡಳಿಯ ಸಭೆಯು ನಡೆಯಿತು. ಎಲ್ಲ ಸದಸ್ಯರು ಭಾಗವಹಿಸಿದ್ದರು. ಟ್ರಸ್ಟಿನ ಲೆಕ್ಕ ಪತ್ರಗಳ ಪರಿಶೀಲನೆ ಮತ್ತು ಮುಂದಿನ ಕಾರ್ಯಚಟುವಟಿಕೆಗಳ ಬಗ್ಗೆ ತೀರ್ಮಾನ ಕೈಗೊಳ್ಳಲಾಯಿತು. ಏಪ್ರಿಲ್ ಮಾಹೆಯಲ್ಲಿ ಶಾಲಾ ರಜಾವಧಿಯಲ್ಲಿ ಮೇಲುಕೋಟೆ ಮತ್ತು ಸುತ್ತಲಿನ ಗ್ರಾಮದ ಮಕ್ಕಳಿಗಾಗಿ ಹದಿನೈದು ದಿನಗಳ 'ದೊಡ್ಡ ಮರದಾ ನೆರಳಿನಲಿ' ಹೆಸರಿನಲ್ಲಿ ಬೇಸಿಗೆ ಶಿಬಿರ ನಡೆಸಲು ತೀರ್ಮಾನಿಸಲಾಯಿತು. ಟ್ರಸ್ಟಿನ ಅಧ್ಯಕ್ಷರು ಕರ್ನಾಟಕ ಸರ್ವೋದಯ ಮಂಡಳದ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ. ಕರ್ನಾಟಕದಲ್ಲಿ ಸರ್ವೋದಯ ಆಂದೋಲನ ಬಲಪಡಿಸಲು ಕಾರ್ಯಕರ್ತರೆಲ್ಲರ ಸಹಕಾರದೊಂದಿಗೆ ಪ್ರಯತ್ನ ನಡೆಸಲಾಗುತ್ತಿದೆ. ಇತ್ತೀಚೆಗೆ ಗೌಹಾತಿಯಲ್ಲಿ ನಡೆದ ೪೩ ನೇ ಅಖಿಲ ಭಾರತ ಸರ್ವೋದಯ ಸಮಾಜ ಸಮ್ಮೇಳನದಲ್ಲಿ ಭಾಗವಹಿಸಲು ಟ್ರಸ್ಟಿನ ಅಧ್ಯಕ್ಷರು, ಶ್ರೀಮತಿ ಗಿರಿಜಾ ಕೌಲಗಿ, ಟ್ರಸ್ಟಿನ ಕಾರ್ಯಕರ್ತರಾದ ಟಿ.ಎಂ.ಜಯಣ್ಣ ಮತ್ತು ಕಾಳಪ್ಪ ಹೋಗಿಬಂದರು. ಮೈಸೂರಿನಿಂದ ಶ್ರೀ ಗಣನಾಥ್ ಮತ್ತು ಇನ್ನೂ ಇಬ್ಬರು ಟ್ರಸ್ಟಿಗೆ ಭೇಟಿಕೊಟ್ಟರು ಮತ್ತು ಜೀವನಶಿಕ್ಷಣದ ಬಗ್ಗೆ ಚರ್ಚಿಸಿದರು. ಶ್ರೀಮತಿ ಸುಜಾತಾ ವಿಶುಕುಮಾರ್ ಮತ್ತು ಶ್ರೀ ಹೇಮಂತ್‌ರವರು ಭೇಟಿಕೊಟ್ಟರು. ಟ್ರಸ್ಟಿನ ಅಭಿಮಾನಿ ಶ್ರೀಕಾಂತ್‌ರವರು ತಮ್ಮ ತಂದೆ ತಾಯಿಯರೊಂದಿಗೆ ಭೇಟಿಕೊಟ್ಟರು. ಬೆಂಗಳೂರಿನಿಂದ ಹೈಕೋ ಕಂಪನಿಯ ಹದಿಮೂರು ಜನ ಸಾಫ್ಟ್‌ವೇರ್ ಇಂಜಿನಿಯರುಗಳು ಹೊಸ ಜೀವನ ದಾರಿ ಕೇಂದ್ರದಲ್ಲಿ ಎರಡು ದಿನ ಇದ್ದು ಹೋದರು. ಇವರು ಟ್ರಸ್ಟ್ ಕೈಗೊಂಡಿರುವ ಅರಣ್ಯೀಕರಣದ ಯೋಜನೆ 'ನೆನೆ-ಬನ' ಕಾರ್ಯಕ್ರಮಕ್ಕೆ ಸಹಾಯ ಮಾಡಿದರು. ಬೆಂಗಳೂರಿನಿಂದ ಶ್ರೀಹರಿ ಮತ್ತು ಮಾಲತಿ ಎಂಬ ಮಿತ್ರರು ಬಂದು ಮಾಲತಿಯವರ ಜನ್ಮದಿನದ ನಿಮಿತ್ತ ಕರುಣಾಗೃಹ ಮತ್ತು ಶಿಶುವಿಹಾರದ ಮಕ್ಕಳಿಗೆ ಸಿಹಿ ಹಂಚಿದರು. ಮಕ್ಕಳ ಉಪಯೋಗಕ್ಕಾಗಿ ಬರವಣಿಗೆ ಸಾಹಿತ್ಯ ಹಂಚಿದರು. ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಸಹಕಾರ್ಯದರ್ಶಿಯಾದ ಕೋದಂಡರಾಮರವರು ತಮ್ಮ ಕುಟುಂಬದೊಂದಿಗೆ ಟ್ರಸ್ಟಿಗೆ ಭೇಟಿಕೊಟ್ಟರು. ಮೈಸೂರಿನ ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯರ ರಾಷ್ಟ್ರೀಯ ಸೇವಾ ಶಿಬಿರದಲ್ಲಿ ಟ್ರಸ್ಟಿನ ಕಾರ್ಯದರ್ಶಿ ಶ್ರೀ ಸಂತೋಷ್ ಕೌಲಗಿಯವರು ಉಪನ್ಯಾಸ ನೀಡಿದರು. ಚನ್ನಪಟ್ಟಣದ ಟ್ರಸ್ಟಿನ ಅಭಿಮಾನಿ ಡಾ.ಭಗವಾನ್ ಮತ್ತು ಅವರ ಪತ್ನಿ ಭೇಟಿಕೊಟ್ಟರು. ಟಿ.ವಿ.ಎಸ್ ಕಂಪನಿಯ ಹೊಸೂರಿನ ಶಾಲೆಯ ೪೦ ಮಕ್ಕಳು ತಮ್ಮ ಅಧ್ಯಾಪಕರೊಂದಿಗೆ ಹೊಸ ಜೀವನ ದಾರಿ ಕೇಂದ್ರದಲ್ಲಿ ಪರಿಸರ ವಿಷಯವಾಗಿ

ಮೂರು ದಿನಗಳ ಶಿಬಿರ ನಡೆಸಿದರು. ಮೈಸೂರು ಹವ್ಯಾಸಿ ಪರಿಸರ ಪ್ರೇಮಿಗಳ ಸಂಘದ ಕೆ.ಮನುರವರು ಮಾರ್ಗದರ್ಶಕರಾಗಿದ್ದರು.

೨೦೧೦ ಮಾರ್ಚ್ ಮಾಹೆಯ ದಾನಿಗಳು

ಶ್ರೀಮತಿ ಚೊಕ್ಕೂಬಾಯಿ; ಶ್ರೀ ಕೆ.ಬಿ.ನಾರಾಯಣ್; ಶ್ರೀ ಎಂ.ಜಿ.ಶಿವರಾಮು;
ಶ್ರೀ ಸಿ.ಡಿ.ಕಾರಿಯಪ್ಪ; ಶ್ರೀ ಆರ್.ಆರ್.ಆನವಟ್ಟಿ; ಶ್ರೀ ಕೆ.ಎನ್.ಸಿ.ಸ್ವಾಮಿ- ಬೆಂಗಳೂರು;
ಶ್ರೀ ವೆಂಕಟರಾಮನ್.ಕೆ.ಪಿ. ಅರಸ್ ಕಾರ್ ಸರ್ವಿಸ್ ಸೆಂಟರ್-ಮೈಸೂರು;
ಡಾ॥ವಿಜಯಶಂಕರ್-ಮಂಡ್ಯ; ಡಾ॥ಸಿ.ಪಿ.ರಂಗನಾಥ್-ಚನ್ನಪಟ್ಟಣ;
ಶ್ರೀ ಬಿ.ಆರ್.ದೇಶಪಾಂಡೆ-ಜಮಖಂಡಿ; ಶ್ರೀ ಸಿ.ಕೃಷ್ಣ-ರಾಮನಾಥಪುರ;
ಶ್ರೀಮತಿ ಸುನಂದಾ ದೀವಾಣಜಿ-ಜೇವರ್ಗಿ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಸನ್ಮಾನ್ಯರಿಂದ...

ಜನಪದ ವಿಚಾರ ಮಾರ್ಚ್ ಸಂಚಿಕೆಯಲ್ಲಿ "ಗೊಂದಲಕ್ಕೆ ಇನ್ನೊಂದು ಹೆಸರು ಶಿಕ್ಷಣ ಕ್ಷೇತ್ರ" ಇಂದಿನ ಶಿಕ್ಷಣ ಕ್ಷೇತ್ರವನ್ನು ಕುರಿತ ಲೇಖನವನ್ನು ಓದಿದೆ ಸಮಯೋಚಿತವಾಗಿದೆ. ದಯವಿಟ್ಟು ಇದರ ಪ್ರತಿಯನ್ನು ತಕ್ಷಣ ಸನ್ಮಾನ್ಯ ಶಿಕ್ಷಣ ಸಚಿವರಿಗೆ ಕಳುಹಿಸಿಕೊಡಿ. ಶಿಕ್ಷಣ ಕ್ಷೇತ್ರ ಸುಧಾರಿಸಲಿ. ಜನಪದ ವಿಚಾರ ಚೆನ್ನಾಗಿ ಬಾಳಲಿ, ಬೆಳಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

– ಎಂ.ಜಿ.ಶಿವರಾಂ, ಬೆಂಗಳೂರು

ಮಾರ್ಚ್ ತಿಂಗಳ ಜನಪದ ವಿಚಾರ ತಲುಪಿತು. ಈ ಸಲದ "ಜನಪದ ನಿಲಯದ ಅಂತರಂಗದಲ್ಲಿ" ಗಿರಿಜಮ್ಮನವರು ಮಾಡುವ ರುಚಿಕಟ್ಟಾದ ಅಡಿಗೆ ಮತ್ತು ಅವರ ಆತಿಥ್ಯ ಟ್ರಸ್ಟಿನ ಬೆಳವಣಿಗೆಗೆ ಸಹಕಾರಿಯಾದುದ್ದನ್ನು ಬರೆದಿದ್ದೀರಿ. ಅದರಲ್ಲಿ ಉತ್ಪ್ರೇಕ್ಷೆ ಇಲ್ಲ. ಕಳೆದ ವರ್ಷ ಅವರೆಕಾಯಿ ಸೀಜನ್‌ನಲ್ಲಿ ಮೇಲುಕೋಟೆಗೆ ಬಂದಿದ್ದಾಗ ಅವರೆಕಾಯಿ ಉಪ್ಪಿಟ್ಟು ತಿಂದದ್ದು ನೆನಪಿಗೆ ಬಂತು. ಈ ಸಲದ ಅವರೆಕಾಯಿಯ ಸುಗ್ಗಿ ವೇಳೆಗೆ ಮೇಲುಕೋಟೆಗೆ ಬರಬೇಕೆಂದನಿಸಿತು.

– ಕೆ.ಆರ್.ಮೋಹನ್, ಮೈಸೂರು

ನಾನು ಇತ್ತೀಚೆಗೆ ಕರುಣಾಗೃಹದ ಮಕ್ಕಳಿಗಾಗಿ ಬಿಸಿನೀರಿನ ಸ್ನಾನದ ವ್ಯವಸ್ಥೆ ಮಾಡಲು ಬಂದಿದ್ದಾಗ ಊಟ ಮಾಡಿದ್ದು "ಜನಪದ ನಿಲಯದ ಅಂತರಂಗದಲ್ಲಿ" ಓದಿದಾಗ ನೆನಪಿಗೆ ಬಂತು. – ಕಿಕ್ಕೇರಿ ರಮೇಶ್, ಮೈಸೂರು

ಜನಪದ ನಿಲಯದ ಅಂತರಂಗದಲ್ಲಿಯ ಮಾತು ಆಸಕ್ತಿದಾಯಕವಾಗಿರುತ್ತವೆ. ಗಿರಿಜಮ್ಮನವರ ಅಡುಗೆ ವಿಚಾರ ತಿಳಿಸಿದ್ದು ನನಗೆ ಖುಷಿ ತಂದಿತು.

– ಎಚ್.ಎಸ್.ಸುರೇಶ್, ಬೆಂಗಳೂರು

ಜನಪದ ನಿಲಯದ ಅಂತರಂಗದಲ್ಲಿ .. ೨೨

– *ಸುರೇಂದ್ರ ಕೌಲಗಿ*



ಜನಪದ ಸೇವಾ ಟ್ರಸ್ಟ್ ಸ್ಥಾಪಿತವಾಗಿ ಮೇಲುಕೋಟೆ ಮತ್ತು ಸುತ್ತಲಿನ ಗ್ರಾಮಗಳಲ್ಲಿ ಕೆಲಸ ಪ್ರಾರಂಭಿಸಿ ೫೦ ವರ್ಷಗಳಾದವು. ಈ ಅವಧಿಯಲ್ಲಿ ಟ್ರಸ್ಟ್ ಮಾಡಿರುವ ಸೇವಾ ಕಾರ್ಯಕ್ರಮಗಳಿಂದ ಅಲ್ಲಲ್ಲಿ ಕೆಲಜನರಿಗೆ ಅನುಕೂಲವಾಗಿದೆ. ಕೈಗೊಂಡಿದ್ದ ಕೆಲವು ಕೆಲಸಗಳು ಮರೆತುಹೋಗಿವೆ. ಆದರೆ ಆ ಕೆಲವು ಕೆಲಸಗಳಿಂದ ಪ್ರಯೋಜನ ಪಡೆದಂಥವರು ಭೇಟಿಯಾದಾಗ ತಾವು ಪಡೆದ ಪ್ರಯೋಜನದ ಕುರಿತು ಅವರು ಹೇಳಿದಾಗ ಹಿತಕರವಾದ ಆಶ್ಚರ್ಯ ಮತ್ತು ಸಂತೋಷವಾಗುತ್ತದೆ. ಅಂಥ ಒಂದು ಸುಮಧುರ ಸವಿನೆನಪಿನ ಅನುಭವ ಇತ್ತೀಚೆಗೆ ಉಂಟಾಯಿತು. ಈಗ ಮೇಲುಕೋಟೆಯಲ್ಲಿ ಇರುವಂಥ ಕೆಲ ಪ್ರಮುಖ ಹಿರಿಯರಲ್ಲಿ ಪು.ತಿ.ಕೃಷ್ಣಯ್ಯಂಗಾರ್ ಒಬ್ಬರು. ಈಗ ಅವರಿಗೆ ಸುಮಾರು ೮೩ವರ್ಷ. ಅಧ್ಯಾಪಕರಾಗಿ ನಿವೃತ್ತರಾದರವರು. ಒಳ್ಳೆಯ ಅಧ್ಯಾಪಕರೆಂದು ಹೆಸರು ಮಾಡಿದವರು. ಅವರು ಮೇಲುಕೋಟೆಯ ಹಿರಿಯ ಪ್ರಾಥಮಿಕ ಶಾಲೆ, ಪಕ್ಕದ ಜಕ್ಕನಹಳ್ಳಿಯ ಶಾಲೆ ಮತ್ತು ನಾಗಮಂಗಲದ ಪ್ರಾಥಮಿಕ ಶಾಲೆ ಹೀಗೆ ಹಲವಾರು ಶಾಲೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು. ಅವರ ಶಿಷ್ಯವರ್ಗ ದೊಡ್ಡದಾಗಿದೆ. ತಮ್ಮ ಗಂಡು ಮಕ್ಕಳಿಗೆ ಓದಿಸಿ ಅವರು ಸ್ವತಂತ್ರವಾಗಿ ಜೀವನ ನಡೆಸುವಂತೆ ಮಾಡಿ ಹೆಣ್ಣು ಮಕ್ಕಳಿಗೆ ಮದುವೆ ಮಾಡಿ ಅವರೂ ಕೂಡ ಸುಖ ಸಂಸಾರ ನಡೆಸುವಂತೆ ಮಾಡಿದವರು. ಅವರ ಮೊಮ್ಮಕ್ಕಳು ಕೂಡ ಚೆನ್ನಾಗಿ ಓದಿ ವಂಶಕ್ಕೆ ಕೀರ್ತಿ ತಂದಿದ್ದಾರೆ.

ಮೇಲುಕೋಟೆಗೆ ೧೯೫೯ರಲ್ಲಿ ನಾನು ಬಂದಿದ್ದಾಗ ಅವರು ತುಂಬಾ ಉತ್ಸಾಹದ ಹಾಗು ಬಹು ಜೋರಿನ ವ್ಯಕ್ತಿಯಾಗಿದ್ದರು. ಖಡಾಖಂಡಿತವಾಗಿ ಮಾತನಾಡುತ್ತಿದ್ದರು. ಅವರು ಕನ್ನಡದ ಹಿರಿಯ ಸಾಹಿತಿ ಮತ್ತು ವರಕವಿ ಪು.ತಿ.ನರಸಿಂಹಾಚಾರ್‌ರವರ ಸಹೋದರ. ಆದರೆ ಇವರು ಬೇರೆ ಕುಟುಂಬಕ್ಕೆ ದತ್ತು ಹೋದಂತವರು. ಇವರಲ್ಲಿಯೂ ಸಹ ಸಾಹಿತ್ಯ ಪ್ರೇಮ, ಭಾಷಾ ಪ್ರೇಮ ಮತ್ತು ಸ್ನೇಹಪರತೆ ಇದೆ. ಇವರು ಸ್ವಾತಂತ್ರ್ಯ ಚಳುವಳಿಯಲ್ಲೂ ಭಾಗವಹಿಸಿದ್ದಂಥವರು. ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲಿ ಇವರು ಮತ್ತು ಖಾದ್ರಿ ಶಾಮಣ್ಣ, ಅರೈಯರ್ ಶ್ರೀನಿವಾಸಯ್ಯಂಗಾರ್, ಕುಟ್ಟಿ, ಶಿವರಾಂ ಇವರೆಲ್ಲ ಸೇರಿ ಸ್ಥಳೀಯ ಸರ್ಕಾರಿ ಪ್ರಾಥಮಿಕ ಶಾಲೆಗೆ ಅಗ್ನಿಸ್ಪರ್ಶ ಮಾಡಲು ಹೋಗಿದ್ದಂಥವರು. ಮುಂದೆ ಅದೇ ಶಾಲೆಗೆ ಕೃಷ್ಣಯ್ಯಂಗಾರ್ ಮುಖ್ಯೋಪಾಧ್ಯಾಯರಾದರು! ಪು.ತಿ.ನರಸಿಂಹಾಚಾರ್ ಮತ್ತು ಅವರ ಪತ್ನಿ ಮೈಸೂರಿನಿಂದ ಮೇಲುಕೋಟೆಗೆ ಬಂದಾಗಲೆಲ್ಲ ಪು.ತಿ.ಕೃಷ್ಣಯ್ಯಂಗಾರರ ಮನೆಯಲ್ಲೇ ಇರುತ್ತಿದ್ದರು. ನಾನು ಅವರ ಮನೆಗೆ ಹೋಗುತ್ತಿದ್ದೆ. ಕೃಷ್ಣಯ್ಯಂಗಾರ್‌ರ ಹೆಂಡತಿ ತುಂಬಿದ ಸಂಸಾರವನ್ನು ನಿರ್ವಹಿಸುತ್ತಿದ್ದರು, ಆದರೆ ದುರ್ದೈವವಶಾತ್ ಒಂದು ಸಣ್ಣ ಜ್ವರ ಬಂದು ಸರಿಯಾದ ಸಮಯಕ್ಕೆ ವೈದ್ಯಕೀಯ ಉಪಚಾರ ಸಿಗದೆ ತೀರಿಕೊಂಡರು. ಪತ್ನಿಯ ಈ ಅಕಾಲಿಕ ಮರಣ ಕೃಷ್ಣಯ್ಯಂಗಾರ್‌ರನ್ನು ಜರ್ಝರಿಸಿತು. ಮಕ್ಕಳೆಲ್ಲ ಚಿಕ್ಕವರು. ಧೃತಿಗೆಡದೆ ಏಕಾಂಗಿಯಾಗಿ ಸಂಸಾರದ ಎಲ್ಲ ಜವಾಬ್ದಾರಿಯನ್ನು ನಿರ್ವಹಿಸಿ ಈಗ ಇಳಿ ವಯಸ್ಸಿನಲ್ಲಿ

ಕೂಡ ಸ್ವಾವಲಂಬಿಯಾಗಿದ್ದುಕೊಂಡೇ ತಮ್ಮ ಹಿರಿಯರ ಹಳೇ ಮನೆಯಲ್ಲಿಯೇ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಬಲಗಿವಿ ಕೇಳುವುದಿಲ್ಲ. ಮರೆವು ಹೆಚ್ಚಾಗಿದೆ. ಅದಾಗ್ಯೂ ತಾವೇ ಸ್ವತಃ ಅಡುಗೆ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಸಂಜೆ ಹೊತ್ತು ತಮ್ಮ ಕೆಲವೇಕೆಲ ಹಳೆಯ ಸ್ನೇಹಿತರೊಂದಿಗೆ ವಾಯುವಿಹಾರಕ್ಕೆ ಹೋಗಿ ಊರ ಪ್ರವೇಶದಲ್ಲಿರುವ ಗಾಂಧೀ ವೃತ್ತದ ಕಟ್ಟೆಯ ಮೇಲೆ ಕುಳಿತು ಹರಟೆ ಹೊಡೆಯುತ್ತಾರೆ. ಅದೇ ಹೊತ್ತಿಗೆ ಪಶ್ಚಿಮದಲ್ಲಿ ಸೂರ್ಯ ದಿನವೆಲ್ಲಾ ಪ್ರಖರ ಜೀವನ ನಡೆಸಿ ನಂತರ ನಿವೃತ್ತಿಯನ್ನು ಹೊಂದುತ್ತಿರುವನೋ ಎಂಬಂತೆ ಕೆಂಪು ಬಣ್ಣ ತೊಟ್ಟು ಅಸ್ತಂಗತನಾಗುತ್ತಿರುತ್ತಾನೆ. ಕೃಷ್ಣಯ್ಯಂಗಾರ್ ಕುಳಿತು ಮಾತನಾಡುತ್ತಿರುವ ಇಂಥ ವೇಳೆಯಲ್ಲಿ ನಾನು ಅನೇಕ ಸಲ ನೋಡಿದ್ದೇನೆ. ಆಗ ನನ್ನ ಮನಸ್ಸಿಗೆ ಕೃಷ್ಣಯ್ಯಂಗಾರರ ತುಂಬು ಚಟುವಟಿಕೆಯ ಜೀವನ ಮತ್ತು ಈಗ ಬದುಕಿನ ಮುಸ್ಸಂಜೆಯ ಹೊತ್ತು ಎರಡೂ ಒಂದಕ್ಕೊಂದು ಅರ್ಥವನ್ನು ಕೊಡುತ್ತಿರುವಂತೆ ಅನಿಸುತ್ತದೆ. ಟ್ರಸ್ಟ್ ಸ್ಥಾಪನೆಯಾದ ದಿನದಿಂದ ಕೃಷ್ಣಯ್ಯಂಗಾರರ ಒಡನಾಟವಿದೆ. ಆ ಒಡನಾಟಕ್ಕೆ ಈಗ ೫೦ ವರ್ಷ ಆಯಿತು ಎಂದು ಹೇಳಬಹುದು. ಮೊದಲ ಪರಿಚಯವಾದಾಗ ಅವರು ನನ್ನ ಬಗ್ಗೆ ಎಷ್ಟು ಪ್ರೀತಿ ಮತ್ತು ಅಭಿಮಾನ ಬೆಳೆಸಿಕೊಂಡಿದ್ದರೋ ಅಷ್ಟೇ ಪ್ರೀತಿ ಅಭಿಮಾನವನ್ನು ಇಂದಿಗೂ ಇರಿಸಿಕೊಂಡಿದ್ದಾರೆ. ಸೂಕ್ಷ್ಮ ವಿಮರ್ಶಾದೃಷ್ಟಿಯ, ಖಂಡಿತವಾದಿಯಾದ, ಸೂಕ್ಷ್ಮ ಸಂವೇದನಾಶೀಲರಾದ ಕೃಷ್ಣಯ್ಯಂಗಾರ್ ಅಂಥವರು ೫೦ ವರ್ಷಗಳ ನನ್ನ ಸೇವಾ ಜೀವನವನ್ನು ಬಲ್ಲಂಥವರು. ಅಂಥವರು ಇಷ್ಟ ದೀರ್ಘಕಾಲದ ನಂತರವೂ ಅಷ್ಟೇ ಹಸಿರಾಗಿ ಪ್ರೀತಿ ಅಭಿಮಾನ ಇಟ್ಟುಕೊಂಡಿರುವುದು ನನಗೆ ಹೆಮ್ಮೆಯ ವಿಷಯವಾಗಿದೆ. ಅವರ ಕಾರಣದಿಂದ ಪು.ತಿ.ನರಸಿಂಹಾಚಾರರ ಪರಿಚಯವಾದದ್ದು, ಅವರೂ ಸಹ ನನ್ನ ಕೆಲಸದ ಬಗ್ಗೆ ಅಭಿಮಾನ ತೋರಿಸಿದ್ದು ಹೆಮ್ಮೆಯ ವಿಷಯವಾಗಿದೆ. ಇನ್ನೊಂದು ಸ್ಮರಣೀಯ ಸಂಗತಿ ಎಂದರೆ ಕೃಷ್ಣಯ್ಯಂಗಾರ್ ಶ್ರೀರಂಗಪಟ್ಟಣದ ಕಾವೇರಿ ಹೊಳೆ ಪಕ್ಕ ಅಂದಿನ ಕೃಷ್ಣಮೂರ್ತಿ ಬಂಗಲೆ ಅಥವಾ ಸ್ಕಾಟ್ ಬಂಗಲೆಯಲ್ಲಿ ನಡೆದ ನನ್ನ ಮದುವೆಗೂ ಭಾಗವಹಿಸಿದ್ದರೆಂಬುದು ಹೆಮ್ಮೆಯ ವಿಷಯ. ಕೃಷ್ಣಯ್ಯಂಗಾರ್ ಮೇಲುಕೋಟೆ ಮತ್ತು ಸುತ್ತಲಿನ ಗ್ರಾಮಸ್ಥರಿಗೆಲ್ಲ ಕಿಟ್ಟಿ ಎಂದೇ ಆತ್ಮೀಯರಾದವರು. ಈ ಮಾತನೆಲ್ಲಾ ಅವರ ಬಗ್ಗೆ ಹೇಳಲು ಕಾರಣವೇನೆಂದರೆ ಇತ್ತೀಚೆಗೆ ಅವರ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಯ ಉಂಟಾಯಿತು ಎಂದು ಗೊತ್ತಾಯಿತು. ಆದ್ದರಿಂದ ಅವರನ್ನು ಭೇಟಿ ಮಾಡಲು ಹೋಗಿದ್ದೆ. ಆಗ ಅವರು ಪ್ರಸ್ತಾಪಿಸಿದ ಮಾತು ಈ ಎಲ್ಲ ಬರಹಕ್ಕೆ ಕಾರಣ. ಅವರ ಮನೆಯಲ್ಲೊಂದು ಶೌಚಾಲಯವಿದೆ ಅದು ಒಂದು ತೆರನಾದ ಸುಲಭ ಶೌಚಾಲಯ. ೧೯೫೯ರಲ್ಲಿ ಮೇಲುಕೋಟೆಯಲ್ಲಿ ಶೌಚಾಲಯಗಳನ್ನು ನಿರ್ಮಿಸುವ ಒಂದು ಪುಟ್ಟ ಆಂದೋಲನ ಕೈಗೊಳ್ಳಲಾಗಿತ್ತು. ಆಗ ಮೇಲುಕೋಟೆಯಲ್ಲಿ ಯಾವ ಮನೆಯಲ್ಲೂ ವ್ಯವಸ್ಥಿತವಾದ ಶೌಚಾಲಯವಿರಲಿಲ್ಲ. ಆಗ ಕರ್ನಾಟಕ ರಾಜ್ಯ ಗಾಂಧೀ ಸ್ಮಾರಕ ನಿಧಿಯವರು ಗ್ರಾಮಗಳಲ್ಲಿ ಶೌಚಾಲಯಗಳನ್ನು ಕಟ್ಟಿಸುವ ಯೋಜನೆ ಹಾಕಿಕೊಂಡಿದ್ದರು. ಸ್ಮಾರಕನಿಧಿಯೊಂದಿಗಿನ ನನ್ನ ಸಂಪರ್ಕದಿಂದಾಗಿ ಆ ಯೋಜನೆಯನ್ನು ಮೇಲುಕೋಟೆಯಲ್ಲಿಯೂ ಕೈಗೊಳ್ಳಲು ಸಾಧ್ಯವಾಯಿತು. ಹತ್ತಾರು ಕಾರ್ಯಕರ್ತರು ಮೇಲುಕೋಟೆಯಲ್ಲಿ ಕಲ್ಯಾಣಿ ಬೀದಿಯ ಭಕ್ತ ಮಂಡಳಿಯಲ್ಲಿ ಬೀಡು ಬಿಟ್ಟಿದ್ದರು. ಶೌಚಾಲಯಕ್ಕೆ ಅಗತ್ಯವಾದ ಅಚ್ಚುಗಳನ್ನು ಅಲ್ಲಿ ತಯಾರಿಸುತ್ತಿದ್ದರು. ಈ ಆಂದೋಲನದ ನಾಯಕರಾಗಿ ನಿಧಿಯ ಕಾರ್ಯಕರ್ತರಾದ ಪವಾರ್ ಎಂಬುವವರು ಇದ್ದರು. ಅವರು ಮರಾಠಿ ಮಿಶ್ರಿತ ಕನ್ನಡ ಮಾತನಾಡುತ್ತಿದ್ದರು. ಶೌಚಾಲಯಗಳ ನಿರ್ಮಾಣದಲ್ಲಿ ಪ್ರಶಿಕ್ಷಣ ಪಡೆದು ಬಂದಿದ್ದರು.

ಕೇವಲ ಸ್ವಲ್ಪ ಹಣದಲ್ಲಿ ಶೌಚಾಲಯವನ್ನು ಕಟ್ಟಿಸಿಕೊಡಲಾಗುವುದು ಎಂದು

ಗ್ರಾಮಸ್ಥರಿಗೆ ತಿಳಿಸಿದಾಗ ಅನೇಕರು ಈ ವ್ಯವಸ್ಥೆ ಅಳವಡಿಸಿಕೊಳ್ಳಲು ಮುಂದೆ ಬಂದರು. ಆಗ ಸುಮಾರು ಮೂವತ್ತು ನಲವತ್ತು ಮನೆಗಳಲ್ಲಿ ಶೌಚಾಲಯ ನಿರ್ಮಿಸಲಾಯಿತು. ಅವುಗಳೆಲ್ಲವೂ ಇಂದಿಗೂ ಸುಸ್ಥಿತಿಯಲ್ಲಿವೆ ಮತ್ತು ಅವುಗಳನ್ನು ಆ ಮನೆಯವರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ಮಹತ್ವದ ಸಾರ್ವಜನಿಕ ಕೆಲಸ ನಡೆದದ್ದು ಮರೆತು ಹೋಗಿತ್ತು. ಕೃಷ್ಣಯ್ಯಂಗಾರ್‌ರನ್ನು ಭೇಟಿ ಮಾಡಲು ಹೋದಾಗ ಶೌಚಾಲಯದ ವಿಷಯ ಪ್ರಸ್ತಾಪಿಸಿ ಗುಣಗಾನ ಮಾಡಿದರು ಮತ್ತು ಕರ್ನಾಟಕ ಸರ್ವೋದಯ ಮಂಡಲಕ್ಕೆ ಒಂದು ಸಾವಿರ ರೂಪಾಯಿಗಳ ದೇಣಿಗೆ ಕೊಟ್ಟರು. ಜನಪದ ವಿಚಾರದ ನಿಯಮಿತ ಓದುಗರಾದ ಕೃಷ್ಣಯ್ಯಂಗಾರ್ ಭೇಟಿಯಾದಗಲೆಲ್ಲ ಪತ್ರಿಕೆಯ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳದೆ ಇರುವುದಿಲ್ಲ. ನಮ್ಮೆಲ್ಲರ ಕಿಟ್ಟು ನೂರು ವರ್ಷ ಬಾಳಲಿ.

(ಮುಂದುವರಿಯುವುದು...)

* * *

ಪತ್ರಿಕೆಯ ಒಡೆತನ ಮತ್ತು ಇತರ ವಿವರಗಳ ಪ್ರಕಟಣೆ

ಪ್ರಾರೂಪ ೪ [ವಿಧಿ-೮]

೧)	ಪ್ರಕಟಣೆಯ ಸ್ಥಳ	: ಮೇಲುಕೋಟೆ
೨)	ಪ್ರಕಟಣೆಯ ನಿಯತಕಾಲಿಕತೆ	: ತಿಂಗಳಿಗೊಮ್ಮೆ
೩)	ಮುದ್ರಕರ ಹೆಸರು	: ಸಂಕೇತ್ ಮುದ್ರಣ
	ಭಾರತದ ಪ್ರಜೆಯೇ?	: ಹೌದು
	ವಿಳಾಸ	: ಸಂಕೇತ್ ಮುದ್ರಣ ಕಲ್ಯಾಣಿ ಬೀದಿ, ಮೇಲುಕೋಟೆ
೪)	ಪ್ರಕಾಶಕರ ಹೆಸರು	: ಸುರೇಂದ್ರ ಕೌಲಗಿ
	ಭಾರತದ ಪ್ರಜೆಯೇ?	: ಹೌದು
	ವಿಳಾಸ	: ಕಲ್ಯಾಣಿ ಬೀದಿ, ಮೇಲುಕೋಟೆ
೫)	ಗೌ॥ ಪ್ರಧಾನ ಸಂಪಾದಕರ ಹೆಸರು	: ಸುರೇಂದ್ರ ಕೌಲಗಿ
	ಭಾರತದ ಪ್ರಜೆಯೇ?	: ಹೌದು
	ವಿಳಾಸ	: ಕಲ್ಯಾಣಿ ಬೀದಿ, ಮೇಲುಕೋಟೆ

೬) ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಗಳ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳದ ಶೇ. ೧ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರಾದವರ

ಹೆಸರು ಮತ್ತು ವಿಳಾಸ : ಜನಪದ ಸೇವಾ ಟ್ರಸ್ಟ್,
ಮೇಲುಕೋಟೆ-೫೭೧೪೩೧

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು ನಾನು ಸುರೇಂದ್ರ ಕೌಲಗಿ ಘೋಷಿಸುತ್ತೇನೆ.

ದಿನಾಂಕ: ೭-೩-೨೦೧೦
ಮೇಲುಕೋಟೆ-೫೭೧೪೩೧

ಪ್ರಕಾಶಕ(ಸಹಿ)
ಸುರೇಂದ್ರ ಕೌಲಗಿ

ಸರ್ವೋದಯ ಆಂದೋಲನದ ಮುನ್ನಡೆ

(ಗಾಂಧೀಜಿ ಜಗತ್ತಿಗೆ ಕೊಟ್ಟ ಬಹುದೊಡ್ಡ ವಿಚಾರ ಸರ್ವೋದಯ. ಗಾಂಧೀಜಿಯವರ ಜೀವಿತಕಾಲದಿಂದಲೇ ಸರ್ವೋದಯ ಆಂದೋಲನ ನಡೆದುಕೊಂಡು ಬಂದಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಜಗದ ಏಳಿಗೆಯಾಗಬೇಕಾದರೆ ಅದು ಸರ್ವೋದಯದಿಂದಲೇ. ಆ ಆಂದೋಲನದ ಪ್ರಗತಿಯನ್ನು ತಿಳಿಸುವ ಹೊಸ ಅಂಕಣವಿದು.- ಸಂ)

ಕರ್ನಾಟಕದಲ್ಲಿ ಸರ್ವೋದಯ ಆಂದೋಲನದ ಪ್ರಮುಖ ಸಂಘಟನೆ ಕರ್ನಾಟಕ ಸರ್ವೋದಯ ಮಂಡಳ. ಇಂಥ ಸಂಘಟನೆ ದೇಶದ ಎಲ್ಲಾ ರಾಜ್ಯಗಳಲ್ಲೂ ಇದೆ. ರಾಷ್ಟ್ರಮಟ್ಟದಲ್ಲಿ ಸರ್ವಸೇವಾ ಸಂಘ ಎಂಬ ಸಂಘಟನೆ ಇದೆ. ದುರ್ದೈವದಿಂದ ಕರ್ನಾಟಕದಲ್ಲಿ ಹಲವಾರು ಕಾರಣಗಳಿಂದಾಗಿ ಸರ್ವೋದಯ ಮಂಡಲ ದುರ್ಬಲಗೊಂಡಿತ್ತು. ಪರಿಣಾಮವಾಗಿ ರಾಜ್ಯದಲ್ಲಿ ಆಂದೋಲನ ಶಿಥಿಲಗೊಂಡಿತ್ತು. ಈ ಪರಿಸ್ಥಿತಿಯಿಂದ ಬಿಡುಗಡೆ ಹೊಂದಿ ದೇಶದ ಎಲ್ಲ ರಾಜ್ಯಗಳಲ್ಲಿಯಂತೆ ಕರ್ನಾಟಕದಲ್ಲೂ ಸರ್ವೋದಯ ಆಂದೋಲನವನ್ನು ಬಲಪಡಿಸಬೇಕೆಂಬ ಉದ್ದೇಶದಿಂದ ಕಳೆದ ಜನವರಿ ತಿಂಗಳಲ್ಲಿ ಕರ್ನಾಟಕದಲ್ಲಿರುವ ಸರ್ವೋದಯ ಕಾರ್ಯಕರ್ತರೆಲ್ಲ ಹಿರಿಯ ಸರ್ವೋದಯ ನಾಯಕರಾದ ಶ್ರೀ ಹೆಚ್.ಎಸ್.ದೊರೆಸ್ವಾಮಿಯವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಗಾಂಧೀ ಭವನದಲ್ಲಿ ಸಭೆ ಸೇರಿ ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸಿದರು. ಈ ಸಮಿತಿಯಲ್ಲಿ ಹದಿನಾಲ್ಕು ಜನ ಹಿರಿಯ ಸರ್ವೋದಯ ಕಾರ್ಯಕರ್ತರು ಇರುತ್ತಾರೆ. ಪದಾಧಿಕಾರಿಗಳಲ್ಲಿ ಸುರೇಂದ್ರ ಕೌಲಗಿಯವರು ಅಧ್ಯಕ್ಷರು, ಶ್ರೀ ಲ.ನರಸಿಂಹಯ್ಯ-ಕಾರ್ಯದರ್ಶಿ, ಶ್ರೀ ಸಿದ್ಧಾರ್ಥ ಶರ್ಮರವರು ಖಜಾಂಚಿಯಾಗಿದ್ದಾರೆ. ಉಳಿದಂತೆ ಗಾಂಧೀ ಸ್ಮಾರಕನಿಧಿಯ ಅಧ್ಯಕ್ಷರಾದ ಶ್ರೀ ಹೊ.ಶ್ರೀನಿವಾಸಯ್ಯ, ಕಾರ್ಯದರ್ಶಿ ಡಾ.ದಾಸೇಗೌಡ, ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಹುಡೆ ಕೃಷ್ಣ, ಖಾದಿ ಸಂಯುಕ್ತ ಸಂಘದ ಶ್ರೀ ಹುಡೇದ್, ಶ್ರೀ ಅಶ್ವತ್ಥನಾರಾಯಣಗೌಡ, ಶ್ರೀ ಶಿವಾನಂದ, ಶ್ರೀಮತಿ ಲಕ್ಷ್ಮೀ ಸತ್ಯವ್ರತ, ಶ್ರೀ ಎಚ್.ಎಮ್.ಶಿವಣ್ಣ, ಶ್ರೀ ಅರುಣ್, ಶ್ರೀ ಎಂ.ಕೆ.ಸತ್ಯನಾರಾಯಣ ಮತ್ತು ಶ್ರೀ ಎಚ್.ಎಸ್.ದೊರೆಸ್ವಾಮಿ ಸದಸ್ಯರಾಗಿದ್ದಾರೆ.

ಹೊಸ ಸಮಿತಿ ರಚನೆಯಾದ ಮೇಲೆ ಎರಡು ಬಾರಿ ಮಂಡಲದ ಸಭೆ ಸೇರಿ ಆಂದೋಳನವನ್ನು ಬಲಪಡಿಸುವ ಬಗ್ಗೆ ಚರ್ಚಿಸಿತು. ೨೦೧೦-೧೧ನೇ ಸಾಲಿಗೆ ಕೈಗೊಳ್ಳಬಹುದಾದ ಕಾರ್ಯ ಯೋಜನೆಯನ್ನು ರೂಪಿಸಿತು.

ಮುಂದಿನ ಒಂದು ವರ್ಷದ ಕಾರ್ಯಕ್ರಮ

೧. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸರ್ವೋದಯ ಮಂಡಲದ ಶಾಖೆಗಳನ್ನು ರಚಿಸುವುದು.

೨. ಜಿಲ್ಲೆಗಳಲ್ಲಿ ಶಾಖೆಗಳನ್ನು ಪ್ರಾರಂಭಿಸುವುದಕ್ಕೆ ಪೂರ್ವಸಿದ್ಧತೆಯೆಂದು ರಾಜ್ಯದ ವಿವಿಧೆಡೆ ಸರ್ವೋದಯ ವಿಚಾರದ ಅಭಿಮಾನಿಗಳ ಸಮಾವೇಶ ಏರ್ಪಡಿಸುವುದು.

೩. ಇದೇ ವರ್ಷ ಜೂನ್ ಮಾಹೆಯಲ್ಲಿ ಯುವಕರ ಸಮಾವೇಶ ಏರ್ಪಡಿಸುವುದು.

೪. ಯುವಕರನ್ನು ಮತ್ತು ಆಸಕ್ತರನ್ನು ಸರ್ವೋದಯ ಆಂದೋಲನದತ್ತ ಸೆಳೆಯಲು ಸರ್ವೋದಯ ಮಂಡಲದಲ್ಲಿ "ಯುವ ವಿಭಾಗ"ವನ್ನು ಪ್ರಾರಂಭಿಸುವುದು.

೫. ರಾಜ್ಯದ ಖಾದಿ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕವೇರ್ಪಡಿಸುವುದು. ಇದಕ್ಕಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು.

೬. ರೈತ ವಿಭಾಗ, ಮಹಿಳಾ ವಿಭಾಗ, ಆಚಾರ್ಯಕುಲ ವಿಭಾಗ, ಪ್ರಕೃತಿ ಚಿಕಿತ್ಸಾ ವಿಭಾಗ, ಸಾಹಿತ್ಯ ವಿಭಾಗ, ವಿದ್ಯಾರ್ಥಿ ವಿಭಾಗ, ನಿಧಿ ಸಂಗ್ರಹ ವಿಭಾಗ ಇತ್ಯಾದಿ ವಿಭಾಗಗಳನ್ನು ಪ್ರಾರಂಭಿಸಿ ಈ ವಿಭಾಗಗಳ ಸಂಯೋಜಕರನ್ನಾಗಿ ಸರ್ವೋದಯ ಮಂಡಲದ ಪ್ರತಿಯೊಬ್ಬ ಸದಸ್ಯರನ್ನು ನಿಯೋಜಿಸುವುದು.

೭. ಬೆಂಗಳೂರಿನಲ್ಲಿ ಸರ್ವಸೇವಾ ಸಂಘದ ಶಾಖೆಯನ್ನು ಪ್ರಾರಂಭಿಸುವುದು.

೮. ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಚಲಿತ ಜ್ವಲಂತ ಘಟನೆ ಅಥವಾ ಬೆಳವಣಿಗೆಗಳ ಬಗ್ಗೆ ಸರ್ವೋದಯ ಆಂದೋಲನದ ನಿಲುವನ್ನು ಜನತೆಗೆ ಹಾಗೂ ಸರ್ಕಾರಕ್ಕೆ ತಿಳಿಸಲು ಸರ್ವೋದಯ ಮಂಡಲದಲ್ಲಿ ಚಿಕ್ಕ ಉಪಸಮಿತಿಯನ್ನು ರಚಿಸುವುದು, ಹಾಗೂ ಸರ್ವೋದಯ ಮಂಡಲದ ಪರವಾಗಿ ಓರ್ವ ವಕ್ತಾರನನ್ನು ಕಾಲಕಾಲಕ್ಕೆ ನಿಯೋಜಿಸುವುದು.

೯. ಸರ್ವೋದಯ ಮಂಡಲದ ೨೦೧೦-೧೧ ನೇ ಸಾಲಿನ ಅಂದಾಜು ಪತ್ರವನ್ನು ತಯಾರಿಸುವುದು.

ಸರ್ವೋದಯ ಸಮಾಜ ಸಮ್ಮೇಳನ

ಫೆಬ್ರವರಿ ೨೧,೨೨,೨೩ನೇ ದಿನಾಂಕಗಳಲ್ಲಿ ಅಸ್ಸಾಂ ರಾಜ್ಯದ ಗೌಹಾತಿಯಲ್ಲಿ ಅಖಿಲ ಭಾರತ ನಲವತ್ತಮೂರನೇ ಸರ್ವೋದಯ ಸಮಾಜ ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿ ದೇಶದ ಎಲ್ಲ .ರಾಜ್ಯಗಳಿಂದ ಸುಮಾರು ನಾಲ್ಕು ಸಾವಿರ ಸರ್ವೋದಯ ವಿಚಾರ ಪ್ರೇಮಿಗಳು ಸೇರಿದ್ದರು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಹಿರಿಯ ಸರ್ವೋದಯ ನಾಯಕ ಶ್ರೀ ಗೋಪಿನಾಥನ್ ನಾಯರ್ ವಹಿಸಿದ್ದರು. ಉದ್ಘಾಟನೆಯನ್ನು ಹಿಂದಿಯ ಸುಪ್ರಸಿದ್ಧ ಸಾಹಿತಿ ಹಾಗೂ ಜ್ಞಾನಪೀಠ ಪ್ರಶಸ್ತಿ ವಿಜೇತ ಶ್ರೀ ಗಿರಿರಾಜ ಕಿಶೋರ್ ಮಾಡಿದರು. ಸಮ್ಮೇಳನದ ಪ್ರತಿನಿಧಿಗಳನ್ನು ಉದ್ದೇಶಿಸಿ ಅಸ್ಸಾಂ ರಾಜ್ಯದ ಮುಖ್ಯಮಂತ್ರಿ ಶ್ರೀ ತರುಣ್ ಗೊಗ್ಯೆ ಮತ್ತು ರಾಜ್ಯಪಾಲ ಶ್ರೀ ಜಾನಕಿ ವಲ್ಲಭ ಪಟ್ನಾಯಕ್ ಭಾಷಣ ಮಾಡಿದರು. ದೇಶದ ಎಲ್ಲ ರಾಜ್ಯಗಳ ಸರ್ವೋದಯ ಮಂಡಲಿಗಳ ಅಧ್ಯಕ್ಷರು ತಮ್ಮ ರಾಜ್ಯದಲ್ಲಿಯ ಸರ್ವೋದಯ ಆಂದೋಲನ ಕುರಿತಾದ ವರದಿಗಳನ್ನು ಮಂಡಿಸಿದರು.

ಭೂಗ್ರಹಣದ ವಿರುದ್ಧ ಸರ್ವಸೇವಾ ಸಂಘದ ಹೋರಾಟ

ನಿರ್ಮಾ ಕಂಪನಿಯಿಂದ ರೈತರ ಭೂಗ್ರಹಣ

ಗುಜರಾತ್ ರಾಜ್ಯದ ಭಾವನಗರ ಜಿಲ್ಲೆಯ ಮುಹುವಾ ತಾಲ್ಲೂಕಿನ ಹಚ್ಚಹಸಿರಾದ ಹಾಗೂ ಫಲವತ್ತಾದ ಹತ್ತು ಸಾವಿರ ಎಕರೆ ಭೂಮಿಯನ್ನು ನಿರ್ಮಾ ಕಂಪನಿ ಸಿಮೆಂಟ್ ಉದ್ದಿಮೆ ಸ್ಥಾಪಿಸಲು ತನ್ನ ವಶಕ್ಕೆ ತೆಗೆದುಕೊಳ್ಳುತ್ತಿದೆ. ಇದರಿಂದಾಗಿ ಹದಿನೈದು ಹಳ್ಳಿಗಳು ತಮ್ಮ ಭೂಮಿಯನ್ನು ಕಳೆದುಕೊಳ್ಳುತ್ತಿವೆಯಷ್ಟೇ ಅಲ್ಲ, ನಲವತ್ತು ಸಾವಿರ ಜನರ ಜೀವನವನ್ನು ಕಸಿದುಕೊಳ್ಳುತ್ತಿದೆ. ದುರಂತವೇನೆಂದರೆ ಕೆಲವೇ ವರ್ಷಗಳ ಹಿಂದೆ ಗುಜರಾತ್ ಸರ್ಕಾರವು ಈ ಪ್ರದೇಶದಲ್ಲಿ ಅರವತ್ತು ಕೋಟಿ ರುಪಾಯಿ ಖರ್ಚುಮಾಡಿ ನಾಲ್ಕು ಚಿಕ್ಕ ಅಣೆಕಟ್ಟುಗಳನ್ನು ಕಟ್ಟಿ ನೀರಾವರಿ ವ್ಯವಸ್ಥೆ ಮಾಡಿದೆ. ಈಗ ಅದೇ ಜಮೀನನ್ನು ಗುಜರಾತ್ ಸರ್ಕಾರವು ಪಟ್ಟಭದ್ರ ಹಿತಾಸಕ್ತಿಗೆ ಒಳಗಾಗಿ ನಿರ್ಮಾ ಕಂಪನಿಗೆ ವಹಿಸಿಕೊಡುತ್ತಿದೆ. ಈ ಅವ್ಯವಹಾರದ ವಿರುದ್ಧ ಅಲ್ಲಿಯ ಸರ್ವೋದಯ ನಾಯಕರಾದ ಚುನಿಭಾಯ್ ವೈದ್ಯರ ನೇತೃತ್ವದಲ್ಲಿ ಹೋರಾಟ ಪ್ರಾರಂಭವಾಗಿದೆ. ನಿರ್ಮಾ ಕಂಪನಿಯ ಗೂಂಡಾಗಳು ಮತ್ತು ಪೋಲೀಸರು ಅಹಿಂಸಾತ್ಮಕವಾಗಿ ಹೋರಾಟ ನಡೆಸುತ್ತಿರುವ ಚಳವಳಿಗಾರರ ಮೇಲೆ ದಾಳಿ ಮಾಡಿದ್ದಾರೆ. ಮಹಿಳೆಯರೂ ಸೇರಿದಂತೆ ಅನೇಕರಿಗೆ ಗಂಭೀರವಾದ ಗಾಯಗಳಾಗಿವೆ. ಅನೇಕ ಸತ್ಯಾಗ್ರಹಿಗಳು ಕಾರಾಗೃಹದಲ್ಲಿ ಬಂಧಿತರಾಗಿದ್ದಾರೆ. ಆ ಪ್ರದೇಶದ ರೈತರು ನಿರ್ಮಾ ಸಿಮೆಂಟ್ ಕಾರ್ಖಾನೆಗೆ ಮಂಜೂರು ಆಗಿರುವ ಭೂಮಿಯನ್ನು ರದ್ದುಮಾಡಬೇಕೆಂದು ರಾಜ್ಯಪಾಲರಿಗೂ ಹಾಗೂ ಮುಖ್ಯಮಂತ್ರಿಗಳಿಗೂ ಮನವಿ ಸಲ್ಲಿಸಿದ್ದಾರೆ. ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ಈ ಪ್ರದೇಶವು ಎರಡನೆಯ ಸಿಂಗೂರ್ ಆಗುವ ಲಕ್ಷಣಗಳಿವೆ. ರೈತರ ಈ ಹೋರಾಟಕ್ಕೆ ಎಲ್ಲರೂ ತಮ್ಮ ನೈತಿಕ ಬೆಂಬಲ ಸೂಚಿಸಬೇಕೆಂದು ಸರ್ವ ಸೇವಾ ಸಂಘ, ವಾರ್ಧಾ ಅವರು ಪತ್ರಿಕಾ ಪ್ರಕಟಣೆ ಮೂಲಕ ಕೋರಿದ್ದಾರೆ.

ನರೇಂದ್ರ ಮೋದಿಯವರ ಫ್ಯಾಕ್ಸ್ ನಂ – ೦೭೯ ೨೩೨೨೨೧೦೧

ಗುಜರಾತ್ ರಾಜ್ಯಪಾಲರ ಫ್ಯಾಕ್ಸ್ ನಂ – ೦೭೯ ೨೩೨೪೩೧೭೨

ಖಾದಿ ವಿಚಾರ

ಸುಮಾರು ನೂರು ವರ್ಷಗಳ ಹಿಂದೆ ಗಾಂಧೀಜಿಯವರ ಚಿಂತನ, ಪರಿಶ್ರಮ ಮತ್ತು ಪ್ರಯೋಗಗಳ ಮೂಲಕ ಜಗತ್ತಿಗೆ, ಮುಖ್ಯವಾಗಿ ಭಾರತಕ್ಕೆ ಚರಖಾ ಮತ್ತು ಖಾದಿಯ ಪರಿಚಯವಾಯಿತು. ಅಂದಿನಿಂದ ಅದು ಪ್ರವರ್ಧಮಾನವಾಗುತ್ತ ಬಂದಿದೆ. ಇಂದು ದೇಶದ ತುಂಬ ಸಾವಿರಾರು ಖಾದಿ ಸಂಸ್ಥೆಗಳು ಹಾಗೂ ಲಕ್ಷಾವಧಿ ಕೆಲಸಗಾರರು ಖಾದಿ ಉದ್ಯಮದಲ್ಲಿ ತೊಡಗಿದ್ದಾರೆ. ಇಂದಿನ ಆಧುನಿಕತೆಯ ಯುಗದಲ್ಲಿ ಖಾದಿ ಕೇವಲ ಬಟ್ಟೆಯಾಗಿರದೆ ಒಂದು ವಿಚಾರ, ಒಂದು ಜೀವನಶೈಲಿಯಾಗಿ ಹೊರಹೊಮ್ಮಿದೆ. ನೂರೈವತ್ತು ವರ್ಷಗಳಷ್ಟು ದೀರ್ಘ ಇತಿಹಾಸವಿರುವ ಖಾದಿ ಕ್ಷೇತ್ರದಲ್ಲಿಯ ಬೆಳವಣಿಗೆಗಳನ್ನು ಮತ್ತು ಆಗುಹೋಗುಗಳನ್ನು ಆಸಕ್ತರೆಲ್ಲರಿಗೆ ತಿಳಿಸುವ

ಉದ್ದೇಶದಿಂದ ಈ ಅಂಕಣವನ್ನು ಪ್ರಾರಂಭಿಸಲಾಗಿದೆ. ಈ ಅಂಕಣದ ಪ್ರಾರಂಭ ಖಾದಿ ಉತ್ಪಾದನೆಯ ಸಾಧನವಾದ ಚರಖಾವನ್ನು ಕುರಿತು ಗಾಂಧೀಜಿಯವರು ಹೇಳಿದ ಎರಡು ಮಾತುಗಳಿಂದ ಪ್ರಾರಂಭಿಸಲಾಗುತ್ತಿದೆ. ಮುಂದೆ ಹೊಸ ಹೊಸ ವಿಚಾರಗಳನ್ನು ಪ್ರಕಟಿಸಲಾಗುವುದು.

ಚರಖಾದಲ್ಲಿ ಉದಾತ್ತ ಭಾವನೆ

ಚರಖಾದಿಂದ ಭಾರತದ ಸಂಕಟ ದೂರವಾಗುವುದು, ಹಸಿದವರಿಗೆ ಅನ್ನ ದೊರೆಯುವುದು, ಸ್ತ್ರೀಯರ ಮರ್ಯಾದೆ ಉಳಿಯುವುದು, ಸೋಮಾರಿಗಳ ಆಲಸ್ಯ ದೂರವಾಗುವುದು, ಸ್ವರಾಜ್ಯವಾದಿಗಳಿಗೆ ಸ್ವರಾಜ್ಯ ಪ್ರಾಪ್ತವಾಗುವುದು. ಸಂಯಮ ಪಾಲಿಸುವವರಿಗೆ ಆಸರೆ ಸಿಗುವುದು. ಈ ಪವಿತ್ರ ಭಾವನೆ ಚರಖದೊಂದಿಗೆ ಸೇರಿಕೊಂಡಾಗ ನೂಲಿನ ಮೇಲೆ ಭಗವಂತ ಕುಣಿಯಲಾರಂಭಿಸುವನು ಮತ್ತು ನನ್ನ ಹಿರಿಯ ಮಿತ್ರರಿಗೆ ಚರಖಾ ನಡೆಸುವಾಗ ಭಗವಂತನ ದರ್ಶನವೂ ಆಗುವುದು. ಅವರವರ ಭಾವಕ್ಕೆ ತಕ್ಕಫಲ ದೊರೆಯುವುದು.

–ಗಾಂಧೀಜಿ, ನವಜೀವನ, ೨-೬-೧೯೨೪

ಚರಖದ ಸಂದೇಶ

ಚರಖದ ಸಂದೇಶ ಅದರ ಪರಿಧಿಗಿಂತ ವ್ಯಾಪಕವಾಗಿದೆ. ಅದರ ಸಂದೇಶ ಸರಳತೆ, ಮಾನವಕುಲದ ಸೇವೆ, ಪರರಿಗೆ ಕಷ್ಟವಾಗದ ರೀತಿ ಜೀವನ ನಡೆಸುವುದು. ಶ್ರೀಮಂತ ಮತ್ತು ಬಡವ, ಬಂಡವಾಳ ಮತ್ತು ಶ್ರಮ ಹಾಗು ರಾಜಾ ಮತ್ತು ಪ್ರಜೆಗಳ ಮಧ್ಯೆ ಮುರಿಯಲಾರದ ಸಂಬಂಧಗಳನ್ನು ಸ್ಥಾಪಿಸುವುದು. ಭಾರತ ಮತ್ತು ವಿಶ್ವದ ಪ್ರಾಣ ಚರಖಾದಲ್ಲಿಯೇ ನಿಹಿತವಾಗಿದೆ. ಒಂದು ವೇಳೆ ಭಾರತ ಯಂತ್ರಗಳ ಗುಲಾಮನಾದರೆ, ಜಗತ್ತನ್ನು ದೇವರೇ ಕಾಪಾಡಬೇಕು. ಅತ್ಯಂತ ಸರಳ ಜೀವನದ ಕಡೆಗೆ ತಿರುಗದಿದ್ದರೆ. ಪಶುಗಳಿಗಿಂತ ಹೀನ ಸ್ಥಿತಿಗೆ ತಲುಪುವಂಥ ಅಧಃಪತನವಾಗುವುದು.

ಎಲ್ಲರ ರಕ್ಷಕ

ಯಾವ ರೀತಿ-ಚರಖಾ ಭಾರತಕ್ಕೆ ಸುಖಶಾಂತಿಯನ್ನು ಕೊಡುತ್ತಿದೆಯೋ ಬಹುಶಃ ನಾಳೆ ಜಗತ್ತಿಗೂ ಕೊಡಬಹುದು. ಏಕೆಂದರೆ ಚರಖಾ ಅಧಿಕತಮ ಜನರಿಗೆ ಅಧಿಕತಮ ಒಳ್ಳೆಯದನ್ನು ಮಾಡದೆ ಎಲ್ಲ ಜನರ ಅಧಿಕತಮ ಒಳ್ಳೆಯದನ್ನು ಸಾಧಿಸುವುದು. ಎಲ್ಲರಿಗೂ ವಿಕಾಸದ ಸಮಾನ ಅವಕಾಶ ದೊರೆಯಬೇಕು. ಅವಕಾಶ ಸಿಕ್ಕರೆ ಪ್ರತ್ಯೇಕ ವ್ಯಕ್ತಿಗೂ ಆಧ್ಯಾತ್ಮಿಕ ವಿಕಾಸಕ್ಕೆ ಒಂದೇ ರೀತಿಯ ಸಾಧ್ಯತೆ ಇದೆ. ಚರಖಾ ಈ ಭಾವನೆಯ ಪ್ರತೀಕವಾಗಿದೆ.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಕೆ.ಎನ್.ಅರುಣ್; ಶ್ರೀ ವಿ.ಆರ್.ಕಟ್ಟಿ; – ಬೆಂಗಳೂರು
ಶ್ರೀ ಎಚ್.ಎಲ್.ಎನ್.ಶಾಸ್ತ್ರಿ – ಮೈಸೂರು
ಶ್ರೀ ನಾ.ಸು.ನಾಗೇಶ್ – ನಾಗಮಂಗಲ
ಶ್ರೀ ಬಿಸಪ್ಪಗೌಡರು – ಕೋಲಾರ
ಖಾದಿ ಮತ್ತು ಗ್ರಾಮೋದ್ಯೋಗ ಸಹಕಾರ ಸಂಘ – ಹೊಳೆನರಸೀಪುರ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಆರ್.ಯೋಗಾನರಸಿಂಹರಾವ್ – ಬೆಂಗಳೂರು
ಶ್ರೀಮತಿ ರಾಧಾ ಶ್ರೀರಾಮ್ – ಚನ್ನೈ
ಶ್ರೀ ಎಚ್.ಕೆ.ರಂಗಾಚಾರ್ – ಚನ್ನಪಟ್ಟಣ
ಶ್ರೀ ಕೆ.ಜಿ.ನಾಗರಾಜ್ – ಕೊಡಗಳ್ಳಿ

ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.